(SRI H. M. CHANNABASAPPA)

1 Lift irrigation scheme near Bardur.
2 Lift irrigation scheme near Mundanadu
3 Lift Irrigation scheme near Yaralapur
4 Lift Irrigation scheme near Kallur.

## Tourists International in Bangalore

200. Sri DODDATHIMMAIAH (Gulur).—

Will the Minister for Labour be pleased to state :—

(*a*) whether the Government of India has come forward to give financial assistance to open a Tourists International in Bangalore;

(*b*) if so, the action the Government has taken to make use of the finance for the said purpose ?

Sri AZEEZ SAIT (Minister for Labour).—

(*a*) No.

(*b*) Does not arise in view of reply to clause (*a*).

## Calling Attention to Matters of Urgent Public Importance

*re*: **Acute problems faced by handloom weavers in Bidar, Bijapur, Gulbarga, Dharwar and Belgaum.**

ಅಧ್ಯಕ್ಷರು.—ಈಗ ಗಮನ ಸೆಳೆಯುವ ಸೂಚನೆ ತೆಗೆದುಕೊಳ್ಳೋಣ.

ಶ್ರೀ ಬಿ. ಜಿ. ಬಣಕಾರ (ಹಿರೇಕೆರೂರು).—ಬೀದರ, ವಿಜಾಪುರ, ಗುಲ್ಬರ್ಗ, ಧಾರವಾಡ ಹಾಗೂ ಬೆಳಗಾಂವಿ ಜಿಲ್ಲೆಗಳಲ್ಲಿನ ಕೈಮಗ್ಗದ ನೇಕಾರರು ಎದುರಿಸುತ್ತಿರುವ ತೀವ್ರ ಸಮಸ್ಯೆಗಳ ವಿಚಾರದ ಬಗ್ಗೆ ನಾನು ಕೈಗಾರಿಕಾ ಮಂತ್ರಿಗಳ ಗಮನ ಸೆಳೆಯುತ್ತೇನೆ.

Sri P. M. BANGI (Jamakhandi).—I call the attention to the same subject.

Sri G. P. NANJAYYANMATH (Guledgud).—I beg to call the attention of the Hon. Minister of Industries *re*: relief to Weavers in Bidar, Bijapur, Belgaum and Dharwar Districts.

Sri S. M. KRISHNA (Minister for Industries) :—I state as follows:

In order to give immediate relief to the handloom weavers in drought affected areas, Government have sanctioned a scheme for a total sum of Rs. 5[illegible] lakhs, and out of this Rs. 41.[illegible] lakhs are for the purchase of yarn to be distributed through seven Government yarn

depots established in the drought affected districts, Rs. 10 lakhs for giving pledge loan to the handloom weavers and Rs. 3.50 lakhs towards recurring expenditure of the Government yarn depots. Seven Government yarn depots have already been opened and arrangements are made to purchase and supply the yarn, to the handloom weavers in those areas on production of identity cards. The Textiles Commissioner, Bombay has also been moved to allot more yarn to meet the demand of the handloom weavers in the drought affected areas. The Textile Commissioner, Bombay is now alloting 1.88 lakh Kgs. of yarn of different counts to this State every month and he has been requested to allot additional quota of of two lakh Kgs. of yarn per month to meet the urgent need of the handloom weavers.

In order to give further relief to the handloom weavers in these areas, it is proposed to establish 15 Relief Centre to provide employment to handloom weavers in the following places :—

| *District* : | *Place* : |
|---|---|
| Bijapur | (1) Banhatti, (2) Ilkal, (3) Guledgud, (4) Chadchan. |
| Gulbarga | (1) Aland, (2) Gurmitkal, (3) Shahpur. |
| Bidar | (1) Basavakalyan, (2) Chitaguppa, |
| Belgaum | (1) Ramdurg, (2) Gokak. |
| Raichur | (1) Lhotihal. |
| Dharwar | (1) Gadag Betgeri, (2) Gajendragad, (3) Ranebennur. |

In the scheme, it is proposed to employ 100 handloom weavers at each centre and give them necessary yarn for production of handloom fabrics. It is also proposed to purchase handloom fabrics produced by these weavers and arrange sale through Government or Co-operative agencies, the weavers being paid wages. In all, 1,500 weavers' families would be benefited by the scheme. The total cost of the scheme is estimated to be about Rs. 75 lakhs. This scheme will continue for six months in the first instance, by which time it is expected that the normal conditions would be restored.

A Meeting of the representatives of Textile Mills including Cooperative Spinning Mills in Mysore State was held here to-day the 19th February and the Mills have assured to supply yarn of 40, 60 and 80 counts to the State Government out of free sale quota to the extent of about 750 bales per month. The cooperative spinning mills have agreed to supply the entire quantity of production of yarn of 40 counts to the State Government. The yarn would be made available at the average rate prevailing during the month of January, 1973.

ಶ್ರೀ ಪಿ. ಎಂ. ಭಂಗಿ.—ಬಿಜಾಪುರ ಜಿಲ್ಲೆಯಲ್ಲಿ 37 ಸಾವಿರ ಮಗ್ಗಗಳಿವೆ, ಅವುಗಳಿಗ ಸಂಬಂಧಪಟ್ಟ ನೇಕಾರರಿಗೆ ಯಾವುದೇ ಪರಿಹಾರವಿಲ್ಲದೆ ತೊಂದರೆಯಾಗಿದೆ. ಆ ಬಗ್ಗೆ ಸರಿಯಾದ ವ್ಯವಸ್ಥೆ ಮಾಡಿಲ್ಲ. ಈಗ ನೂಲನ್ನು ಒಂದು ತಂಡಕ್ಕೆ 5 ಪೌಂಡಿನಂತೆ ಕೊಡುತ್ತಿದ್ದಾರೆ, ಅದು ಎರಡು ದಿವಸಕ್ಕೆ ಕೂಡ ಸಾಲುವುದಿಲ್ಲ. ಅವರು ಅನ್ನವಿಲದೆ ಭಿಕ್ಕೆ ಬೇಡಲು ಹೊರಟಿದ್ದಾರೆ, ಈ ಸಮಯದಲ್ಲಿ ಅವರಿಗೆ ಅನ್ನಛತ್ರವನ್ನಾದರೂ ಸರಕಾರದ ಪರವಾಗಿ ಏರ್ಪಡಿಸಿದರೆ ಉತ್ತಮ. ಬನಹಟ್ಟಿಯಲ್ಲಿ ಅನ್ನಸತ್ಯಾಗ್ರಹ ಮಾಡಿದರು, ಮೋಟಾರು ವಾಹನಗಳನ್ನು ಮತ್ತು ಸೈಕಲ್ಲುಗಳನ್ನು ತಡೆಯುತ್ತಿದ್ದಾರೆ. ಕಾಂಗ್ರೆಸ್ ಕಾರ್ಯಕರ್ತರಿಗೆ ತೊಂದರೆಮಾಡುತ್ತಿದ್ದಾರೆ. ಇದನ್ನು ಗಮನಿಸಿ ನೇಕಾರರಿಗೆ ಸರಿಯಾದ ಪರಿಹಾರ ದೊರಿಕಿಸಿಕೊಡಬೇಕಾಗಿ ಪ್ರಾರ್ಥಿಸುತ್ತೇನೆ.

2.00 P.M.

ಶ್ರೀ ಜಿ. ಪಿ. ಸಂಜಯ್ಯನಮಠ್.—ಸನ್ಮಾನ್ಯ ಅಧ್ಯಕ್ಷರೇ, ತಮ್ಮ ಮುಖಾಂತರ ಉದ್ಯೋಗ ಮಂತ್ರಿಗಳಿಗೆ ಹೀಗೆ ಭಿನ್ನವಿಸುತ್ತೇನೆ. ಮೊನ್ನೆ ಇಳಕಲ್ ಜನಗಳ ಪರಿಸ್ಥಿತಿಯ ಬಗ್ಗೆ ನಮಗೆ ತಾರು ಗಳು ಬರುತ್ತಿವೆ ಎಂದು ತೋರಿಸಿದೆ. ಅವರಿಗೆ ಏನಾದರೂ ಒಂದು ದಾರಿ ಮಾಡಿ, ಹಸಿದ ಮನುಷ್ಯ ಹುಲಿಯಂತೆ, ನಾವು ಅವರಿಂದ ತಪ್ಪಿಸಿಕೊಂಡು ಬಂದುದ್ದಾಗಿದೆ. ಅಧ್ಯಕ್ಷರೇ, ತಾವು ಹುನಗುಂದ ತಾಲ್ಲೂಕಿಗೆ ಭೇಟಿ ಕೊಟ್ಟಾಗ ತಮ್ಮಲ್ಲಿಯೂ ಕೂಡ ಪ್ರಾರ್ಥನೆ ಮಾಡಿಕೊಂಡೆವು. ಡ್ರಾಟ್ ಅಫೆಕ್ಟೆಡ್ ಏರಿಯಾದ ಪರಿಸ್ಥಿತಿ ನೋಡಿದಾಗ, ಅದರ ಬಗ್ಗೆ ವಿಚಾರ ಮಾಡುವಾಗ ಅಲ್ಲಿಯ ಜನರು ಬರಗಾಲದ ದವಡೆಗೆ ಸಿಕ್ಕಿ ಅರು ಇದಕ್ಕಿಂತಲೂ ಹೆಚ್ಚು ಸಂಕಷ್ಟ ಸ್ಥಿತಿಯಲ್ಲಿದ್ದು, ಕೆಲಸ ಮಾಡಲು ಉದ್ಯೋಗ ವಿಲ್ಲದೆ, ಕೂಳು ಇಲ್ಲದೆ, ಮೊದಲು ಮಾಡಿದಂಥ ಉದ್ಯೋಗವನ್ನು ಮಾಡುವುದಕ್ಕೆ ಇವರು ಸಾಧ್ಯ ವಿಲ್ಲದಂತಾಗಿದೆ. ನೇಕಾರರ ಜನಾಂಗದ ಬಗ್ಗೆ ವಿಶೇಷಲಕ್ಷ್ಯ ಕೊಡಬೇಕು. ಸರ್ಕಾರಕ್ಕೆ ಲಕ್ಷಾನು ಆದರೂ ಚಿಂತೆಯಿಲ್ಲ. ಬರಗಾಲದ ಪರಿಸ್ಥಿತಿಯಲ್ಲಿ ಕೋಟಿ ಕೋಟಿ ರೂಪಾಯ ಖರ್ಚು ಮಾಡಿರುವಾಗ, ಎರಡು ಕೋಟಿ ರೂಪಾಯಿಗಳನ್ನಾದರೂ ಇವರ ಪರಿಸ್ಥಿತಿ ಸುಧಾರಣೆ ಆಗುವವರೆಗೆ, ಯಾವುದೇ ರೂಪದಲ್ಲಿ ನೂಲು ಹೆಚ್ಚು ಕೊಡಲಿಕ್ಕೆ ಆಗ್ಗದ ದರದಲ್ಲಿ ಕೊಡಲಿಕ್ಕೆ, ಮಾಲನ್ನು ಖರೀದಿಗೆ ಕೊಡಲಿಕ್ಕೆ, ಆನ್ನದ ಸೆಂಟರ್‌ಗಳನ್ನು ಓಪನ್ ಮಾಡಲಿಕ್ಕೆ ವಿಶೇಷ ಅಧಿಕಾರಿ ಗಳನ್ನು ಬರಗಾಲದಲ್ಲಿ ಹೇಗೆ ನೇಮಿಸಿದ್ದೀರೋ ಹಾಗೆ ನೇಕಾರರ ಪರಿಸ್ಥಿತಿಯನ್ನು ಶಾಶ್ವತವಾಗಿ ಪರಿಹಾರ ಮಾಡಬೇಕು. ತುತ್ತಿಗಾಗಿ ಹೊಟ್ಟೆ ಹಸಿದಾಗ ಮಕ್ಕಳಿಗೆ ಊಟವಿಲ್ಲ. ಅವರು ಮನೆ ಯಲ್ಲಿ ಕುಳಿತುಕೊಳ್ಳುವ ಪರಿಸ್ಥಿತಿ ಇಲ್ಲ. ಅವರು ಕಣ್ಣೀರು ಸುರಿಸುವ ಪರಿಸ್ಥಿತಿ ಬಂದಿದೆ. ಆದ್ದ ರಿಂದ ನಾನು ತಮ್ಮ ಮುಖಾಂತರ ಸರ್ಕಾರಕ್ಕಾಗಲೀ ಮಾನ್ಯ ಮಂತ್ರಿಗಳಿಗಾಗಲೀ ವಿನಂತಿಮಾಡಿ ಕೊಳ್ಳುತ್ತೇನೆ, ಏಕೆಂದರೆ ನಾವು ಅಲ್ಲಿಂದ ಆರಿಸಿ ಬಂದಂಥ ಜನ, ಬಿಜಾಪುರ ಜಿಲ್ಲೆಯಲ್ಲಿ 37 ಸಾವಿರ ಮಗ್ಗಗಳು ಇವೆ, ಅವುಗಳ ಮೇಲೆ ಅವಲಂಬಿಸಿರುವ ಜನ ಎರಡೂವರೆ ಲಕ್ಷ ಇದ್ದಾರೆ. ಇದು ಸಣ್ಣ ಜನಾಂಗ ಅಲ್ಲ. ಇವರ ಬಗ್ಗೆ ನಾವು ಎಷ್ಟೋ ಸಾರಿ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ, ಅಲ್ಲಿಯ ಜನರಿಂದ ಬಂದಂಥ ತಂತಿಗಳನ್ನು ಅವರಿಗೆ ಕೊಟ್ಟಿದ್ದೇವೆ: ಮಾನ್ಯ ಮುಖ್ಯಮಂತ್ರಿಗಳಿಗೆ ಇವರ ಬಗ್ಗೆ ವಿಶೇಷ ಸಹಾನುಭೂತಿ ಇದೆ, ಅವರು ಕೂಡ ವಿಚಾರ ಮಾಡಲಿಕ್ಕೆ ಹತ್ತಿದ್ದಾರೆ. ಇದನ್ನು ಸ್ಪೆಷರ್ ಕೇಸ್ ಎಂದು ತಿಳಿದುಕೊಂಡು ರಾಜ್ಯ ಸರ್ಕಾರದವರು ತನ್ನಕ್ಕೆಲಾದ ಮಟ್ಟಿಗೆ, ಕೇಂದ್ರ ಸರ್ಕಾರಕ್ಕೆ ಒತ್ತಾಯಮಾಡಿ ಬಡ ನೇಕಾರರಿಗೆ ಸಹಾಯ ಮಾಡಬೇಕೆಂದು ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ. ಕೇವಲ ಭಾಷಣದಲ್ಲಿ ಅಂತಃಕರಣ ಬಂದಂತೆ ಮಾಡುವುದುಬೇಡ, ಅವರಿಗೆ ಪೂರ್ಣ ರಕ್ಷಣೆ ಮಾಡಬೇಕು.

Sri D. B. KALMANKAR (Aland).—In Gulbarga District there are about 65,000 weavers and there are 11,000 looms. So far, yarn of 40, 60 and 80 counts has not been provided to Gurmutkal depot and the condition of these people is very precarious. I admit that the Government may require some time to make the necessary arrangments but the question is whether the Government will consider to start ganji kendras entirely at the cost of the Government to see that these families are saved and that they get employment also in due course.

ಶ್ರೀ ಜಿ. ಎಲ್. ಕಬಾಡಿ.—ಇಂಡಿ ತಾಲ್ಲೂಕು ಚಡಚಡ ದಲ್ಲಿ ಒಂದು ಡಿಪೋ ತೆಗೆದಿದ್ದೇವೆ ಎಂದು ತಾವು ಹೇಳಿದಿರಿ, ಇಲ್ಲಿಯ ತನಕ ಒಂದು ಡಿಪೋ ಕೂಡ ಅಲ್ಲಿ ತೆಗೆದಿಲ್ಲ. ಈ ವಿಷಯವನ್ನು

ಮೇಲಿಂದಮೇಲೆ ಸರ್ಕಾರಕ್ಕೆ ಒತ್ತಾಯ ಮಾಡಿ ಹೇಳುತ್ತಾ ಬಂದಿದ್ದೇವೆ. ರಿಲೀಫ್ ಸೆಂಟರುಗಳನ್ನು ತೆಗೆದಿದ್ದೇವೆಂದು ಇವತ್ತು ಹೇಳುತಿದ್ದಾರೆ. ಈಗ ಇರುವ ಪರಿಸ್ಥಿತಿಯನ್ನು ನೋಡಿದರೆ, ಮಾನ್ಯ ಸದಸ್ಯರಾದ ಕಲ್ಯಾಣಕರ್ ಮತ್ತು ಭಂಗಿಯವರು ಹೇಳಿದ ಹಾಗೆ ನೇಕಾರರು ಏನು ಮಾಡಬೇಕು ಎನ್ನುವುದು ತಿಳಿಯದಾಗಿದೆ. ಮೊನ್ನೆ ಇಳಕಲ್‌ನಲ್ಲಿ ಇಂಡಸ್ಟ್ರಿಯಲ್ ಬ್ಯಾಂಕ್ ಚೇರ್ಮನ್ ಮೆಂಬರುಗಳು ಉಪವಾಸ ಕೂಡಿನುವ ಪ್ರಸಂಗ ಬಂತು, ಅವರೂ ಕೂಡ ನಾಲ್ಕು ತಾಸು ಉಪವಾಸ ಮಾಡಿದರು. ಈ ತರಹ ಸಮಸ್ಯೆ ಉದ್ಭವವಾಗಿರುವಾಗ, ನಮ್ಮ ಸರ್ಕಾರ ಈ ರೀತಿ ವೀವರ್ಸ್ ನಲುವಾಗಿ ಅನ್ಯಾಯ ಮಾಡಿದರೆ ನಾವು ಸಹನೆಯಿಂದಿರುವುದಕ್ಕಾಗುವುದಿಲ್ಲ. ದಯ ಬಿಟ್ಟು ಇದನ್ನು ವಾರ್ ಫುಟಿಂಗ್ ಬೇಸಿಸ್ ಮೇಲೆ ನಾಲ್ಕೈದು ದಿವಸದಲ್ಲಿ ಮಾಡಿದರೆ ಸರಿ ಹೋದೀತು ಇಲ್ಲದಿದ್ದರೆ ಕ್ರಾಂತಿ ಆದೀತು ಎಂದು ಎಚ್ಚರಿಕೆ ಮಾತನ್ನು ಹೇಳುತ್ತಿದ್ದೇನೆ.

ಶ್ರೀ ಆರ್. ಎಸ್. ಪಾಟೀಲ್.—ರಾಮದುರ್ಗ ತಾಲ್ಲೂಕಿನಲ್ಲಿ 20ಸಾವಿರ ನೇಕಾರರು ಇದ್ದಾರೆ. ಮಾನ್ಯ ನಂಜಯ್ಯನವರು ಮತ್ತು ಭಂಗಿಯವರು ತಮ್ಮ ತಾಲ್ಲೂಕುಗಳಲ್ಲಿ ಏನು ಪರಿಸ್ಥಿತಿ ಇದೆಯೆಂದು ಹೇಳಿದರೋ ಅಂಥ ಪರಿಸ್ಥಿತಿ ನನ್ನ ತಾಲ್ಲೂಕಿನಲ್ಲಿಯೂ ಕೂಡ ಇದೆ. ರಾಜ್ಯದಲ್ಲಿ ಏಳು ಕೇಂದ್ರಗಳನ್ನು ತೆಗೆದಿದ್ದಾರೆ. ರಾಮದುರ್ಗದ ನೇಕಾರರಿಗೆ ಬೇಕಾಗಿರುವುದು 40 ಕೌಂಟು ನೂಲು. ಒಮ್ಮೆ ಹಂಚಿದ್ದು 60 ಕೌಂಟಿನದು, ಅದು ಕೂಡ ಅಲ್ಲಗೆ ಬಂದಿಲ್ಲ. ರಾಮದುರ್ಗ, ಸುರೇಬಾನ್, ಹುಲುಕೋಟಿ ಮುಂತಾದ ಸ್ಥಳಗಳಲ್ಲಿ ನೇಕಾರರು ಇದ್ದಾರೆ. ಇವರಿಗೆ ಬೇಕಾಗಿರತಕ್ಕದ್ದು 40 ಕೌಂಟಿನ ನೂಲು. ಈಗ ರಿಲೀಫ್ ಸ್ಕೀಂನಲ್ಲಿ, ನೂಲು ಸೆಂಟರುಗಳನ್ನು ತೆಗೆದಿದ್ದಾರೆ. ಅದರಲ್ಲಿ ನೂರು ಜನಕ್ಕೆ ಉದ್ಯೋಗ ಕಲ್ಪಿಸಿಕೊಟ್ಟಿದ್ದಾರೆ ಇತರ ಗ್ರಾಮಾಂತರ ಪ್ರದೇಶಗಳಲ್ಲಿ ಇರತಕ್ಕವರು ಯಾವ ತರಹ ಪರಿಹಾರ ಪಡೆಯುತ್ತಾರೆ? ರಾಮದುರ್ಗ ಒಂದೇ ಟೌನ್‌ನಲ್ಲಿ ಐದು ಸಾವಿರ ನೇಕಾರರು- ಮೂರು ಸಾವಿರ ಮಗ್ಗಗಳು ಇವೆ. ಇವರಲ್ಲಿ 100 ಜನರನ್ನು ಯಾವರೀತಿ ಆರಿಸಬೇಕು, ಹೇಗೆ ತಾವು ಕೊಟ್ಟ ನೂಲನ್ನು ಹಂಚಬೇಕು ಎತ್ತ ಕಡೆ ಅವರನ್ನು ಕಳುಹಿಸಬೇಕು ಏನ್ನುವುದು ಸಮಸ್ಯೆಯಾಗಿದೆ. 40 ಕೌಂಟು ನೂಲನ್ನು ಇಡೀ ತಾಲ್ಲೂಕಿನಲ್ಲಿ ಎಲ್ಲಾ ನೌಕರರಿಗೆ ದೊರಕುವ ವ್ಯವಸ್ಥೆಯನ್ನು ಮಾಡಬೇಕು. ಗ್ರಾಮಾಂತರ ಪ್ರದೇಶದಲ್ಲಿರತಕ್ಕಂಥ ಜನರನ್ನು ಆಲಕ್ಷ್ಯ ಮಾಡಬಾರದು, ಈ ನೂರು ಜನರಿಗೆ ಉದ್ಯೋಗ ಅವಕಾಶ ಒದಗಿಸುವ ಕಾಲಕ್ಕೆ ಇನ್ನೂ ನೂರು ಹೆಚ್ಚು ಉದ್ಯೋಗಾವಕಾಶಗಳನ್ನ ಒದಗಿಸಬೇಕು ಎಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಎಂ. ಕೃಷ್ಣ.—ಮಾನ್ಯ ಅಧ್ಯಕ್ಷರೇ, ಸರ್ಕಾರ ನೇಕಾರರ ಸಮಸ್ಯೆಯ ತೀವ್ರತೆಯನ್ನು ಸಂಪೂರ್ಣವಾಗಿ ಅರಿತಿದೆ. ಈ ತೀವ್ರತೆಯ ಬಗ್ಗೆ ಮಾನ್ಯ ಸದಸ್ಯರಾದ ನಂಜಯ್ಯನವರು ಮತ್ತು ಭಂಗಿಯವರು ಪ್ರಸ್ತಾಪಿಸಿದ್ದಾರೆ. ಆದರೆ ಮನ್ನು ಚಿತ್ರವನ್ನು ನಮ್ಮ ಗಮನದಲ್ಲಿಟ್ಟು ಕೊಳ್ಳದೆ ಪರಿಸ್ಥಿತಿಯ ಅರಿವು ಸರ್ಕಾರಕ್ಕೆ ಸಂಪೂರ್ಣವಾಗಿ ಆಗಿಲ್ಲ ಎಂದು ಹೇಳಿದರು. ಆದರೆ ಸರ್ಕಾರಕ್ಕೆ ಬಂದಿರತಕ್ಕ ದೊಡ್ಡ ತೊಂದರೆ ಏನೆಂದರೆ ದೇಶದಲ್ಲಿ ಸಾಕಷ್ಟು ನೂಲು ಸಿಕ್ಕುತ್ತಿಲ್ಲ. ನಮಗೆ ನೂಲು ಸಿಕ್ಕಿದರೆ ಅದನ್ನು ಆ ನೂಲನ್ನು ರಬಕವಿ, ಬನಹಟ್ಟಿ, ಮುದ್ದೇಬಿಹಾಳ್ ಮುಂತಾದ ಸ್ಥಳಗಳಿಗೆ ಹಂಚಬಹುದಿತ್ತು. ಇವತ್ತು, ನೂಲಿನ ತೊಂದರೆಯಾಗಿ, ಪ್ರಧಾನ ಉತ್ಪಾದನೆ ಮಾಡುವ ಮಿಲ್ಲುಗಳು ವಿದ್ಯುಚ್ಛಕ್ತಿ 75ರಷ್ಟು ಜೋತ ಮಾಡಿದ್ದರಿಂದ ಕೊಯಂಬತ್ತೂರು ಮತ್ತು ಸೇಲಂನಲ್ಲಿ ಬಹುತೇಕ ಮಿಲ್ಲುಗಳು ಕೆಲಸ ಮಾಡದೆ ಇರುವ ಪರಿಸ್ಥಿತಿ ಉದ್ಭವವಾಗಿದೆ. ಮುಂದೆ ಬರತಕ್ಕ ತೊಂದರೆಗಳಲ್ಲಿ ಈ ಕ್ಲಿಷ್ಟವಾದಂಥ ಸಮಸ್ಯೆಯನ್ನು ಕೇಂದ್ರ ಮತ್ತು ರಾಜ್ಯಸರ್ಕಾರಗಳು ಎದುರಿಸಬೇಕಾಗಿದೆ. ಇಷ್ಟು ತೊಂದರೆಯಾದರೂ ಕೂಡ ರಾಜ್ಯಸರ್ಕಾರದವರು ಮಾಡಿರತಕ್ಕ ಪ್ರಾಮಾಣಿಕವಾದಂಥ ಪ್ರಯತ್ನಗಳ ಫಲವಾಗಿ ನಾವು ಬೊಂಬಾಯಿನಲ್ಲಿರತಕ್ಕ ಟೆಕ್ಸ್‌ಟೈಲ್ ಕಮಿಷನರ್ ಅವರಿಂದ ಸಾಕಷ್ಟು ನೂಲನ್ನು ತೆಗೆದುಕೊಂಡು ಬಂದಿದ್ದೇನೆ. ಏಳು ನೂಲಿನ ಡಿಪೋಗಳನ್ನು ಪ್ರಾರಂಭ ಮಾಡಿದ್ದೇವೆ. ಕೈಮಗ್ಗಗಳನ್ನು ಆಧಲಂಬಿಸಿರುವವರೆಗೆ ಬೇಕಾದಷ್ಟು ಪ್ರಮಾಣದಲ್ಲಿ ನೂಲನ್ನು ಒದಗಿಸುವುದಕ್ಕೆ ಸಾಧ್ಯವಾಗಲಿಲ್ಲ; ಒದಗಿಸಿ ಕೊಡುವ ವಿಶ್ವಾಸನೂ ನಮಗೆ ಇಲ್ಲ. ನಮ್ಮ ರಾಜ್ಯಕ್ಕೆ ಕನಿಷ್ಟ ಪಕ್ಷ 3-4 ಲಕ್ಷ ಕೆ.ಜಿ. ನೂಲು ಪ್ರತಿತಿಂಗಳಿಗೂ ಬೇಕು. ನಾಲ್ಕು ಲಕ್ಷ ಕೆ. ಜಿ. ನೂಲು ಸಿಕ್ಕಿದರೆ, ನಾವು ಸಮಗ್ರವಾಗಿ ಆ ಪ್ರದೇಶದಲ್ಲಿರತಕ್ಕ ನೇಕಾರರಿಗೆ ವಿತರಣೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಕೆಲವು ಡಿಪೋಗಳಿಗೆ 40 ಕೌಂಟು ನೂಲು ಬೇಕು. ರಾಮದುರ್ಗ ಮುನಿಸಿಪಾಲಿಟಿಕರ್ ನವರು ಈ ನೂಲನ್ನು ಕೇಳಿದ್ದಾರೆ; ಆದರೆ 40 ಕೌಂಟು ನೂಲು ಸಿಕ್ಕುತ್ತಾ ಇಲ್ಲ. ನಾವು ವಿಶೇಷ ಪ್ರಯತ್ನ ಮಾಡಿ, ನಮ್ಮ ಪರ್ಸನಲ್ ಇನ್‌ಫ್ಲ್ಯುಯನ್ಸ್ ಅನ್ನು ಉಪಯೋಗಿಸಿ ನೂಲನ್ನು ಉತ್ಪಾದನೆ ಮಾಡಿಸಿ ನೇಕಾರರಿಗೆ ಕಳುಹಿಸಿಕೊಟ್ಟಿದ್ದೇವೆ. ರಾಮದುರ್ಗಕ್ಕೆ 60-80 ಕೌಂಟು ನೂಲನ್ನು ಕಳುಹಿಸಿಕೊಟ್ಟಿದ್ದೇವೆ. ಅವರಿಗೆ ಬೇಕಾಗಿದ್ದು 40 ಕೌಂಟು

(ಶ್ರೀ ಎಸ್. ಎಂ. ಕೃಷ್ಣ)

ನೂಲು ಎಷ್ಟು ಕೊಟ್ಟರೂ ಕೂಡ ಶ್ರೀಮಾನ್ ಭಂಗಿ ಮತ್ತು ನಂಜಯನಮಠ್‌ಅವರು ನಾವು ಏನು ಮಾಡಿಲ್ಲ ಎಂದರೆ ಹೇಗೆ. ಸರ್ಕಾರ ಇವರ ಒತ್ತಾಯಕ್ಕೋಸ್ಕರ 7 ಡಿಪೋ ಪ್ರಾರಂಭಮಾಡಿ ನೂಲನ್ನು ವಿತರಣೆ ಮಾಡುತ್ತಿದ್ದೇವೆ. ಆದರೂ ಕೂಡ ಸರ್ಕಾರ ಏನು ಮಾಡಲಿಲ್ಲ ಎಂದು ಹೇಳಿದರೆ ಇದು ಎಷ್ಟು ಔದಾರ್ಯರಹಿತವಾದ ಮಾತು ಎನ್ನುವುದನ್ನು ಅವರು ತಿಳಿದುಕೊಳ್ಳಬೇಕು.

ಶ್ರೀ ಜಿ. ಪಿ. ನಂಜಯ್ಯನ ಮಠ್.—ಏನೂ ಮಾಡಲಿಲ್ಲ ಎಂದು ಹೇಳಲಿಲ್ಲ. ಸಾಕಷ್ಟು ಮಾಡಿದರೂ ಕೂಡ ಈಗ ಇರುವ ಪರಿಸ್ಥಿತಿಗೆ ಕೊಂದಿಕೊಂಡಿಲ್ಲ ಏನು ಮಾಡುವುದು ? ಇದರ ಬಗ್ಗೆ 25 ವರ್ಷಗಳಿಂದ ತೆಗೆದುಕೊಳ್ಳದೆ ಇರತಕ್ಕ ಲಕ್ಷ್ಯ ಮಾನ್ಯ ಮಂತ್ರಿಗಳು ತೆಗೆದುಕೊಂಡಿದ್ದಾರೆ. ಸರ್ಕಾರ ಜನತೆಯ ಪರಿಚಯ 25 ವರ್ಷಗಳಿಂದ ಇದ್ದ ಸರ್ಕಾರಕ್ಕೆ ಗೊತ್ತಿಲ್ಲ. ನಮ್ಮ ಸರ್ಕಾರ ಬಂದ ಮೇಲೆ ಸರ್ಕಾರದ ಮೇಲೆ ಸರ್ಕಾರದ ದೃಷ್ಟಿ ಬಿದ್ದಿದೆ. ಆಭಾವ ಪರಿಸ್ಥಿತಿಯಿಂದ ಅವರು ಸಾಕಷ್ಟು ಕಷ್ಟಕ್ಕೆ ಈಡಾಗಿದ್ದಾರೆ. ಸರ್ಕಾರ ಸಾಕಷ್ಟು ಕ್ರಮ ತೆಗೆದುಕೊಂಡಿದ್ದಾರೆ. ಆದರೆ ಪರಿಸ್ಥಿತಿ ವಿಕೋಪಕ್ಕೆ ಹೋದಾಗ ಇನ್ನಷ್ಟು ಸಹಾಯಮಾಡಿ ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಎಂ. ಕೃಷ್ಣ.—ನೂಲು ಕಂಚೊರ್ಡ್ ಕಮಾಡಿಟಿ ಅಲ್ಲ. ದೇಶದಲ್ಲಿ ಎಷ್ಟು ನೂಲು ಬೇಕು ಅಷ್ಟು ಉತ್ಪಾದನೆ ಇಲ್ಲ. ಇದು ಕೇವಲ ಕರ್ನಾಟಕ ರಾಜ್ಯಕ್ಕೆ ಸಂಬಂಧಪಟ್ಟ ಪ್ರಶ್ನೆಯಲ್ಲ. ನಾನು ಬಾಂಬೆ ಟೆಕ್ಸ್‌ಟೈಲ್ ಕಮೀಷನರ್ ಬೇಟಿ ಮಾಡುವುದಕ್ಕೆ ಹೋದಾಗ ಅಲ್ಲಿ ಬಾಂಬೆ ಕೈಗಾರಿಕಾ ಸಚಿವರನ್ನು ಭೇಟಿ ಮಾಡಿದಾಗ ಬಾಂಬೆ ಟೆಕ್ಸ್‌ಟೈಲ್ ಕಮೀಷನರ್ ಹೇಳಿದರು ಇಲ್ಲಿ ಕೂಡ ಮಹರಾಷ್ಟ್ರದಲ್ಲಿ ಎಷ್ಟು ಬೇಕೋ ಅದರಲ್ಲಿ 25 ಪರ್ಸೆಂಟ್ ಸಿಕುತ್ತಾ ಇಲ್ಲ ಎಂದು ಅವರು ಹೇಳಿದರು ಇದೇ ಪರಿಸ್ಥಿತಿ ತಮಿಳುನಾಡಿನಲ್ಲೂ ಕೂಡ ಇದೆ. ಉಪವಾಸದ ಮಾತು ಕೆಲವು ಮಾನ್ಯ ಸದಸ್ಯರು ಹೇಳಿದರು. ಉಪವಾಸ ಮಾಡಿದರೆ ನೂಲು ಸೃಷ್ಟಿ ಮಾಡುವುದಕ್ಕೆ ಸಾಧ್ಯವಿದ್ದರೆ ಅವರ ಜೊತೆಯಲ್ಲಿ ನಾವು ಸ್ವರಿ ಉಪವಾಸ ಮಾಡಬಹುದು ಉಪವಾಸವಾಗಲಿ ಜಳುವಳಿಯಾಗಲಿ, ಸತ್ಯಾಗ್ರಹವಾಗಲಿ ನೂಲಿನ ಕೊರತೆಯನ್ನು ತಕ್ಷಣದಲ್ಲಿ ನಿವಾರಣೆ ಮಾಡುವುದಕ್ಕೆ ಸಾಧನವಲ್ಲ ಎಂದು ಮಾನ್ಯನಭೆ ಮತ್ತು ನಾವು ಅರ್ಥಮಾಡಿಕೊಳ್ಳಬೇಕು.

ಒಬ್ಬ ಸದಸ್ಯರು.—ದೊಣ್ಣೆ ತೆಗೆದುಕೊಳ್ಳಿ ?

ಶ್ರೀ ಎಸ್. ಎಂ. ಕೃಷ್ಣ.—ದೊಣ್ಣೆ ತೆಗೆದುಕೊಂಡರೆ ತಲೆ ಹೋಗುತ್ತದೆ ನೂಲು ಬರುವುದಿಲ್ಲ. ದೊಣ್ಣೆಗೆ ಯಾರು ಸಿಕ್ಕುತ್ತಾರೆ ಅವರ ತಲೆ ಕೊಚ್ಚಿಹೋಗುತ್ತದೆ ನೂಲು ಸಿಕ್ಕುವುದಿಲ್ಲ. ಯಾರ ಹೊಟ್ಟೆಯೂ ತುಂಬುವುದಿಲ್ಲ. ನಾವು ಇದರ ಬಗ್ಗೆ ಗಂಭೀರವಾಗಿ ಆಲೋಚನೆ ಮಾಡಬೇಕಾಗಿದೆ. ಕೆಲವು ಡಿಪೋಗಳನ್ನು ತೆಗೆದಿದ್ದೇವೆ ಇನ್ನು 15 ರಿಲೀಫ್ ಸೆಂಟರುಗಳನ್ನು ತೆಗೆಯುವುದಕ್ಕೆ ನಾವು ಪ್ರಾರಂಭಮಾಡುತ್ತಿದ್ದೇವೆ. ಬೆಳಿಗೆ ಕರೆದಂತಹ ಮೀಟಿಂಗಿಗೆ ಶ್ರೀಮಾನ್ ಜೆ. ಎಲ್. ಕಬಾಡಿಯವರು ಬಂದಿದ್ದರು. ಟೆಕ್ಸ್‌ಟೈಲ್ ಮಿಲ್ಲು ಡೈರೆಕ್ಟರು ನೂಲನ್ನು ಪ್ರೊಕ್ಯೂರ್ ಮಾಡುವುದಕ್ಕೆ ಎಷ್ಟು ಕಷ್ಟ ಇದೆ ಎನ್ನುವುದನ್ನು ಹೇಳಿದ್ದು ಅವರಿಗೆ ಗೊತ್ತು. ಆದುದರಿಂದ ಇದರ ಬಗ್ಗೆ ಸರ್ಕಾರದಲ್ಲಿ ಬಹಳ ಕಳಕಳಿ ಇದೆ. 15 ಕೇಂದ್ರಗಳನ್ನು ಎಕ್ಸ್‌ಪೆರಿಮೆಂಟರ್ ರೀತಿಯಲ್ಲಿ ಮಾಡುತ್ತಿದ್ದೇವೆ. ಈ ಮಧ್ಯೆ ಬೆಳಗ್ಗೆ ತಾನೆ ಟೆಕ್ಸ್‌ಟೈಲ್ ಮಿಲ್ಲು ರೆಪ್ರೆಸೆಂಟೆಟೀವ್‌ನ್ನು ಕರೆದಿದ್ದೆವು. ಸರ್ಕಾರ ಎಲ್ಲಿಯವರೆಗೆ ಹೋಗಿವೆ ಎಂದರೆ ಫ್ರೀಮಾರ್ಕೆಟ್‌ನಲ್ಲಿ ಬಾಕಿಯವರ ಜೊತೆಯಲ್ಲಿ ಪೈಪೋಟಿ ಮಾಡಿ ನೂಲನ್ನು ಡೊರಕಿಸಿಕೊಂಡು ನೂಲನ್ನು ಹಂಚಬೇಕು ಎಂದು ತೀರ್ಮಾನ ಮಾಡಿದ್ದೇವೆ. ಸರ್ಕಾರದವರು ತೆಗೆದುಕೊಂಡಿರತಕ್ಕ ಈ ಕಾರ್ಯಕ್ರಮಗಳಿಗೆ ಸಭೆ ಒಪ್ಪಿಗೆ ಕೊಡುತ್ತದೆಂದು ನಾನು ಭಾವಿಸುತ್ತೇನೆ.

## Movement of the unemployed labourers from Gulbarga to Bangalore

ಶ್ರೀ ಬಾಪೂಗೌಡ ರಾಯಪ್ಪ (ಶಹಾಪುರ).—ಸುಮಾರು 5–6 ತಿಂಗಳಿಂದ ಈ ಮನೆಯಲ್ಲಿ ಪದೆಪದೇ ಕ್ಷಾಮಪೀಡಿತ ಪ್ರದೇಶಗಳಿಂದ ಜನರು ವಲಸೆ ಹೋಗುತ್ತಿದ್ದಾರೆ ಎನ್ನುವುದನ್ನು ಎಲ್ಲರೂ ಹೇಳಿದ್ದಾರೆ. ಸುಮಾರು 2–3 ತಿಂಗಳಿಂದ ಆ ಭಾಗದಲ್ಲಿ ಕೆಲಸ ಇರಲಾರದೆ ನೇರವಾಗಿ ರಾಜಧಾನಿಗೆ ನುಗ್ಗುತ್ತಿದ್ದಾರೆ ಎನ್ನುವುದು ಸ್ಪಷ್ಟವಾಗಿದೆ. ಈ ಮನೆಯಲ್ಲಿ ಗುಲ್ಬರ್ಗಾ ಬೀದರ್,

ಬಿಜಾಪುರದಲ್ಲಿ ಕ್ಷಾಮ ಇದೆ, ಇದರ ಬಗ್ಗೆ ನದನ್ಯರು ರಾಜಕೀಯ ಆಡುತ್ತಿದ್ದಾರೆ ಎಂದು ನಮ್ಮ ಮೇಲೆ ದೋಷ ಬರುತ್ತಿದೆ. ಬೆಂಗಳೂರಿನಲ್ಲಿ ಇವೊತ್ತಿನದಿವಸ 4 ಸಾವಿರ ಜನ 2-3 ತಿಂಗಳಿಂದ ಬಂದಿದ್ದಾರೆ. ಬಂದಂತ ಜನರಿಗೆ ಯಾವದೇ ಕೆಲಸ ಸಿಕ್ಕುತ್ತಿಲ್ಲ. ನಾನು ಸುಮಾರು 2 ದಿವಸ ಗಳಿಂದ ಯಶವಂತಪುರ, ಎಚ್.ಎ.ಎಲ್, ಬಿ.ಇ.ಎಲ್. ಮುಂತಾದ 5-6 ಕ್ಯಾಂಪುಗಳಿಗೆ ಹೋಗಿ ದ್ದೇನೆ. ವಾರದಲ್ಲಿ ಒಂದೆರಡು ದಿವಸ ಕೆಲಸಕ್ಕೆ ಹೋಗುತ್ತಾರೆ ಉಳಿದ 5-6 ದಿವಸ ಕೆಲಸವಿಲ್ಲ. ಬಂದಂತ ಜನರಿಗೆ ಷೆಡ್‌ಗಳನ್ನು ಹಾಕಿಕೊಟ್ಟಿಲ್ಲ. ಎಚ್ ಎ ಎಲ್ ಕ್ಯಾಂಪಿನಲ್ಲಿ ಕೆಲಸ ಮಾಡ ತಕ್ಕ 3 ನೂರು ಜನ ಏನು ಇದ್ದಾರೆ, ನಾನು ಹೋಗಿ ನೋಡಿದಾಗ ಅವರು ಕೇರಳ, ತಮಿಳು ನಾಡ್‌ನಿಂದ ಬಂದಂತ ಜನ. ಆ ಜನರಿಗೆ ಷೆಡ್ ಹಾಕಿಕೊಟ್ಟಿದ್ದಾರೆ, ಅವರಿಗೆ ಕೆಲಸ ಸಿಕ್ಕುತ್ತಿದೆ. ಅಲ್ಲಿಯ ಹೇಳಿಕೆ ಪ್ರಕಾರ ಅಲ್ಲಿ ಇದ್ದಂಥ ಅಧಿಕಾರಿಗಳು ಕೇರಳದವರು, ತಮಿಳುನಾಡಿನವರು ಆಗಿ ರುವುದರಿಂದ ಕಂಟ್ರಾಕ್ಟರು ಕೂಡ ಕೇರಳದವರು, ತಮಿಳುನಾಡಿನವರು ಇದ್ದಾರೆ, ಮೇಸ್ತ್ರಿ ಕೂಡ ಕೇರಳ ಮತ್ತು ತಮಿಳುನಾಡಿನವರು ಇರುವುದರಿಂದ ಅವರು ಅವರ ಜನರಿಗೆ ಕೆಲಸ ಕೊಟ್ಟು ಬಾಕಿ ಜನರಿಗೆ ಯಾವ ಸೌಕರ್ಯ ಕೊಡುವುದಿಲ್ಲ. 4-5 ತಿಂಗಳಲ್ಲಿ ಆ ಜಿಲ್ಲೆಯಲ್ಲಿ 2-3 ಸಾವಿರ ಜನರು ಕೆಲಸ ಇರಲಾರದೆ ಬೆಂಗಳೂರಿನಲ್ಲಿ ಬಿಕ್ಷೆ ಬೇಡುತ್ತಿರುವುದು ಕಾಣುತ್ತಿದ್ದೇವೆ. 500 ಜನ ಹೆಂಗಸರು, ಗಂಡನರು ಬಂದು ವಿಧಾನ ಸೌಧದ ಮುಂದೆ ಕೂತಿದ್ದಾರೆ. ಏಷ್ಟೋ ಜನರು ಪತ್ರಿಕಾ ಕರ್ತರು ಹೋಗಿ ನೋಡಿದ್ದಾರೆ, ಅಲ್ಲಿ ಏನು ಪರಿಸ್ಥಿತಿ ಇದೆ ಬಂದಂತಹ ಜನರಿಗೆ ಎಷ್ಟು ಎಕ್ಸಪ್ಲೊ ಯಿಟೇಶನ್ ನಡೆಯುತ್ತಿದೆ ಎಂಬುದು ಪತ್ರಿಕೆಯಲ್ಲಿ ಬಂದಿದೆ. ಅಲ್ಲಿಗೆ ಒಬ್ಬ ಮಂತ್ರಿಗಳು ಹೋಗಿ ದ್ದಾರೆ ಅಲ್ಲಿಗೆ ಹೋದಾಗ ಅವರು ಬೊಗಸೆ ಅಕ್ಕಿ ಕೊಟ್ಟಿದ್ದಾರೆ. ಆವರೆ ಅದರಿಂದ ಅವರ ಹೊಟ್ಟೆ ತುಂಬುವುದಿಲ್ಲ. ಕೆಲಸ ಕೊಡಿ, ಕೆಲಸ ಕೊಟ್ಟರೆ ದುಡಿಯುವುದಕ್ಕೆ ತಯಾರಿದ್ದಾರೆ. ಅಲ್ಲಿಗೆ ಒಬ್ಬ ಮಂತ್ರಿಗಳು ಹೋದಮೇಲೆ ತಿರುಗಿ ಯಾರು ಹೋಗಿಲ್ಲ. ಸ್ಕೌರ್ಸಿಟಿ ರಿಲೀಫ್ ಕಮಿಟಿಯವರು ಪ್ಯಾಂಟ್, ನಿಕ್ಕರ್ ಕೊಟ್ಟಿದ್ದಾರೆ. ನಮ್ಮ ಜನ ಪ್ಯಾಂಟ್, ನಿಕ್ಕರ್ ಉಡುವುದಿಲ್ಲ. ಧೋತ್ರ ಉಡು ತ್ತಾರೆ. ಅಲ್ಲಿ ಬೇಸತ್ತು ಬಂದ ಜನರನ್ನು ಇಂಥ ಮಾತುಗಳಿಂದ ಸಮಾಧಾನ ಮಾಡುವ ಪ್ರಯತ್ನ ಗುಲ್ಬರ್ಗದಲ್ಲಿ ಮಾಡಿದ್ದಾರೆ, ಬಿಜಾಪುರದಲ್ಲಿ ಮಾಡಿದ್ದಾರೆ ಮತ್ತು ರಾಯಚೂರ್‌ನಲ್ಲಿ ಮಾಡಿ ದ್ದಾರೆ. ಆದರೆ ಇವೊತ್ತು ರಾಜಧಾನಿಯಲ್ಲಿ ಮಾಡುವ ಪ್ರಯತ್ನ ನೋಡಿದರೆ ನಾಚಿಕೆಯಾಗುತ್ತದೆ. ಸರ್ಕಾರ ಹೃದಯ ಇದೆಯೋ ಸರ್ಕಾರದ ಮನಸ್ಸು ಕಲ್ಲು ಆಗಿದೆಯೋ ಗೊತ್ತಿಲ್ಲ. 4 ನೂರು ಮೈಲಿ ಯಿಂದ ಬಂದಂತಹ ಸಾವಿರಾರು ಜನರು ರಾಜಧಾನಿಯಲ್ಲಿ ಇರಲಿಕ್ಕೆ ಸ್ಥಳವಿಲ್ಲ, ಮಾಡುವುದಕ್ಕೆ ಕೆಲಸವಿಲ್ಲ. ಅವರಿಗೆ ಇರುವುದಕ್ಕೆ ಸ್ಥಳ ಮಾಡುವುದಕ್ಕೆ ಕೆಲಸ ಕೊಡಬೇಕು ಎಂದು ಪ್ರದರ್ಶನ ನಡೆಯುತ್ತಿದೆ. 2 ತಿಂಗಳ ಹಿಂದೆ ಗುಲ್ಬರ್ಗದಿಂದ, ಬಿಜಾಪುರದಿಂದ ಜನರು ಬರುತ್ತಿದ್ದಾರೆಂದು ತಿಳಿದುಕೊಂಡು ಏನಾದರೂ ವ್ಯವಸ್ಥೆ ಮಾಡಬೇಕಾಗಿತ್ತು. ಒಂದು ಲೈಯಸನ್ ಆಫೀಸ್ ಮಾಡ ಬೇಕಿತ್ತು. ಅಲ್ಲಿಂದ ಬಂದ ಜನರು ಎಲ್ಲಿ ಇಳಿದಿದ್ದಾರೆ, ಕೆಲಸ ಸರಿಯಾಗಿ ಕೊಡುತ್ತಿದ್ದಾರೆಯೇ ಅವರಿಗೆ ಎಕ್ಸಪ್ಲೊಯಿಟೇಷನ್ ಯಾವರೀತಿ ಮಾಡುತ್ತಿದ್ದಾರೆ ಎಂದು ನೋಡಬೇಕಿತ್ತು. ಏನಾದರೂ ಆ ರೀತಿ ಸಿಟ್ಟು ಎದಿಯನ್ನು ಏರ್ಪಾಡುಮಾಡಿ ಬಂದಂತಹ ಜನರಿಗೆ ನೋಡಿಕೊಳ್ಳುವ ಸೌಕರ್ಯ ಇಲ್ಲಿಯವರೆಗೆ ಒದಗಿಸಿಕೊಟ್ಟಿಲ್ಲ. ಶ್ರೀಮಾನ್ ಹುಚ್ಚಮಾಸ್ತಿಗೌಡರು ವಿಧಾನ ಪರಿಷತ್ತಿನಲ್ಲಿ ಶ್ರೀ ಒಡೆಯರ್‌ರಾಜ್‌ರವ ಪ್ರಶ್ನೆಗೆ ಉತ್ತರ ಕೊಡುತ್ತಾ ಗುಲ್ಬರ್ಗ ಜನರು ಎಲ್ಲಿಯೂ ಬುಸಿ ಹೋಗು ತ್ತಿಲ್ಲ ಎಂದು ಹೇಳಿದ್ದಾರೆ. ಗೋದಿಪುರ, ಚಿತಾಪುರದಿಂದ 50 ಜನ ಬಂದಿದ್ದರು, ಕೆಲವು ಜನರು ಸಿಕ್ಕ ಸ್ಥಳದಲ್ಲಿ ಅಡಿಗೆ ಮಾಡುತ್ತಾ ಇದ್ದಾರೆ, ಅವರಿಗೆ ಷೆಲ್ಟರ್ಸ್ ಇಲ್ಲ, ಏನು ವ್ಯವಸ್ಥೆಯಿಲ್ಲ, ಅಲ್ಲಿಂದ ಬಂದಂತಹ ಜನರು ರೈತರಿದ್ದಾರೆ, ಕೂಲಿಕಾರರು ಇದ್ದಾರೆ, ಇದರಲ್ಲಿ 20 ಎಕರ ಭೂಮಿ ಇರುವಂತಹ ರೈತರೂ ಇದ್ದಾರೆ. ಇಂಥ ಪರಿಸ್ಥಿತಿ ಇರುವಾಗ ರಾಜಧಾನಿಯಲ್ಲಿ ಕೂಡ ಸರ್ಕಾರ, ಕಣ್ಣುಮುಚ್ಚಿಕೊಂಡು 4 ನೂರು ಮೈಲಿ ದೂರದಿಂದ ಕೆಲಸಕ್ಕಾಗಿ, ಹೊಟ್ಟೆಗಾಗಿ, ಅನ್ನಕ್ಕಾಗಿ ಬಂದಂತಹ ಜನರಿಗೆ ಸರಿಯಾಗಿ ನೋಡಿ ಅವರ ಕಷ್ಟಗಳನ್ನು ವಿಚಾರಿಸುವ ಸೌಜನ್ಯ ಇಲ್ಲದೆ ಹೋದರೆ ಏನು ಮಾಡಬೇಕು ?

ನಾನು ನೊಂದ ಮನಸ್ಸಿನಿಂದ ಮತ್ತು ಕಠೋರವಾಗಿ ಹೇಳಬೇಕಾದರೆ ಸರ್ಕಾರದವರು ಈಗಲಾದರೂ ಕೂಡ ಬೆಂಗಳೂರಿಗೆ ಬಂದಂಥ ನಾಲ್ಕೈದು ಸಾವಿರ ಜನರಿಗೆ ಸರಿಯಾಗಿ ಇಟ್ಟು ಕೊಂಡು, ಅವರಿಗೆ ಸೌಕರ್ಯಗಳನ್ನು ಒದಗಿಸಿಕೊಡದೆ ಹೋದರೆ ನಾವು ಇದೇ ನಭೆಯಲ್ಲಿ ಧರಣಿ ಮಾಡತಕ್ಕ ಪರಿಸ್ಥಿತಿ ಉದ್ಭವಿಸುತ್ತದೆ. ನಾವು ಹೆಚ್ಚಾಗಿ ಮಾತನಾಡಿದರೆ ರಾಜಕೀಯ ಮಾಡುತ್ತೇವೆ ಎಂದು ಹೇಳುತ್ತಾರೆ. ಇವರಿಗೆ ಇನ್ನು ಯಾವ ಥಾಟಿಯಲ್ಲಿ ಹೇಳಬೇಕು ಎನ್ನುವುದು ನನಗೆ ತಿಳಿ ಯದ ಹಾಗೆ ಆಗಿದೆ. ನಾನು ಹೆಚ್ಚು ಮಾತನಾಡಲಾರೆ. ಬಂದಂಥ ಜನರೇನಿದ್ದಾರೆ ಅವರು ಬಳುವಳಿ ಮಾಡುವುದಕ್ಕೆ ಬಂದಿಲ್ಲ. ಅವರು ಬಹಳ ದೂರದಿಂದ ನಡೆದು ಬಂದಿದ್ದಾರೆ. ಮಕ್ಕಳ

(ಶ್ರೀ ವಾಪೂಗೌಡ ರಾಯಪ್ಪ)

ಉಪವಾಸವಿದ್ದಾರೆ. ಸರ್ಕಾರದ ವತಿಯಿಂದ ಯಾರಾದರೂ ಹೋಗಿ ಬಂದಂಥ ಜನರನ್ನು ಭೇಟಿ ಯಾಗಿ, ಅವರಿಗೆ ಸಮಾಧಾನ ಹೇಳಿ ಅವರಿಗೆ ಏನು ವ್ಯವಸ್ಥೆ ಮಾಡಿದ್ದಾರೆ ಎನ್ನುವ ಮಾತನ್ನೂ ಹೇಳಿದರೆ ಅನುಕೂಲವಾಗುತ್ತದೆ. ಇಲ್ಲವಾದರೆ ನಾವು ಏನಾದರೂ ಕ್ರಮ ತೆಗೆದುಕೊಳ್ಳಬೇಕಾಗುತ್ತದೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ವಿಶ್ವನಾಥ ರೆಡ್ಡಿ (ಮಾದಗೀರ್).—ಅಧ್ಯಕ್ಷರೇ, ಈಗ ಮಾನ್ಯ ವಾಪೂಗೌಡರು ಹೇಳಿದ್ದಕ್ಕಿಂತ ನಾನು ಪುನಃ ಹೆಚ್ಚು ಹೇಳಬೇಕಾಗಿಲ್ಲ. ಬಂದಂಥ ಜನ ನಾರ್ಮಲ್ ಕಂಡೀಷನ್‌ನಲ್ಲಿ ಬಂದಿಲ್ಲ, ಅಬ್ನಾರ್ಮಲ್ ಕಂಡೀಷನ್‌ನಲ್ಲಿ ಎಂದರೆ ಕ್ಷಾಮ ಪರಿಸ್ಥಿತಿ ಇದ್ದುದಕ್ಕಾಗಿ ಇಲ್ಲಿಗೆ ವಲಸೆ ಬಂದರು. ಇಲ್ಲಿ ಬಂದ ನಂತರ ಎರಡು ದಿವಸ ಕೆಲಸ ಮಾಡಿದರೆ ನಾಲ್ಕಾರು ದಿವಸ ಕೆಲಸವಿಲ್ಲ, ಆಹಾರವಿಲ್ಲ, ತಿನ್ನುವುದಕ್ಕೆ ಇಲ್ಲ ಎನ್ನುವ ಪರಿಸ್ಥಿತಿಯುಂಟಾಯಿತು. ಬಂದಂಥ ಜನ ತಮ್ಮ ತೊಂದರೆಗಳನ್ನು ನಿವೇದನೆ ಮಾಡಿಕೊಂಡು ಪರಿಹಾರ ಕೇಳಲು ಬಂದಿದ್ದಾರೆ. ಕೆಲವರ ಮೇಲೆ ಇಲ್ಲವರು, ಒಂದು ದಿನ ಕೆಲಸ ಸಿಕ್ಕಿದೆ ಇನ್ನವರು ಬಂದಿದ್ದಾರೆ. ಆ ಪ್ರಕಾರ ಐದಾರು ನೂರು ಜನರು ಬಂದಿದ್ದಾರೆ ಸುಮಾರು 15 ದಿವಸಗಳ ಕೆಳಗೆ ಪತ್ರಿಕೆಗಳಲ್ಲಿ ಬಂದಿರುವ ವಿಚಾರವನ್ನು ಎಲ್ಲರೂ ನೋಡಿರುತ್ತೀರಿ. ಈ ಜನರನ್ನು ಹೀಗೆ ಶೋಷಣೆ ಮಾಡುತ್ತಿದ್ದಾರೆ ಎನ್ನುವುದನ್ನು ಬಹಳ ಚೆನ್ನಾಗಿ ಹೇಳಿದ್ದಾರೆ. ಕೂಲಿ ಮಾಡಿದರೆ ದೊಡ್ಡ ಸಂಪತ್ತೇ ಸಿಕ್ಕುತ್ತದೆ ಎನ್ನುವ ಆಸೆಯಿಂದ ಬಂದಿದ್ದಾರೆ. ಅವರು ಪುಕ್ಕಟೆ ಏನೂ ಕೇಳುತ್ತಿಲ್ಲ. ಕೆಲಸ ಕೊಟ್ಟು ಹೊಟ್ಟೆಗೆ ಆಹಾರಕ್ಕೆ ಮಾರ್ಗ ಮಾಡಿಕೊಡಿ ಎಂದು ಕೇಳುತ್ತಿದ್ದಾರೆ. ಆ ಜನರನ್ನು ಕಂಡು ಸಮಾಧಾನ ಹೇಳಿದರೆ ಸರಿಹೋದೀತು. ಸರ್ಕಾರದ ಕಡೆಯಿಂದ ಜವಾಬ್ದಾರಿ ಜನರು ಹೋಗಿ ಅವರಿಗೆ ಆಶ್ವಾಸನೆ ಕೊಡುವುದು ಒಳ್ಳೆಯದು. ಮಾನವೀಯತೆಯ ದೃಷ್ಟಿಯಿಂದ ಇದನ್ನು ನೋಡಬೇಕು. ಕೆಲವು ದಿನಗಳ ಹಿಂದೆ ಯಾದಗೀರ್ ಕಡೆಯಿಂದ ಬಂದಂಥ ಕೆಲವು ಜನರ ಬಗ್ಗೆ ಮಾನ್ಯ ರೆವೆನ್ಯೂ ಮಂತ್ರಿಗಳಲ್ಲಿ ಕೇಳಿದಾಗ ಅವರು ರೆವೆನ್ಯೂ ಸೆಕ್ರೆಟರಿಗಳಿಗೆ ಹೇಳಿ ಏನಾದರೂ ವ್ಯವಸ್ಥೆ ಮಾಡಿಸುತ್ತೇನೆಂದು ಹೇಳಿದರು. ನಾನು ಮಾನ್ಯ ಮಂತ್ರಿಗಳಾದ ಮಲ್ಲಿಕಾರ್ಜುನ ಸ್ವಾಮಿಯವರನ್ನು ಕಂಡು ಅವರಿಗೆ ಒಂದು ವ್ಯವಸ್ಥೆ ಮಾಡಿಸಿದ್ದೆನ್ನಿಯಿತು. ಈಗ ಇಲ್ಲಿಗೆ ಬಂದಿರುವ ಜನರ ಬಗ್ಗೆ ಸಹ ಕೂಡಲೇ ಸರ್ಕಾರ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

† ಶ್ರೀ ಪಾಟಾಳ್ ನಾಗರಾಜ್ (ಚಾಮರಾಜಪೇಟೆ).—ಸನ್ಮಾನ್ಯ ಅಧ್ಯಕ್ಷರೇ, ಇದು ಬಹಳ ಗಂಭೀರವಾದ ಪ್ರಶ್ನೆ, ನಿನ್ನೆ ದಿವಸ ಸಂಜೆ ಆರು ಗಂಟೆಗೆ ವಿಮಾನಪುರಂ ಮುಂದೆ ಇರತಕ್ಕ ವಿಭೂತಿಪುರಕ್ಕೆ ಹೋಗಿದ್ದೆ. ಆಲ್ಲಿಗೆ ಕೆಲವು ಅಧಿಕಾರಿಗಳೂ ಮತ್ತು ಪತ್ರಿಕಾ ಕರ್ತರೂ ಹೋಗಿದ್ದರೆಂದು ಪತ್ರಿಕೆಗಳಲ್ಲಿ ಬಂದಿದೆ. ಅವರು ಅಲ್ಲಿನ ಜನಗಳಿಗೆ ಪೆಪ್ಪರಮೆಂಟ್ ಮತ್ತು ಬಾಳೆಹಣ್ಣಿನ ಚೂರುಗಳನ್ನು ಕೊಟ್ಟರೆಂದು ತಿಳಿಯಿತು. ನಿನ್ನೆ ನಾವು ಹೋದ ಕ್ಷಣ ಆ ಜನರೆಲ್ಲ ನಂತೋಷವಾಗಿ ನಮಗೆ ಏನೋ ಕೊಡಲು ಬಂದಿದ್ದಾರೆಂದು ತಿಳಿದುಕೊಂಡರು. ನಮಗೆ ಕೊಡತಕ್ಕ ಶಕ್ತಿ ಇಲ್ಲ, ನಾವು ಮಾತನಾಡುತ್ತೇವೆ, ಹೋರಾಟ, ಮಾಡುತ್ತೇವೆ, ಕೊಡತಕ್ಕ ಧಾತರು, ಸರ್ಕಾರ ನಡೆಸುವವರಿದ್ದಾರೆ, ಅವರು ಎಲ್ಲವನ್ನೂ ನೋಡಿಕೊಳ್ಳುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ನಾವೆಲ್ಲ ಮಾತನಾಡಿದರೆ ಪ್ರಯೋಜನವಿಲ್ಲ, ದೊರೆತನಕ ದೂರು ಎನ್ನುವಂತೆ, ಹಿಂದೆ ಗಂಟೆ ಬಾರಿಸಿದರೆ ದೊರೆ ಆದವನು ಬಂದು, ಜನರ ಕಷ್ಟಗಳನ್ನು ವಿಚಾರಿಸುತ್ತಿದ್ದನಂತೆ. ಒಂದು ಕುದುರೆ ಕಥೆಯನ್ನು ಎಲ್ಲರೂ ಕೇಳಿರಬಹುದು. ಆ ಮೂಕಪ್ರಾಣಿ ಗಂಟೆ ಹೊಡೆದಾಗ ದೊರೆ ಬಂದು ಹುಲ್ಲು ಕೊಟ್ಟು ಕಾಪಾಡಿದ ಎಂದು ಪುರಾಣಗಳಲ್ಲಿ ಬರುವುದನ್ನು ಕೇಳಿದ್ದೇವೆ. ಕ್ಷಾಮ ಪೀಡಿತ ಪ್ರದೇಶದಿಂದ ಜನರು ಬಂದು ಗೋಳಿಡುತ್ತಿದ್ದರೂ ನಮ್ಮ ಮಂತ್ರಿಗಳು ಕಲ್ಲು ಇದ್ದ ಹಾಗೆ ಇದ್ದಾರೆ. ಆ ಜನರು ಪುಗಸಟ್ಟೆ ಆಹಾರ ಕೊಡಿ ಎಂದು ಕೇಳುತ್ತಿಲ್ಲ. ಕೆಲಸ ಕೊಡಿ, ಬೇರೆಯವರಿಗಿಂತ ಹೆಚ್ಚು ದುಡಿಯುತ್ತೇವೆ ಎಂದು ಹೇಳುತ್ತಿದ್ದಾರೆ. ಕೆಲಸ ಸಿಕ್ಕದೆ ರಸ್ತೆಯಲ್ಲಿ ಜನಗಳ ಕಾಲು ಹಿಡಿದು ಬೇಡುತ್ತಿದ್ದಾರೆ. ಮಂತ್ರಿಗಳಿಗೆ ಹೇಳಿ ಹೇಳಿ ಸಾಕಾಯಿತು. ಸುಮಾರು 800 ಜನ ಕಬ್ಬನ್ ಪಾರ್ಕ್ ಮೂಲೆಯಲ್ಲಿ ಕುಳಿತ್ತಿದ್ದಾರೆ. ಅವರಲ್ಲಿ ಸುಮಾರು 400 ಜನ ಮಹಿಳೆಯರಿದ್ದಾರೆ. ಉಪಾಧ್ಯಕ್ಷರನ್ನು ಅರ್ಧ ತಾಸು ಕುರ್ಚಿಯಲ್ಲಿ ಕೂಡಿಸಿ ತಾವು ಹೋಗಿ ಆ ಜನರನ್ನು ಮಾತನಾಡಿಸಿ ಬಂದರೆ ನಾವು ಹೇಳುವುದರಲ್ಲಿ ನಿಜಾಂಶವಿದೆಯೆನ್ನುವುದು ತಮಗೇ ಅರ್ಥವಾಗುತ್ತದೆ. ನಿನ್ನೆ ನಾನು ಹೋಗಿ ನೋಡಿದಾಗ ಸಣ್ಣ ಗುಡಿಸಿಲಿನಲ್ಲಿ ಐದು ಸಂಸಾರಗಳು ಇದ್ದುವು. ಒಲೆ ಇಟ್ಟುಕೊಳ್ಳುವುದಕ್ಕೆ ಸಾಧ್ಯವಿಲ್ಲದೆ ಗುಡಿಸಿಲಿನ ಹೊರಗಡೆ ಕಲ್ಲುಗಳನ್ನು ಇಟ್ಟು ತಗಡಿನಲ್ಲಿ ರೊಟ್ಟಿ ಸುಡುತ್ತಿದ್ದರು. ಬೆಳಕು ಇಲ್ಲದೆ ತಿಂಗಳ ಬೆಳಕಿನಲ್ಲಿ ರೊಟ್ಟಿ ಸುಡುತ್ತಿದ್ದರು.

ಗುಡಸಿಲಿನ ಹೊರಗಡೆ ಇಬ್ಬರು ನರಳುತ್ತ ಮಲಗಿದ್ದರು. ಅವರನ್ನು ನೋಡುವುದಕ್ಕೆ ಒಬ್ಬ ವೈದ್ಯರು ಕೂಡ ಹೋಗಿಲ್ಲ. ಅವರ ಪರಿಸ್ಥಿತಿ ಚಿಂತಾಜನಕವಾಗಿದೆ. ಇಲ್ಲಿಗೆ ಬಂದಿರುವ ಜನರನ್ನೇ ಇಷ್ಟು ಮಾತ್ರ ನೋಡುತ್ತಿರಬೇಕಾದರೆ, ಇನ್ನು ಕ್ಷಾಮ ಪೀಡಿತ ಪ್ರದೇಶದಲ್ಲಿರುವ ಜನರನ್ನು ನೋಡಿದರೆ ಅವರ ಪರಿಸ್ಥಿತಿ ಹೇಗಿರಬಹುದು ಎನ್ನುವುದನ್ನು ನಾವು ಊಹಿಸಬಹುದಾಗಿದೆ, ಈ ಸರ್ಕಾರಕ್ಕೆ ನಿಜವಾಗಿಯೂ ಕಣ್ಣು, ಹೃದಯ, ಯಾವುದೂ ಇಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ಐವರು ಅಧಿಕಾರಕ್ಕೆ ಬರುವುದಕ್ಕೆ ಮುಂಚೆ, ದೇಶದಲ್ಲಿ ಅನುಕೂಲ ಮಾಡುತ್ತೇವೆಂದು ಹೇಳಿದ್ದರು, ಅನೇಕ ಸಮಾಜವಾದ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆಂದು ಹೇಳಿದ್ದರೂ ಕೂಡ ಬಡ ಜನರು ಕೆಲಸಕ್ಕೋಸ್ಕರ, ಆಹಾರಕ್ಕೋಸ್ಕರ ಬಂದಿದ್ದರೆ ಅವರಿಗೆ ಏನೂ ಸಹಾಯ ಮಾಡದೆ ಅವರು ಬೀದಿ ಬೀದಿಗಳಲ್ಲಿ ಭಿಕಾರಿಗಳಂತೆ ಭಿಕ್ಷೆ ಬೇಡುವ ಪರಿಸ್ಥಿತಿ ಬಂದಿದೆ. ಕಣ್ಣಾರೆ ನೋಡಿ ಸರಿಪಡಿಸುವುದರಲ್ಲಿ ಈ ಸರ್ಕಾರ ವಿಫಲವಾಗಿದೆ. ಅವರಿಗೆ ಕೊಡಿಯುವುದಕ್ಕೆ ನೀರಿಲ್ಲ, ನಲ್ಲಿ ಸೌಕರ್ಯವಿಲ್ಲ, ಒಂದು ಕೊಳ್ಳಾಯಿ ಇಲ್ಲ. ಸರ್ಕಾರದವರು ಕೊಡದೆ ಇದ್ದರೆ ಹೋಗಲಿ, ನಾವೇ ಯಾರಾದರೂ ಕಂಟ್ರಾಕ್ಟರನ್ನು ಕರೆದುಕೊಂಡು ಬಂದು ಅನಧಿಕೃತವಾಗಿ ಲೈನ್ ಎಳ್ಳದೆ ಅಲ್ಲಿಂದ ಕೊಳಾಯಿ ಹಾಕಿಸೋಣ, ಸರ್ಕಾರ ಅಥವಾ ಕಾರ್ಪೊರೇಷನ್ ಏನು ಮಾಡುತ್ತ, ನೋಡೋಣ ಎನ್ನುವ ಪರಿಸ್ಥಿತಿ ಬಂದಿದೆ. ಇದು ಎಲ್ಲಿಯವರೆಗೆ ಹೋಗಿದೆ ಎಂದರೆ ಬಹಳ ಗುರುತರವಾದ ಪರಿಸ್ಥಿತಿ ಬಂದಿದೆ. ಸರ್ಕಾರಕ್ಕೆ ಎಚ್ಚರಿಕೆ ಕೊಡುತ್ತೇನೆ. ಸರ್ಕಾರದವರು ಈ ಸದನದಲ್ಲಿ ಒಂದು ಸ್ಪಷ್ಟವಾದ, ನಿರ್ದಿಷ್ಟವಾದಂಥ ಹೇಳಿಕೆಯನ್ನು ಕೊಡಲಿ. ಎಷ್ಟೆಷ್ಟು ಜನ ಕೆಲಸ ಬೇಕು ಎಂದು ಹೇಳಿ ಕೆಲಸಕ್ಕೆ ಬರುತ್ತಾರೆ ಅವರಿಗೆಲ್ಲಾ ಕೆಲಸ ಕೊಡಬೇಕು. ಅವರು ಇಲ್ಲಿಗೆ ಭಿಕ್ಷೆ ಬೇಡುವುದಕ್ಕೆ ಬಂದಿಲ್ಲ. ಅವರುಗಳು 5 ತಿಂಗಳ ಹಿಂದೆ ಇಲ್ಲಿಗೆ ಬಂದವರು. ಸರಕಾರದವರು ಸರಿಯಾದ ಒಂದು ಆಶ್ವಾಸನೆಯನ್ನು ಕೊಡದಿದ್ದರೆ ಮಾನ್ಯ ಬಾಪೂ ಗೌಡರು ಹೇಳಿದ ರೀತಿಯಲ್ಲಿ. ಈ ಸದನದಲ್ಲಿ ಆಶ್ವಾಸನೆ ಕೊಡುವವರೆಗೆ ಧರಣಿ ಮಾಡಬೇಕಾಗುತ್ತದೆ ಎಂದು ತಮ್ಮ ಮೂಲಕ ಅವರಿಗೆ ತಿಳಿಸುತ್ತೇನೆ.

2-30 P. M.

ಶ್ರೀ ಎಸ್. ಪೈ. ಪಾಟೀಲ್ (ಸಿಂಧಗಿ).—ನಾನು ಈಗ ಈ ವಿಷಯದ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. ಗುಲ್ಬರ್ಗ ಜಿಲ್ಲೆ ಪ್ರಚಾರ ಬಹಳಷ್ಟು ಆಯಿತು ಎಂದು ಎಲ್ಲರ ಭಾವನೆ ಕೆರಳಿಸುತ್ತಿದೆ. ಸಂಕುಚಿತ ಭಾವನೆ ಬಿಟ್ಟು ನಮ್ಮಲ್ಲಿ ಏನು ನಡೆದಿದೆ ಎಂಬುದನ್ನು ನೋಡಬೇಕು. ನಾನು ಮುದ್ದೇಬಿಹಾಳಕ್ಕೆ ಹೋಗಿ ಅಲ್ಲಿಯ ಶೋಚನೀಯ ಪರಿಸ್ಥಿತಿಯನ್ನು ನೋಡಿಕೊಂಡು ಬಂದಿದ್ದೇನೆ. ಮತ್ತು ಅಲ್ಲಿಯ ಪ್ರತಿನಿಧಿಗಳಾದ ಸನ್ಮಾನ್ಯರಿಗೂ ಈ ವಿಚಾರ ಗೊತ್ತಿದೆ: ಹೋದವಾರ ಒಬ್ಬ ಕ್ರಿಶ್ಚಿಯನ್ ಮನುಷ್ಯ ಸತ್ತು ಹೋದ ಎಂದು ಕ್ರಿಶ್ಚಿಯನ್ ಮಾನ್ಯರು ಒಬ್ಬರು ಹೇಳಿದರು. ಅವರು ಸತ್ತ ಸುದ್ದಿಯನ್ನು ಕಲ್ಪನೆ ಮಾಡಿ ಹೇಳಲಿಲ್ಲ ಎಂದು ಹೇಳುತ್ತೇನೆ.

ಶ್ರೀ ಬಾಪು ಗೌಡ.—ಇದು ಯಾರ ಮನೆಯಲ್ಲಿ ನಡೆಯಿತು ?

ಶ್ರೀ ಎಸ್. ಪೈ. ಪಾಟೀಲ್.—ಬಾಬೂ ಗೌಡರ ಮನೆಯಲ್ಲಿ, ಗುಲ್ಬರ್ಗ ಬಗ್ಗೆ ಪ್ರಚಾರ ಬಹಳ ನಡೆಯಿತು. ಅವರ ಬಗ್ಗೆ ಏನು ಸಂಕುಚಿತ ಭಾವನೆ ಇದೆ ಅದು ಸರಿಯಿಲ್ಲ ಎಂದು ಹೇಳುತ್ತೇನೆ. ನಾವು ಎಂ. ಎಲ್. ಎ ಗಳು ಅಲ್ಲಿಗೆ ಹೋದರೆ ನಾವು ಏನನ್ನೂ ಮಾಡಲಿಲ್ಲ ಎಂದು ಬಯ್ಯುವುದು, ಧೋತರ ಮತ್ತು ಜೋಪಿಯನ್ನು ಕತ್ತು ಹಾಕಿ ನಮಗೆ ಅವಮಾನ ಮಾಡುತ್ತಾರೆ. ಮಂತ್ರಿಗಳಾದ ನಿಮಗೆ ಹೇಳತಕ್ಕ ಮಾತು ಇಷ್ಟೇ. ಮೊನ್ನೆ ಧಾರ್ ಮತ್ತು ಟಿ. ಎ ಹೆಗ್ಡೆ ಅವರು ಬಿಜಾಪುರಕ್ಕೆ ಬಂದಿದ್ದರು. ಸೆಂಟ್ರಲ್ ಗವರ್ನಮೆಂಟಲ್ಲಿ ಇವೊತ್ತು ಇದ್ದ ಮಂತ್ರಿಗಳು ನಾಳೆ ಇರುವುದಿಲ್ಲ. ಥೇಂಜ್ ಆಗುತ್ತಾ ಇರುತ್ತಾರೆ. ಸೆಂಟ್ರಲ್ ಗವರ್ನಮೆಂಟ್ ಪಾಲಿಸಿ ಇಲ್ಲಿ ಹೇಳಲಿಕ್ಕೆ ಬರುವುದಿಲ್ಲ. ಹನುಮಂತಯ್ಯನವರು ಇದ್ದರು, ಟಿ. ಎ. ಪೈಯವರು ಇದ್ದರು, ಈಗ ಬೇರೆ ಯವರು ಬಂದಿದ್ದಾರೆ.. ಮಂತ್ರಿಗಳು ಏನು ಬರುತ್ತಾರೆ ಅವರು ಅವರ ಜೊತೆಯಲ್ಲಿ 10-20 ಮಂದಿ ಪ್ರಾಪಗ್ಯಾಂಡಿಸ್ಟ್‌ಗಳನ್ನು ಕರೆದುಕೊಂಡು ಬರುತ್ತಾರೆ ಅವರು ಬಂದಾಗ ಏನಾದರೂ ಮಾಡುತ್ತಾರೆ ಎಂದು ನಾವು ಅಂದುಕೊಂಡಿರುತ್ತೇವೆ, ಆದರೆ ಅವರುಗಳು ಏನೂ ಮಾಡುವುದಿಲ್ಲ. ಆಗ ನಮಗೆ ನಿರಾಸೆ ಉಂಟಾಗುತ್ತದೆ. ಈಗ 800 ಜನರು ಕೆಲಸ ಬೇಕು ಎಂದು ಅರ್ಜಿಯನ್ನು ಹಾಕಿದ್ದಾರೆ. ಅವರಿಗೆಲ್ಲಾ ಕೆಲಸ ಮತ್ತು ಊಟ ಕೊಡಿಸುವ ಆಶ್ವಾಸನೆಯನ್ನು ಸರ್ಕಾರದವರು ಕೊಡಬೇಕು ಎಂದು ಹೇಳುತ್ತೇನೆ. ಈಗ ಅಲ್ಲಿ ಎಷ್ಟು ಮಂದಿ ಉಪವಾಸದಿಂದ ಸತ್ತಿ

ದ್ದಾರೆ ಎಂದು ಕೇಳುತ್ತೇನೆ. ಬರೀ ಪೋಸ್ಟ್‌ಮಾರ್ಟಂ ಮಾಡಿ ಯಾವುದರಿಂದ ಸತ್ತಿದ್ದಾರೆ ಎಂದು ಹೇಳುವುದರಲ್ಲಿ ಅದರಿಂದ ಏನೂ ಪ್ರಯೋಜನವಾಗುವುದಿಲ್ಲ. ಆದುದರಿಂದ ಈಗ ಇಲ್ಲಿಗೆ ಬಂದಿರುವ ಜನಕ್ಕೆ ತಕ್ಷಣ ಕೆಲಸ ಕೊಡಿಸುವ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಬಾಪುಗೌಡ ರಾಯಪ್ಪ.—ಈಗ ಯಾವುವಾವರೂ ಪೊಸ್ಟ್‌ಮಾರ್ಟಂ ರಿಪೋರ್ಟ್ ಬಂದಿದೆಯೇ ?

†Sri C. M. ARUMUGHAM (K. G. F.).—The people from those areas have come to Bangalore. I have stated in my Report that when people are shifted from one place to another for work, it is necessary to provide them drinking water. medical aid, shelter and food through fair price shops. My friend Sri Bapu Gowda stated that about 4,000 people have come down to Bangalore from Bijapur, Gulbarga and Bidar districts. The Ruling Party talk so much, but what is it they have done for them at Bangalore to provide them drinking water and other facilities ? Sri Chikke Gowda, Hon'ble Minister of State, is a big land-lord, and he has toured abroad when Sri Veerendra Patil was the Chief Minister. He stated that I have exaggerated my Report. What is the situation today? I want the Government to speak the truth. The Hon'ble Minister for Revenue must speak the truth to the House. Within a few days, they will have to provide jobs for more than 12 lakhs of people in those areas, and they will have to provide water for about 1,000 villages. In about 1,000 villages there is no drinking water. What is it they are going to do ? I am getting lot of letters every day from those areas. The Government have abolished the contract system. But they have not made any alternative arrangements, on account of which for the last 3-4 weeks there is no work of P. W. D. roads in those areas. Jelly breaking work is a cruel job in the ho sun. But ! those people are doing it even though they had not done it for agee. In the Governor's Address it is stated that they are awaiting the Government of India orders to release funds. The relief work extended to these areas is not continuous. The relief works under taken on the basis of contract system have been stopped without making alternative arrangements. The Government had mentioned about the Bangladesh relief measures but this time the Governor's address has not made a mention about the relief works in the drought affected areas of our State. Because the Governor comes from Rajasthan where drought conditions are rampant, he has thought it unnecessary to mention it in his address.

Sri K. H. PATIL (Minister for Agriculture and Forests).—Can the Governor be criticised on the floor of this House ? The Hon. Member can criticise the Government but he cannot criticise the Governor.

Sri C. M. ARUMUGAM.—The Governor has simply read the report drafted by the Government. The people who have come from other parts to Bangalore can be considered as refugees from our one State. These people have come to Bangalore after selling away their cattle for a paltry sum ; some of them have walked the distance ; some have come on bullock carts as they were not permitte to travel by train, A

friend of mine from the other side asked me to which part I belong. I told him that I belong to the ld Mysore area. He told me that that is the reason why I have given a favourable report in respect of those areas. I may tell the Government that if you do not take proper action to prevent the starvation desths and do not prevent people coming to Bangalore from other areas in search of jobs, I am afraid what is happening in Andhra might repeat is our State, if not today, atleast sometime later. The Governmens is deliberately neglecting the people of those areas for reasons best know t them. The drought relief measures are not matters between Congress (R) and Congress (O) but it is a matter concering the entire House. I therefere requst the Goverament to come out with the measures that they have adopted to combat the drought.

MADAM SPEAKER.—That is enough. There should be no more speeches on this subject.

ಶ್ರೀ ಎಂ ಎಸ್. ಕೃಷ್ಣನ್ (ಮಲ್ಲೇಶ್ವರಂ). ಮಾನ್ಯ ಅಧ್ಯಕ್ಷರೇ, ಇದರಲ್ಲಿ ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟ ವಿಷಯ ಎಂದರೆ ಮತ್ತಿಕೆರೆ ಗಾಮವೂ ಬರುತ್ತದೆ. ಈ ಗ್ರಾಮದ ಪಕ್ಷದಲ್ಲಿ ಸುಮಾರು ನಾನೂರು ಜನ ಇವೊತ್ತು ಇಲ್ಲಿಗೆ ಬಂದು ಗುಲ್ಬರ್ಗಾ ಕಡೆಯವರು ಎಂದು ಹೇಳುತ್ತಾರೆ ಇವರೆಲ್ಲ ಗುಡಿಸಲನ್ನು ಹಾಕಿಕೊಂಡು ಇದ್ದಾರೆ. ಇವರು ಬಹಳ ಕಷ್ಟಪಡುತ್ತಿದ್ದಾರೆ. ಇದರ ಬಗ್ಗೆ ನಾನು ಹೇಳುವುದು ನಮ್ಮ ಕಾರ್ಪೋರೇಷನ್ ಅಧಿಕಾರಿಗಳು ನ್ಲಂ ಏರಿಯಾದ ಮನೆಗಳನ್ನು ಒಡೆಸುವಂತ ಇವರ ಗುಡಿಸಲುಗಳನ್ನು ಒಡೆಸುತ್ತಾರೆಂದು ಕೇಳಿ ಬಂದಿದೆ. ಇದಕ್ಕೆ ನಮ್ಮ ಮಾನ್ಯ ನಗರಾಡಳಿತ ಮಂತ್ರಿಗಳು ಅವಕಾಶ ಕೊಡಬಾರದು ಎಂದು ತಮ್ಮ ಮೂಲಕ ಅವರಲ್ಲಿ ಕೇಳಿಕೊಳ್ಳುತ್ತೇನೆ. ಇವರಿಗೆರಾ ನೀರು ಇತ್ಯಾದಿ ಸೌಕರ್ಯಗಳನ್ನು ಕೊಡಿಸಿಕೊಡಬೇಕು, ಇದರಲ್ಲಿ ಕೆಲವರು ಪ್ರೈವೇಟ್ ಲ್ಯಾಂಡಿನಲ್ಲೂ ಗುಡಿಸಲನ್ನು ಹಾಕಿದ್ದಾರೆ. ಇವರು ಕೆಲವರು ಹೆಚ್. ಎಂ. ಟಿ., ಬಿ. ಇ. ಎಲ್. ಇತ್ಯಾದಿ ಕಡೆಗಳಲ್ಲಿ ಕೂಲಿ ಕೆಲಸ ಮಾಡಲು ಹೋಗುತ್ತಿದ್ದಾರೆಂದು ತಿಳಿಯಿತು. ಇವರನ್ನು ಒಡಿಸಬೇಕಾದರೆ ಬೇರೆ ಜಾಗ ಎಲ್ಲಿಯಾದರೂ ಕೊಟು ಕಳುಹಿಸುವುದು ಸರಿಯಾಗಿರುತ್ತದೆ. ಇದರ ಕಡೆಗೆ ಸರಕಾರ ಗಮನ ಕೊಡಬೇಕೆಂದು ಕೇಳ್ಕೊತ್ತೇನೆ.

ಶ್ರೀ ವಾಚಾಳ್ ನಾಗರಾಜ್.—ಸ್ವಾಮೀ ನಾನು ಈಗ ಹೊರಗೆ ಹೋಗಿದ್ದಾಗ ಒಂದು ವಿಚಾರ ನನಗೆ ತಿಳಿದು ಬಂತು. ಇಲ್ಲಿ ಬಂದಿರುವ ನಿರ್ಗತಿಕರನ್ನು ಪೋಲೀಸಿನವರು ಹೊಡೆದು ಬೆದರಿಸುತ್ತಿದ್ದಾರೆ ಎಂದು ಕೇಳಿಬರುತ್ತಿದೆ. ಇದರ ಬಗ್ಗೆ ಸರ್ಕಾರ ನೂಕ್ತ ನಿರ್ದೇಶನ ಕೊಡಬೇಕು.

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ಸ್ವಾಮಿ, ಬರಗಾಲದ ಬಗ್ಗೆ ಸರಕಾರ ಇಂದು ಈ ಸದನದಲ್ಲಿ ಖಚಿತವಾದ ಕೆಲವು ಭರವಸೆಗಳನ್ನು ನಮಗೆ ಕೊಡಬೇಕು. ಅವರೇ ಕೊಟ್ಟಿರುವ ಅಂಕೆಗಳ ಅಂದಾಜಿನ ಪ್ರಕಾರ ಸುಮಾರು 12ಲಕ್ಷ ಜನರಿಗೆ ಕೆಲಸಗಳನ್ನು ಒದಗಿಸಿಕೊಡಬೇಕಾಗಿದೆ ಎಂದಿದೆ. ಇದರಲ್ಲಿ ಕೇವಲ ಮೂರು ನಾಲ್ಕು ಲಕ್ಷ ಮೇಲೆ ಕೆಲಸ ಕೊಡಲಾಗಲಿಲ್ಲ ಎಂದರೆ ಇನ್ನೂ ಎಂಟು ಲಕ್ಷ ಜನರಿಗೆ ಕೆಲಸಗಳನ್ನು ಕೊಡುವುದು ಉಳಿದಿದೆ. ಇವರಿಗೆ ಎಲ್ಲಿಯಾದರೂ ಕೆಲಸ ಕೊಡಿ ಬೆಂಗಳೂರನ್ನಲ್ಲಿ ಇಲ್ಲವೇ ಬೇರೆ ಊರಿನಲ್ಲಿ ಕೊಡಿ. ಇದರ ಬಗ್ಗೆ ಹೇಳುತ್ತಿಲ್ಲ. ನೀವು ಇದುವರೆಗೆ ಖಚಿತವಾಗಿ ಎಷ್ಟು ಜನಕ್ಕೆ ಉದ್ಯೋಗವನ್ನು ಕಲ್ಪಿಸಿಕೊಟ್ಟಿದ್ದೀರಿ ಎನ್ನುವ ವಿವರಗಳನ್ನು ಖಚಿತವಾಗಿ ಹೇಳಲಿಲ್ಲ. ನಿರ್ದಿಷ್ಟವಾಗಿ ಎಷ್ಟು ಜನರಿಗೆ ಉದ್ಯೋಗಗಳನ್ನು ದೊರಕಿಸಿಕೊಡಲು ಸಾಧ್ಯ ಎನ್ನುವುದನ್ನು ಇಲ್ಲಿ ಹೇಳಬೇಕು. ಇನ್ನು ಆರ್ಮಗಂರವರ ವರದಿಯಲ್ಲಿ ಹೇಳಿರುವಂತೆ ಪ್ರತಿಯೊಂದು ತಾಲ್ಲೂಕಿನಲ್ಲೂ ಒಬ್ಬರು ಲಯಸನ್ ಅಧಿಕಾರಿಗಳು ಎಂದು ನೇಮಿಸಬೇಕು ಎಂದಿದೆ. ಇಲ್ಲಿಯವರೆಗೆ ಯಾವ ಯಾವ ತಾಲ್ಲೂಕುಗಳಲ್ಲಿ ಎಷ್ಟು ಜನ ಅಧಿಕಾರಿಗಳನ್ನು ನೇಮಕ ಮಾಡಿದ್ದೀರಿ ಮತ್ತು ಇದುವರೆಗೆ ಎಷ್ಟು ಜನರಿಗೆ ಉದ್ಯೋಗಗಳನ್ನು ಕೊಟ್ಟಿದ್ದೀರಿ? ಅದನ್ನು ಖಚಿತವಾಗಿ ಇಲ್ಲಿ ಹೇಳಬೇಕು.

† ಶ್ರೀ ಹೆಚ್. ಎಂ. ಚನ್ನಬಸಪ್ಪ (ಲೋಕೋಪಯೋಗಿ ಶಾಖೆಯ ಮಂತ್ರಿಗಳು).— ಮಾನ್ಯ ಅಧ್ಯಕ್ಷರೇ, ಈ ಪ್ರಶ್ನೆ ಬಹಳ ಗಹನವಾದುದು. ಇದರ ಬಗ್ಗೆ ನಾವು, ನೀವು ಎಲ್ಲರೂ ಕೂಡಿ ಯಾವ ಮಾರ್ಗದಲ್ಲಿ ವ್ಯವಸ್ಥೆ ಮಾಡಬೇಕು ಎನ್ನುವುದು ಪರಸ್ಪರ ಸಹಕಾರದಿಂದ ಮಾಡತಕ್ಕ ಕೆಲಸ. ಇಂತಹ ಜನರಿಗೆ ಕೆಲಸಗಳನ್ನು ಒದಗಿಸಬೇಕು ಮತ್ತು ಇವರಿಗೆ ಯೋಗ್ಯವಾದ ಪರಿಹಾರ ಸಿಗಬೇಕು ಮತ್ತು ಯೋಗ್ಯ ಮಾರ್ಗದಲ್ಲಿ ಇವರು ಜೀವನ ನಡೆಸುವುದಕ್ಕೆ ವ್ಯವಸ್ಥೆ ಮಾಡಬೇಕು. ನಮಗೆ ಇವರ ಕಷ್ಟ ಕಾರ್ಪಣ್ಯಗಳೇನು, ಅದಕ್ಕೆ ತಕ್ಕಂತೆ ಕೆಲಸಗಳನ್ನು ಮಾಡಿ ಇವರಿಗೆಲ್ಲ ಪರಿಹಾರಗಳನ್ನು ವ್ಯವಸ್ಥೆ ಮಾಡಬೇಕು ಎನ್ನುವುದರಲ್ಲಿ ಈ ಕಡೆಯ ಮೆಂಬರುಗಳು ಆ ಕಡೆಯ ಮೆಂಬರುಗಳು ಮತ್ತು ಸರಕಾರದಲ್ಲಿ ಯಾವ ಭಿನ್ನಾಭಿಪ್ರಾಯವೂ ಇಲ್ಲ. ಇಲ್ಲ ಏನು ತೊಂದರೆ ಇದೆ ಎನ್ನುವುದರ ಬಗ್ಗೆ ಸ್ಪಷ್ಟವಾಗಿ ಒಂದು ಮಾತು ಹೇಳಬೇಕಾಗಿದೆ. ಕೆಲಸ ಇರುವ ಕಡೆಗಳಲ್ಲಿ ಕೆಲಸಗಳನ್ನು ಕೊಡುವುದಕ್ಕೆ ಸಾಧ್ಯವೇ ಹೊರತು ಕೆಲಸಗಳಿಲ್ಲದ ಕಡೆ ಕೆಲಸಗಳನ್ನು ಕೊಡಬೇಕೆಂದು ಹೇಳುವುದು ಅದು ಇಂಪ್ರಾಕ್ಟಿಕಲ್ ಪ್ರಪೊಸಿಷನ್ ಆಗುತ್ತದೆ.

ಕೆಲಸ ಬೆಂಗಳೂರಿನಲ್ಲಿರಲಿ, ಮದ್ರಾಸಿನಲ್ಲಿರಲಿ, ಅಪ್ಪರ್ ಕೃಷ್ಣಾ ಯೋಜನೆಯಲ್ಲಿರಲಿ, ಘಟಪ್ರಭಾ, ಮಲಪ್ರಭಾ ಅಥವಾ ಬೇರೆ ಎಲ್ಲಿಯಾದರೂ ಕೆಲಸಗಳಿರಲಿ ಅಲ್ಲಿ ಕೆಲಸಗಳನ್ನು ಒದಗಿಸಲು ಸಾಧ್ಯವೇ ಏನಾ ಕೆಲಸಗಳಿಲ್ಲದ ಕಡೆಗಳಲ್ಲಿ ಕೆಲಸ ಕೊಡತಕ್ಕದ್ದು ಎಂದು ಹೇಳುವುದು ಸಾಧ್ಯವಾಗದ ಮಾತು ಎನ್ನುವುದನ್ನು ತಾವೆಲ್ಲರೂ ಒಪ್ಪುತ್ತೀರಿ. ಆದ್ದರಿಂದ ಎಲ್ಲೆಲ್ಲ ಕೆಲಸಗಳು ಇವೆ ಎಂಬ ಬಗ್ಗೆ ಸರ್ಕಾರ ರೊಕೇಟ್ ಮಾಡಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಸರ್ಕಾರದವರು ಕೆಲಸ ಕೊಡುವುದಕ್ಕೆ ತಯಾರಾಗಿದ್ದ ಮೇಲೆ ಅವರು ಅಲ್ಲಿಂದ ಬೆಂಗಳೂರಿಗೆ ವಲಸೆ ಬಂದಿರುವುದಕ್ಕೆ ಕಾರಣವಾದರೂ ಸಹ ಏನು ?

ಶ್ರೀ ಎಚ್. ಎಂ. ಚೆನ್ನಬಸಪ್ಪ.—ನಾನು ಹೇಳುವುದನ್ನು ಕೇಳುವುದಕ್ಕೂ ಸಹ ಸಹನೆ ಇಲ್ಲದಿದ್ದರೆ ಏನು ಮಾಡುವುದು? ಮೊದಲು ತಾವುಗಳು ಮಾತನಾಡುತ್ತಾ. ಸರ್ಕಾರದ ಭರವಸೆಗಳು ಇನ್ನು ಸಾಕು, ಮೊದಲು ಕೆಲಸ ಕೊಡಿ ಎಂದು ಕೇಳಿದಿರಿ ; ಅದರಂತೆ ನಾವು ಇಂದು ಕೆಲಸವನ್ನೇ ಕೊಡುವುದಕ್ಕೆ ತಯಾರಾಗಿದ್ದೇವೆ. ಕಳೆದ 12ನೇ ತಾರೀಖು ಎಂದು ಕಾಣುತ್ತದೆ, ಅಂದು ನಾನು ಸರ್ಕಾರದ ಪರವಾಗಿ ಈ ಸಭೆಯಲ್ಲಿ ವಾಗ್ದಾನ ಮಾಡಿದ್ದೆ. ಏನೆಂದರೆ, ಕಾಳೀನದಿ ಪ್ರಾಜೆಕ್ಟ್‌ನಲ್ಲಿ 10 ಸಾವಿರ ಜನರಿಗೆ, ಅವರು ಎಲ್ಲಿಂದಲೇ ಬರಲಿ, ತಕ್ಷಣ ಕೆಲಸ ಒದಗಿಸಿಕೊಡುತ್ತೇನೆಂದು. ಅದು ನನಗೆ ಜ್ಞಾಪಕ ಇದೆ. ಆದರೆ ಇದು ಮಾನ್ಯ ಬಾಪೂಗೌಡರು ಹೇಳಿದರು .....

ಶ್ರೀ ಬಾಪೂಗೌಡ ರಾಯಪ್ಪ.—ನೀವು ರಾಜಕೀಯ ದೃಷ್ಟಿಯಿಂದ ಈ ಬಗ್ಗೆ ಮಾತನಾಡಬಾರದು ? ಈ ವಿಚಾರದಲ್ಲಿ ನಾವು ಒಂದು ಹೇಳುವುದು, ನೀವು ಒಂದು ಹೇಳುವುದು ಸರಿಯಲ್ಲ .

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ಏನು ಹೇಳುತ್ತಾರೆ ಬುದನ್ನು ಮೊದಲು ಕೇಳಿ.

ಶ್ರೀ ಎಚ್. ಡಿ. ದೇವೇಗೌಡ.—ಗುಲ್ಬರ್ಗ, ಬಿಜಾಪುರ, ಬೀದರ್ ಜಿಲ್ಲೆಗಳಲ್ಲಿ ಏನೇನು ಕಾರ್ಯಕ್ರಮಗಳನ್ನು ಕೈಕೊಳ್ಳಲಾಗಿದೆ ಎಂಬ ಪ್ಲಾನ್ ಈಗ ಬೇಡ. ಈಗ ನಮ್ಮ ಮುಂದಿರುವ ಪ್ರಶ್ನೆ ವಿಭೂತಿಪುರದಲ್ಲಿ ಬಂದಿರುವ ಜನರ ಪ್ರಶ್ನೆ.

ಅಧ್ಯಕ್ಷರು,—ಅವರು ಹೇಳುವುದನ್ನು ಪೂರ್ತಿ ಹೇಳಿದ ಮೇಲೆ ಬೇಕಾದರೆ ತಾವು ಮಾತನಾಡಿ ; ಮಧ್ಯೆ ಮಧ್ಯೆ ಯಾರೂ ಮಾತನಾಡುವುದು ಬೇಡ.

Sri H. D. DEVE GOWDA.—I dont want to take much time of the House. The Hon. Minister may go and meet these people who have come there discuss their problems with them and report the matter to the House what has been done. Beyond that, I do not want any explanation from the Government.

Sri H. M. CHANNABASAPPA. I have announced on that day "that arrangements will be made for providing employment for 10,000 men from scarcity areas in Kalinadi Project. We will have to provide free transport to and fro for them. The employment is to be assured for about 5 to 6 months. Mr. Bapu Gowda has promised that he would arrange to send 10,000 people from Gulbarga alone. Action will be taken in the matter."

ನಂತರ ನಾನು ತಾರೀಖು 3-2-1973 ರಂದು ಶ್ರೀ ಬಾಪೂಗೌಡರಿಗೆ ಒಂದು ಪತ್ರ ಬರೆದೆ, ಅದರ ವಿವರ ಈ ರೀತಿ ಇದೆ :—

"My dear Sri Bapu Gowda,

You will please remember that you assured on the floor of the Assembly that you would secure 10,000 workers from Gulbarga District alone to be accommodated in Kalinadi Project. I had announced on the floor of the House that necessary arrangements will be made to provide employment in the Project for a period of 5 to 6 months. In pursuance of that assurance necessary arrangements are made. The Government would arrange for free transpost and free food will be supplied during transport. Sheds, water and light will be provided free. Kindly get in touch with the Divisional Commissioner for making arrangments to shift the labour in need of employment. I shall be glad to know that you will be able to send the first contingent. The Divisional Commissioner will make necessary arrangments."

ಶ್ರೀ ಬಾಪೂಗೌಡ ರಾಯಪ್ಪ.—ಇದು ಹರಿಕಥೆ. ಇವರಿಗೆ ನಾಲ್ಕು ಸಾವಿರ ಜನರಿಗೆ ಕೆಲಸ ಕೊಡುವ ಪೋರೆ ಇಲ್ಲ; ಇನ್ನು ಹತ್ತು ಸಾವಿರ ಜನರಿಗೆ ಎಲ್ಲಿ ಕೆಲಸ ಕೊಡುತ್ತಾರೆ?

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಅವರಿಗೆ ಪತ್ರ ಬರೆದೆ, ಆದರಂತೆ ಅವರು ಜನರನ್ನು ಕಳುಹಿಸಿಲ್ಲ ಎಂದು ನಾನು ಹೇಳಿದೆ.

ಶ್ರೀ ಬಾಪೂಗೌಡ ರಾಯಪ್ಪ.—ಈಗ ಇಲ್ಲಿಗೆ ಬಂದಿರುವ ಜನರಿಗೆ ಎಲ್ಲಿ ಕೆಲಸ ಕೊಡುತ್ತೀರಿ?

ಅಧ್ಯಕ್ಷರು.—ಅವರು ತಮಗೆ ಪತ್ರ ಬರೆದ ಮೇಲೆ ಆ ಜನರನ್ನು ಅಲ್ಲಿಗೆ ಕಳುಹಿಸಿಕೊಡದೆ ಬೆಂಗಳೂರಿಗೆ ಪತ್ರ ಕಳಿಸಿದರಿ; ಮಾನ್ಯ ಮಂತ್ರಿಗಳು ಪೂರ್ತಿ ಏನು ಹೇಳುತ್ತಾರೆಂಬುದನ್ನು ಕೇಳಿ. ಇಲ್ಲಿರುವವರಿಗೆ ಏನು ಮಾಡಬೇಕೆಂದಿದ್ದಾರೆಂಬುದನ್ನು ಮೊದಲು ಕೇಳಿ. ಚಿಟಿಕೆ ಹೊಡೆಯುವುದರಲ್ಲಿ ಚಪ್ಪರ ಹಾಕುವುದಕ್ಕಾಗುವುದಿಲ್ಲ. ಅವರು ಏನು ಹೇಳುತ್ತಾರೆಂಬುದನ್ನು ಕೇಳುವುದಕ್ಕೆ ಇಷ್ಟವಿಲ್ಲದೆ ವಾಕ್ ಮಾಡುತ್ತೇವೆಂದು ಹೇಳಿದರೆ ಅದು ನಿಮ್ಮ ಇಷ್ಟ.

ಶ್ರೀ ಪಾಟಾಳ್ ನಾಗರಾಜ್.—ಅವರು ಇಲ್ಲಿಗೆ ಬಂದು ನುಮಾರು ಒಂದು ತಿಂಗಳಾಯಿತು.

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಈಗ ನಾನು ಯಾವ ಚರ್ಚೆಯಿಪ್ಪಣಿಯನ್ನೂ ಮಾಡುವುದಕ್ಕೆ ಹೋಗುತ್ತಿಲ್ಲ. ನಾನು ಬರೆದಿರುವ ಕಾಗದದ ವಿಷಯ ಹೇಳಿದೆ. ಆ ಜನರು ಬೆಂಗಳೂರಿನಲ್ಲಿಯೇ ಇರಲಿ, ಗುಲ್ಬರ್ಗದಲ್ಲಿಯೇ ಇರಲಿ, ಪತ್ತೆಲ್ಲಿಯೇ ಇರಲಿ, ಅವರು ನಮ್ಮವರು, ಅವರಿಗೆ ಕೆಲಸ ಕೊಡಬೇಕು. ಆದರಲ್ಲಿ ಅಡ್ಡಿಯಿಲ್ಲ. ಆ ಭಾಗಗಳಿಂದ ಬಂದಿರುವ ಜನರು 500 ಇರಲಿ, ಎರಡು ಸಾವಿರ ಇರಲಿ, ಆಷ್ಟೂ ಜನಕ್ಕೂ ಕೆಲಸ ಕೊಡುವುದಕ್ಕೆ ನಾವು ತಯಾರಿದ್ದೇವೆ. ಮುಖ್ಯವಾಗಿ ತಮ್ಮ ಸಹಕಾರ ಕೊಡಿ. ಎಲ್ಲೆಲ್ಲ ಎಷ್ಟೆಷ್ಟು ಜನರು ಇದ್ದಾರೆಂಬುದನ್ನು ನಮಗೆ ತಿಳಿಸಿ. ಅವರನ್ನು ಇಂದು, ನಾಳೆ ಮತ್ತು ನಾಡಿದ್ದು ಟ್ರಾನ್ಸ್‌ಪೋರ್ಟ್ ಮಾಡುತ್ತೇವೆ. ರೈಲಿಂ, ಬಸ್ ಅಥವಾ ಸ್ಪೆಷಲ್ ಬಸ್‌ನಲ್ಲಿ ಅವರನ್ನು ಕಳಿಸಿಕೊಡುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ. ಅಲ್ಲಿ ಈಗ ಮನೆಗಳು ಸಿದ್ಧವಾಗಿವೆ. ಅವರಿಗೆ ಮನೆಗಳನ್ನು ಕೊಟ್ಟು 5 ತಿಂಗಳ ಕಾಲ ಕೆಲಸ ಒದಗಿಸಿಕೊಡುತ್ತೇವೆ. 1500 ರಿಂದ ಒಂದು ಸಾವಿರ ಇರಲಿ, ಅವರೆಲ್ಲರನ್ನೂ ಕಳಿಸಿಕೊಡುವುದಕ್ಕೆ ಏರ್ಪಾಡು ಮಾಡುತ್ತೇನೆ. ದಯವಿಟ್ಟು ತಾವು ಸಹಕಾರ ಮಾಡಿ ಎಲ್ಲೆಲ್ಲಿ ಅವರು ಇದ್ದಾರೆಂಬುದನ್ನು ತಿಳಿಸಿ. ನಾವು ಕೇವಲ ಹತ್ತು ಸಾವಿರ ಜನರಿಗೆ ಮಾತ್ರ ಕೆಲಸ ಒದಗಿರುತ್ತೇವೆಂದು ತಾವು ತಿಳಿಯಬಾರದು. ಈಗಾಗಲೇ ಯೋಜನೆಗಳನ್ನು ತಯಾರು ಮಾಡಿ ಎಕ್ಸಿಕ್ಯುಟಿವ್ ಇಂಜಿನಿಯರ್‌ಗೆ ಪತ್ರ ಬರೆದಿದ್ದೇವೆ. ಅವರು ಎಲ್ಲ ವ್ಯವಸ್ಥೆ ಮಾಡುತ್ತಿದ್ದಾರೆ. ಜನ ಹೇಗೆ ಹೇಗೆ ಬರುತ್ತಾರೆ, ಎಲ್ಲೆಲ್ಲ ಕೆಲಸ ಇದೆ ಎಂಬುದನ್ನು ರೂಕೇಟ್ ಮಾಡಿದ್ದೇವೆ. ಬೇಕಾದರೆ ಲಿಸ್ಟನ್ನು ಟೈಪ್ ಮಾಡಿಸಿ ಕೊಡುತ್ತೇನೆ.

3-00 P. M.

Sri C. M. ARUMUGAM.— Let the Minister tell us what he has done. Let him give us an overall picture of the State; and more particularly about the people who have come to Bangalore.

ಶ್ರೀ ಎಚ್. ಎಂ. ಚನ್ನಬಸಪ್ಪ.—ಈಗ ಚಿಕ್ಕಮಗಳೂರಿಂದ ಸ್ಥಿತ್ಕೆನರಾಕ್ಕೆ ಒಂದು ಕೋಟಿ 66 ಲಕ್ಷ ರೂಪಾಯಿಗಳ ಒಂದು ರಕ್ಷೆಯನ್ನು ಮಾಡುತ್ತಿದ್ದೇನೆ. ಅಲ್ಲಿ ಎರಡೂವರೆ ಸಾವಿರ ಜನಗಳನ್ನು ಇಟ್ಟುಕೊಂಡು ಅವರಿಗೆ ವಸತಿಯನ್ನು ಕಲ್ಪನೆ ಮಾಡಿಕೊಟ್ಟು ಅವರಿಗೆ ಕೆಲಸವನ್ನು ನಿರ್ಮಾಣ ಮಾಡಿಕೊಡಬೇಕೆಂದು ನಾವು ಸಂಬಂಧಪಟ್ಟವರಿಗೆ ಆಜ್ಞೆ ಕೊಟ್ಟಿದ್ದೇವೆ. ಅಲ್ಲಿ ವ್ಯವಸ್ಥೆ ನಡೆಯುತ್ತಿದೆ. ಕೆಲಸ ಇಲ್ಲದಿದ್ದರೆ ನಾವು ನೀವು ಇಬ್ಬರೂಕೂಡಿ ಹೊಸ ಕೆಲಸವನ್ನು ನಿರ್ಮಾಣ ಮಾಡಿ ಅವರಿಗೆ ಕೆಲಸವನ್ನು ಕೊಡತಕ್ಕಂಥಾದ್ದು ಅವಶ್ಯಕತೆ ಇದೆ. ಈ ದೃಷ್ಟಿಯಿಂದ ಅಥವಾ ಪೀಡಿತ ಪ್ರದೇಶದ ಜನಗಳಿಗೆ ಕೆಲಸವನ್ನು ಒದಗಿಸಿಕೊಡುವ ದೃಷ್ಟಿಯಿಂದ ನಾನು ಮೊನ್ನೆ ಭೂಪಾಲ್‌ಗೆ ಹೋಗಿದ್ದೆ ವರಾಹ ಮತ್ತು ಜೀಡ್ರಿ ಯೋಜನೆಗಳಲ್ಲಿ ಕೆಲಸವನ್ನು ಪ್ರಾರಂಭ ಮಾಡುವುದಕ್ಕೆ ಅವಕಾಶವನ್ನು ಕೊಡಬೇಕು ಅದಕ್ಕೆ ಸಂಬಂಧಿಸಿದವರ ಜೊತೆಯಲ್ಲಿ ಪ್ರಾತನಾಡಿ ಅಲ್ಲಿ ಹೈ ಮಿಸರಿ ಕೆಲಸವನ್ನು ಪ್ರಾರಂಭ ಮಾಡಬೇಕೆಂದು ಮ್ಯಾನೇಜಿಂಗ್ ಡೈರೆಕ್ಟರಿಗೆ ಆಜ್ಞೆ ಯನ್ನು ಕೊಡಲಾಗಿದೆ. ಅವರಿಗೆ ಕೆಲಸವನ್ನು ಒದಗಿಸುವ ವಿಷಯದಲ್ಲಿ ನಮಗೂ ನಿಮಗೂ ಭಿನ್ನಾಭಿಪ್ರಾಯವಿಲ್ಲ. ಶ್ರೀಮಾನ್ ಪಾಟೀಲ್ ನಾಗರಾಜ್ ಅವರು ನಮ್ಮನೆ ನನಗೆ ಒಂದು ಫೋನ್ ಮಾಡಿ ಇಷ್ಟು ಜನ ಕೆಲಸ ಇಲ್ಲದೆ ಕಷ್ಟದಲ್ಲಿದ್ದಾರೆ ಅವರಿಗೆ ಕೆಲಸವನ್ನು ಕೊಡಿಸಿ ಕೊಡಿ ಎಂದು ಹೇಳಿದ್ದರೆ ನಾನು ಅವರಿಗೆ ಊಟ ಹಾಕಿಸಿ ಫ್ರೀ ಟ್ರಾನ್ಸ್‌ಪೋರ್ಟೇಷನ್ ಕೊಟ್ಟು ಕೆಲಸ ನಡೆಯುವ ಜಾಗಕ್ಕೆ ಕಳುಹಿಸಿ ಕೊಡುತ್ತಿದ್ದೆ. ನಾನು ತಮಗೆ ಇಷ್ಟು ಮಾತ್ರ ಆಶ್ವಾಸನೆ ಕೊಡುತ್ತೇನೆ. ಈಗ ಬರಗಾಲ ಪೀಡಿತ ಪ್ರದೇಶದಿಂದ ಬೆಂಗಳೂರು ಮತ್ತು ಇತರ ಕಡೆಗಳಿಗೆ ಬಂದಿರತಕ್ಕವರು 800 ಜನ ಇರಲಿ, ಒಂದು ಸಾವಿರ ಜನ ಇರಲಿ, ಅಥವಾ 2 ಸಾವಿರ ಜನ ಇರಲಿ ಯಾವ ಸಂಕೋಚವೂ ಬೇಡ, ಅವರೆಲ್ಲರೂ ಎಷ್ಟು ಜನ ಇದ್ದಾರೆ ಎಂಬುದನ್ನು ಹೇಳಿ. ಅವರೆಲ್ಲರಿಗೂ ಇವೊತ್ತು ಸಂಜೆಯೊಳಗಾಗಿ ಜೈಲಿನ ಅಥವಾ ಬಸ್ಸುಗಳಲ್ಲಿ ಸೀಟುಗಳನ್ನು ಬುಕ್ ಮಾಡಿಸಿ ಇಲ್ಲಿಂದ ಕಾಳಿನದಿ ಯೋಜನೆಯ ಪ್ರದೇಶಕ್ಕೆ ಕರೆದುಕೊಂಡು ಹೋಗಿ ಅವರಿಗೆ ಕೆಲಸ ಕೊಡಿಸುತ್ತೇವೆ. ಇಂದು ಸಂಜೆಯಿಂದಲೇ ಅವರನ್ನು ಕರೆದುಕೊಂಡು ಹೋಗಲು ಎಷ್ಟಾ ಸಿದ್ಧತೆಯನ್ನು ಏರ್ಪಾಡು ಮಾಡಿ ಅವರಿಗೆ ಊಟವನ್ನೂ ಕೊಡಿಸೋಣ. ಇಲ್ಲಿಂದ ಹೊರಟು ಕಾಳಿನದಿ ಯೋಜನೆಯ ಪ್ರದೇಶಕ್ಕೆ ಹೋಗುವವರೆಗೆ ದಾರಿಯಲ್ಲಿ ಊಟ ತಿಂಡಿ ಎಲ್ಲವೂ ಸರ್ಕಾರದ ಖರ್ಚಿನಲ್ಲಿಯೇ ಕೊಡಲಾಗುವುದು. ಕೆಲಸವನ್ನು ಕೊಟ್ಟ ನಂತರವೂ 2—3 ದಿವಸಗಳ ಕಾಲ ಉಚಿತವಾಗಿ ಊಟ ಹಾಕಲಾಗುವುದು. ಅಲ್ಲಿ ವಸತಿ ಸೌಲಭ್ಯ, ದೀಪ, ಕುಡಿಯುವ ನೀರು ಎಲ್ಲವೂ ಅವರಿಗೆ ಫ್ರೀಯಾಗಿ ಕೊಡುತ್ತೇವೆ. ನಿಮಗೂ ನಮಗೂ ಈ ವಿಚಾರದಲ್ಲಿ ಯಾವ ವ್ಯತ್ಯಾಸವೂ ಇಲ್ಲ. ನಾನು ಇಷ್ಟು ಹೇಳಿದ ಮೇಲೆ ಅಲ್ಲಿಂದ ಬಂದಿರತಕ್ಕ ಜನಗಳಿಗೆ ನಮ್ಮ ಪರವಾಗಿ ವಿರೋಧ ಪಕ್ಷದವರಾದ ನೀವು ಅವರಿಗೆ ಆಶ್ವಾಸನೆಯನ್ನು ಕೊಡಿ. ಅದನ್ನು ನಾನು ನಡೆಸಿಕೊಡುತ್ತೇನೆ. ನಾನು ಇಷ್ಟು ಹೇಳುತ್ತೇನೆ, ಸರ್ಕಾರಕ್ಕೆ ಈ ಬಗ್ಗೆ ಏನು ಕಷ್ಟ ಬಂದರೂ ಅವನ್ನು ಎದುರಿಸುವುದಕ್ಕೆ ನಾವು ಸಿದ್ಧವಾಗಿದ್ದೇವೆ. ನಮ್ಮ ಜೊತೆಯಲ್ಲಿ ನೀವು ಸಹಕರಿಸಿದರೆ ಸಾಕು. ಯಾವ ಸಮಸ್ಯೆಯನ್ನು ಬೇಕಾದರೂ ಎದುರಿಸೋಣ ಎಂದು ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ಶ್ರೀಮಾನ್ ಬಾಪುಗೌಡ ಅವರು ಈ ಸಮಸ್ಯೆಯನ್ನು ಈ ಸಭೆಯಲ್ಲಿ ಎತ್ತಿದ್ದಾರೆ. ವಿಭೂತಿಪುರದಲ್ಲಿ 800 ಜನ ಕಾರ್ಮಿಕರು ಏನಿದ್ದಾರೆ ಅವರ ಸಮಸ್ಯೆಯ ಬಗ್ಗೆ ಈ ಸಭೆಯಲ್ಲಿ ತಮ್ಮ ಗಮನವನ್ನು ಅವರು ಕೆಳೆದಿದ್ದಾರೆ. ನಾನು ಮೊದಲೇ ಹೇಳಿದ್ದೇನೆ. ಈ ಬಗ್ಗೆ ವ್ಯಾಪಕವಾದ ಕಾರ್ಯಕ್ರಮಗಳು ಏನಿವೆ ಎಂಬುದನ್ನು ಮಾನ್ಯ ಮಂತ್ರಿಗಳು ಮೊದಲೇ ಹೇಳಿಲ್ಲ ಶ್ರೀಮಾನ್ ಪಾಟೀಲ್ ನಾಗರಾಜ್ ಅವರು ನನಗೆ ಫೋನ್ ಮಾಡಿದ್ದರೆ ನಾನು ಆ ಕೆಲಸ ಮಾಡುತ್ತಿದ್ದೆ ಎಂದು ಅವರು ಹೇಳಿದರು. ಈಗ ಒಂದೂವರೆ ತಿಂಗಳಿಂದ ಪತ್ರಿಕೆಗಳಲ್ಲಿ ಅವರ ಗೋಳು ಪ್ರಕಟವಾಗುತ್ತಿದ್ದರೂ ಆ ಬಗ್ಗೆ ಸರ್ಕಾರ ಏನೂ ಮಾಡಿಲ್ಲ. ವಿಭೂತಿಪುರಕ್ಕೆ ಆ ಜನಗಳು ಬಂದು ಒಂದೂವರೆ ತಿಂಗಳಾಯಿತು. ಅವರ ಬವಣೆಯ ಬಗ್ಗೆ ಪತ್ರಿಕೆಗಳಲ್ಲಿ ಮುಖಪುಟಗಳಲ್ಲಿ ಬಂದಿದೆ. ಸರ್ಕಾರದಲ್ಲಿ ಇನ್‌ಫರ್‌ಮೇಷನ್ ಡಿಪಾರ್ಟ್‌ಮೆಂಟ್ ಇಲ್ಲವೆ ? ಮಂತ್ರಿಗಳು ಆ ವಿಷಯವನ್ನು ಪತ್ರಿಕೆಗಳಲ್ಲಿ ಓದಲಿಲ್ಲವೇ ! ನಾನು ಬಸ್‌ಸ್ಟ್ಯಾಂಡಿನಲ್ಲಿ ನಿಂತುಕೊಂಡು ಮತ್ತು ಶ್ರೀಮಾನ್ ಪಾಟೀಲ್ ನಾಗರಾಜ್ ಅವರು ರೈಲ್ವೆ ಸ್ಟೇಷನ್ನಿನಲ್ಲಿ ನಿಂತುಕೊಂಡು ಸಂತಸ್ಥರನ್ನು

ಸ್ವಾಗತಿಸುವುದಕ್ಕೆ ಇರಬೇಕಾಗಿತ್ತೇ ? ಅವರು ಬಂದಿದಾರೆಂದು ನಾವು ಮಂತ್ರಿಗಳ ಮನೆಗೆ ಬಂದು ಹೇಳಬೇಕೇ ? ನಾವು ಅವರಿಗೆ ಫೋನ್ ಮಾಡಬೇಕಾಗಿತ್ತು. ಅವರಿಗೆ ನಮ್ಮ ಸಹಕಾರ ಬೇಕಾಗಿತ್ತು ಎಂದು ಅವರು ಹೇಳಿದರು.

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದು ನಿಮ್ಮ ಕರ್ತವ್ಯ ನೀವು ಮಾಡಿ ಎಂದು ನಾನು ಹೇಳಲಿಲ್ಲ. ಈ ವಿಷಯವನ್ನು ಈ ಸಭೆಯಲ್ಲಿ ತರುವ ಬದಲು ನನಗೆ ಸ್ವಲ್ಪ ಫೋನ್ ಮಾಡಿ ಚನ್ನಬಸಪ್ಪ ಇದು ಮಾಡಿ ಎಂದಿದ್ದರೆ ನಾನೇ ನೇರವಾಗಿ ಅಲ್ಲೇ ಮಾಡಬಹುದಾಗಿತ್ತು.

ಶ್ರೀ ಎಚ್. ಡಿ. ದೇವೇಗೌಡ.—ಬರಗಾಲ ಪರಿಸ್ಥಿತಿಯ ಬಗ್ಗೆ ನಾವು ಈ ಸಭೆಯಲ್ಲಿ ಸಾಕಷ್ಟು ಚರ್ಚೆಯನ್ನು ಮಾಡಿದ್ದೇವೆ. ಇನ್ನು ಈ ಬಗ್ಗೆ ಚರ್ಚೆ ಮಾಡಬಾರದು ಎನ್ನುವ ನಿರ್ಣಯಕ್ಕೆ ನಾವು ಬಂದಿದ್ದೇವೆ. ನಮ್ಮನ್ನು ಹೊಡೆಸಿ ಪೋಲೀಸ್ ಸ್ಟೇಷನ್ನಿಗೆ ಹಾಕಿಸುವಷ್ಟು ಭೀಕರ ಪರಿಸ್ಥಿತಿಯನ್ನು ನಿಮಗೆ ತರುತ್ತೇವೆ. ಅದನ್ನು ಎದುರಿಸುವುದಕ್ಕೆ ನೀವು ತಯಾರಾಗಿದ್ದೀರಾ ? ಇವರಲ್ಲಿ ಯಾವ ರಾಜಕಾರಣವೂ ಇಲ್ಲ. ಒಂದೂವರೆ ತಿಂಗಳಿಂದ ವಿಭೂತಿಪುರವಲ್ಲಿ ಅವರು ಕಷ್ಟಪಡುತ್ತಿದ್ದರೂ ಸರ್ಕಾರದವರು ಅದನ್ನು ಕಣ್ಣುಬಿಟ್ಟು ನೋಡಿಲ್ಲ. ಅದಕ್ಕಾಗಿಯೇ ನಾನು ಮೊದಲೇ ಕೇಳಿದ್ದೇನೆ. ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಏನು ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೀರಿ ತಿಳಿಸಿರಿ ಎಂದು. ಕಾಳಿನದಿ ಯೋಜನೆಯ ಪ್ರದೇಶಕ್ಕೆ ಹೋದ 500 ಜನ ಅಲ್ಲಿ ಕೆಲಸ ಇಲ್ಲದೆ ವಾಪಸ್ಸು ಬಂದರು.

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದು ನಿಜವಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಇರೋದೇ ಸಾಕು. ನಿಮಗೆ ನವಾಲು ಹಾಕುತ್ತೇನೆ. ಪತ್ರಿಕೆಗಳಲ್ಲಿ ಮುಖ ಪುಟಗಳಲ್ಲಿ ಫೋಟೋ ನಮೇತ ಬಂದಿದೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಮೂರನೆಯ ತಾರೀಕಿಗೆ ಬಾಪು ಗೌಡರಿಗೆ ಪತ್ರ ಬರೆದಿದ್ದೇನೆ. ಆ ಮೇರೆ ಡಿವಿಜನಲ್ ಕಮಿಷನರಿಗೆ ಸಹ ಬರೆದಿದ್ದೇನೆ. ತಾವು ಇವತ್ತು ಹೇಳುವ ವಿಚಾರ ನನಗೆ ಬಂದಿಲ್ಲ. ತಾವು ಇವತ್ತು ಅದನ್ನು ತಿಳಿಸಿದ್ದೀರಿ. ವಿಚಾರ ಮಾಡಿನುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ಅಲ್ಲಿ ಹೋದಂತಹ ಜನರು ವಾಪಸ್ಸು ಬಂದದ್ದು ಪತ್ರಿಕೆಗಳಲ್ಲಿ ಪ್ರಕಟವಾಗಿದೆ.

Sri H. M. CHANNABASAPPA.—If you can believe me, I have not read such things. That is one thing. I am giving a categorial assurance that I will see to it, this evening itself.

ಶ್ರೀ ಎಚ್. ಡಿ. ದೇವೇಗೌಡ.—ನ್ಯೂಳಾಂತರ ಮಾಡುತ್ತೇವೆ ಎಂದು ತಾವು ಹೇಳುತ್ತೀರಿ. ಮುಖ್ಯಮಂತ್ರಿಯವರು ಹೇಳುತ್ತಾರೆ – ಅದನ್ನು ಕೈಬಿಡಲಾಗಿದೆ ಎಂದು.

Sri H. M. CHANNABASAPPA. – When I am assuring you today that it has been made even before 3-2-73, you must also trust me. Before writing to Sri Bapu Gowda, I had to make sure that all these arrangements are ready and fortunately I went there to see.

ಶ್ರೀ ವಾಟಾಳ್ ನಾಗರಾಜ್.—ಹಿಂದೆ ಒಂದು ಸಾರಿ ದನಗಳನ್ನು ಅರಣ್ಯಕ್ಕೆ ಕಳಿಸುತ್ತೇವೆ ಎಂದು ಒಬ್ಬರು ಮಂತ್ರಿಯವರು ಹೇಳಿದರು. ಆ ನಂತರ ಮುಖ್ಯ ಮಂತ್ರಿಯವರು ಕಳಿಸುವುದಿಲ್ಲ ಎಂದು ಹೇಳಿದರು. ಅಂದರೆ ಅಲ್ಲಿ ಒಬ್ಬ ಗೊಬ್ಬರಿಗೆ ಮುಖ್ಯಮಂತ್ರಿ ಅಂಡರ್‌ಸ್ಟ್ಯಾಂಡಿಂಗ್ ಇಲ್ಲವೆಂದು ಅರ್ಥವಾಗುತ್ತದೆ. ಇವತ್ತು ಬೆಂಗಳೂರು ನಗರಕ್ಕೆ ಬಂದಿರತಕ್ಕ ಜನ ಏನಿದ್ದಾರೆ. ಅವರಿಗೆ ಕಾರ್ಖಾನೆಗಳಲ್ಲಿ ಮುಖ್ಯಮಂತ್ರಿಗಳ ಕೈಕೆಳಗೆ ಕೆಲಸ ಕೊಡಿಸಬಹುದು. ಅಲ್ಲದೆ ಬೆಂಗಳೂರಿನಲ್ಲಿ ಅನೇಕ ಖಾಲಿ ಜಾಗಗಳು ಇವೆ. ಅಲ್ಲಿ ಇವರಿಗೆ ಬೇಕಾದಷ್ಟು ಕೆಲಸಗಳನ್ನು ಕೊಡಿಸಬಹುದು.

Sri D B KALMANKAR—Madam Speakar, I had been to Vibhuthipura some time back and made enquiries from those people. They told me that they were gainfully employed and arrangements are being made for the their residence. Some of them had been given houses. Some of them were on the way side and they have also made arraagements to give them residential accommodation. Some of them

(SRI D. B. KALMANKAR)

desired to go to the nearby villages where some contractor wanted labour. I think there is some truth in what is being said on the other side and some of the arrangements might have not fully satisfied them. Now the Government is coming forward to say that they are prepared to take all these people to the work-spot and I think there should not be any objection. I do not understand why the Hon,ble Member Sri Vatal Nagaraj should insist that they should be employed here only. If it is a fact that they are not gainfully employed or that they are having work only for one or two days in a week and are starving on the rest of the days, then there is no use keeping them here. It is better they are taken to the work-spot as suggested by the Hon'ble Minister. I think with this assurance, the discussion on this subject may be closed and employment will also be given to them by the Government.

ಶ್ರೀ ಕಾಗೋಡು ತಿಮ್ಮಪ್ಪ.—ನಾನು ಸ್ಪಷ್ಟವಾಗಿ ತಮಗೆ ಎರಡು ಮೂರು ಪ್ರಶ್ನೆಗಳನ್ನು ಕೇಳಿದ್ದೇನೆ. ಕ್ಷಾಮ ಪ್ರದೇಶದಲ್ಲಿ ಎಷ್ಟು ಜನರಿಗೆ ಉದ್ಯೋಗ ಕೊಡುವುದಕ್ಕೆ ಅಂದಾಜು ಮಾಡಿದ್ದೀರಿ ?

ಅಧ್ಯಕ್ಷರು.—ಅದನ್ನು ಲೀಡರ್ ಆಫ್ ದಿ ಅಪೊಸಿಶನ್ ಬೇಡ ಎಂದು ಹೇಳಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ. ಈ ಸನ್ನಿವೇಶದಲ್ಲಿ ಚರ್ಚೆ ಪ್ರಾರಂಭವಾಗಿದೆ. ಉತ್ತರ ಬೇಕಾದರೆ ನಾಳೆ ಹೇಳಲಿ.

ಅಧ್ಯಕ್ಷರು.—ಅವರು ತಾಲ್ಲೂಕು ವೈಸ್ ಸ್ಟೇಟ್‌ಮೆಂಟ್ ಕೊಡುತ್ತೇನೆಂದು ಹೇಳಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ.—ಕಾಳೀ ನದಿ ಪ್ರೊಜೆಕ್ಟಿನಲ್ಲಿ 10 ಸಾವಿರ ಜನರಿಗೆ ವ್ಯವಸ್ಥೆ ಮಾಡುತ್ತೇವೆ, ಮುಗೂರು—ಚಿಕ್ಕಮಗಳೂರು ರಸ್ತೆ ಕೆಲಸದಲ್ಲಿ 5 ಸಾವಿರ ಜನರಿಗೆ ಏರ್ಪಾಡು ಮಾಡುತ್ತೇವೆಂದು ಹೇಳುತ್ತಿದ್ದೀರಿ. ಹಾಗಾದರೆ ಜಿಲ್ಲಾಧಿಕಾರಿಗಳು ಆಗ ಏನು ಮಾಡುತ್ತಿದ್ದರು? ಜನರು ಹೇಗೆ ಹೋಗುವಾಗ ಏಕೆ ಅವರಿಗೆ ಅದನ್ನು ಹೇಳಿಲ್ಲ ? ಅವರು ಹೇಳಿದ್ದರೆ ಆ ಜನರು ಇಲ್ಲಿಗೆ ಏಕೆ ಬರುಬೇಕಾಗಿತ್ತು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಮಾನ್ಯ ಸದಸ್ಯರ ಸಲಹೆಯನ್ನು ಸ್ವಾಗತಿಸುತ್ತೇನೆ. ಅದ ಎಲ್ಲೆಲ್ಲಿ ಸಾಧ್ಯ ಎಂಬುದನ್ನು ನೋಡಿ ಪಟ್ಟಿ ಮಾಡಿ ಹೇಳಬೇಕಾಗಿದೆ. ಅದರ ಜೊತೆಗೆ ಪ್ರಚಾರ ಮಾಡತಕ್ಕದ್ದು ಅವಶ್ಯಕತೆ ಇದೆ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಅರಣ್ಯ ಇಲಾಖೆಯಿಂದ ಬಂಬುಗಳನ್ನು ತರಿಸಿ ಮನೆಗಳನ್ನು ಕಟ್ಟಿಸಿ ಅದು ತಯಾರಾಗುತ್ತಿದೆ. ಇನ್ನು ತಾವು ಹೇಳತಕ್ಕದ್ದು—ಅಲ್ಲಲ್ಲಿ ಎಷ್ಟೆಷ್ಟು ಎಂದು. ತಮ್ಮ ಕೋರಿಕೆಗೆ ಬೆಲೆ ಕೊಟ್ಟು ಯಾವ್ಯಾವ ಪ್ರೊಜೆಕ್ಟುಗಳಲ್ಲಿ ತಾಲೂಕುಗಳಲ್ಲಿ, ಮತ್ತು ಜಾಗಗಳಲ್ಲಿ ಎಷ್ಟೆಷ್ಟು ಜನರನ್ನು ಅಬ್ಸಾರ್ಬ್ ಮಾಡಬಹುದೆ ಬಗ್ಗೆ ಒಂದು ರಫ್ ಎಸ್ಟಿಮೇಟ್ ಮಾಡಿ ಆ ಪಟ್ಟಿಯನ್ನು ಈ ನಿಟ್ಟಿಗೆ ಅವಶ್ಯ ಜಾಗ್ರತೆ ಕೊಡುವುದಲ್ಲದೆ ಅದನ್ನು ದೇಶಕ್ಕೂ ಪ್ರಚಾರ ಮಾಡುವುದಕ್ಕೆ ನನ್ನ ಅಡ್ಡಿಯಿಲ್ಲ. ಇದನ್ನು ನಾವು ಮತ್ತು ನೀವು ಕೂಡಿ ತಮ್ಮ ಸಲಹೆ ನಮ್ಮ ಸಲಹೆಗಳನ್ನು ಸ್ವೀಕರಿಸಿಕೊಂಡು ವಿಚಾರ ಮಾಡಿ ಈ ಕೆಲಸವನ್ನು ಬಗೆಹರಿಸೋಣ ಎಂದು ಮಾತ್ರ ನಾನು ಹೇಳುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಈಗ ಮಾನ್ಯ ಶ್ರೀ ಚನ್ನಬಸಪ್ಪನವರು ಮಾತನಾಡುತ್ತಾ ಹೇಳಿದರು. ಹೊರಗಡೆಯವರಿಗೆ ಕೆಲಸಕ್ಕೆ ಇಲ್ಲಿ ಅವಕಾಶ ಮಾಡಿಕೊಡುತ್ತಿದ್ದೇವೆ, ಇಲ್ಲಿರುವವರಿಗೆ ಅವಕಾಶವಾಡಿಕೊಡುತ್ತಿಲ್ಲವೆಂದು. ಇಲ್ಲಿರುವವರಲ್ಲಿ ಕೆಲವರು ಈಗಾಗಲೇ ಅಲ್ಲಿ ಕೆಲಸ ಮಾಡುತ್ತಿದ್ದಾರೆ. ಕಂಟ್ರಾಕ್ಟರ್ಸ್ ಹತ್ತಿರ ಅವರನ್ನು ಕೆಲಸ ಮಾಡುವುದಕ್ಕಾಗಿ ನೇಮಿಸಿ. ಅಂತಹ ವರಿಗೆ ಕಾರ್ಪೊರೇಷನ್ನಿನಲ್ಲಿ ಹಾಗೂ ಟ್ರಸ್ಟ್‌ಬೋರ್ಡಿನಲ್ಲಿ ಅನುಕೂಲಗಳನ್ನು ಮಾಡಿಕೊಡಿ. ಒಂದು ವೇಳೆ ಅವರು ಅಲ್ಲಿಗೆ ಹೋಗುವುದಕ್ಕೆ ತಯಾರಾಗಿದ್ದರೆ ಕೂಡಲೇ ಕಳುಹಿಸಿಕೊಡಿ. ಯಾರ್ಯಾರು ಈಗಾಗಲೇ ಕಂಟ್ರಾಕ್ಟರುಗಳ ಹತ್ತಿರ ಕೆಲಸ ಮಾಡುತ್ತಿದ್ದಾರೋ ಅಂತಹವರಿಗೆ ಎಲ್ಲ ಅನುಕೂಲಗಳನ್ನು ಕಲ್ಪಿಸಿಕೊಡಿ. ಸ್ಲಂಕ್ಲಿಯರೆನ್ಸ್ ಯೋಜನೆಗಳಿಂದ ಅನುಕೂಲಗಳನ್ನು ಮಾಡಿ

ಕೊಡಿ. ಈ ನಂದರ್ಭದಲ್ಲಿ ನನ್ನ ಒಂದು ನೂಚನೆಯೇನೆಂದರೆ, ಈಗಾಗಲೇ ವಲಸೆ ಬಂದಂಥ ಬಡವರಿಗೆ ಎಲ್ಲ ನೌಲಭ್ಯಗಳನ್ನು ಒದಗಿಸಿಕೊಟ್ಟು ಮತ್ತು ಮುಂದೆ ಈ ರೀತಿ ವಲಸೆ ಬಾರದೇ ಇರುವ ಹಾಗೆ ಅಲ್ಲಿಯೇ ಅವರಿಗೆ ನಕಲ ನೌಲಭ್ಯಗಳನ್ನು ಕಲ್ಪಿಸಿ ಕೊಡುವಹಾಗೆ ನೋಡಿಕೊಳ್ಳುವುದು ಮುಖ್ಯ. ಅದಕ್ಕಾಗಿ ಈಗಲೇ ನರ್ಕಾರದವರು ನೂಕ್ತ ಕ್ರಮಗಳನ್ನು ಹಾಕಿಕೊಳ್ಳಬೇಕು. ಏಕೆಂದರೆ ಅಲ್ಲಿಂದ ಬರುವವರು ಯಾರನ್ನೂ ಕೇಳಿ ಬರುವುದಿಲ್ಲ, ಮಾನ್ಯ ಶ್ರೀ ಬಾಪು ಗೌಡರನ್ನು ಕೇಳಿ ಬರುತ್ತಾರೆಯೇ ? ಇತರ ಎಂ.ಎಲ್.ಎ. ಗಳನ್ನು ಕೇಳಿ ಬರುತ್ತಾರೆಯೇ ! ಕೆಲಸಗಳು ಇಲ್ಲದಿದ್ದ ಪಕ್ಷದಲ್ಲಿ ಕೆಲಸಕ್ಕಾಗಿ ಮಾತ್ರ ಬೆಂಗಳೂರಿಗೆ ಬರುತ್ತಾರಷ್ಟೆ ಆದ್ದರಿಂದ ಇಂತಹ ಅಭಾವ ಪರಿಸ್ಥಿತಿ ಇರುವ ಪ್ರದೇಶಗಳಲ್ಲಿ ಯಾರಾದರೂ ಒಬ್ಬ ನ್ಪೆಷರ್ ಆಫೀನರನ್ನು ನೇಮಕ ಮಾಡಲಾಗುತ್ತದೆಂದು ಏಕೆ ಇಲ್ಲಿ ಹೇಳುವುದಿಲ್ಲ ? ಮುಖ್ಯವಾಗಿ ಆ ಕಡೆಯಿಂದ ಬಂದಿರುವವರನ್ನು ನೋಡಿ ಅವರಿಗೆ ಯಾವ ರೀತಿಯಲ್ಲಿ ನಮಾಧಾನವನ್ನು ಹೇಳಬೇಕೋ ಆ ರೀತಿಯಾಗಿ ಹೇಳಿ. ತಮ್ಮ ಕಾರ್ಯವನ್ನು ತಾತ್ಪುರ್ತಿಯಿಂದ ಮಾಡಿ. Let there not be false sense of prestige. Please go and talk to them; they are our own people.

ಶ್ರೀ ಎಚ್. ಎಂ. ಚನ್ನ ಬನಪ್ಪ.—ನರ್ಕಾರ ಈ ಬಗ್ಗೆ ಏನು ಕೆಲನ ಮಾಡಬೇಕೆಂಬ ಬಗ್ಗೆ ಈಗಾಗಲೇ ಆಜ್ಞೆಗಳನ್ನು ಕೊಟ್ಟಾಗಿದೆ. ಯಾರ್ಯಾರು ಕೆಲನಗಳನ್ನು ಹುಡುಕಿಕೊಂಡು ಬಂದಿದ್ದಾರೋ ಅವರು ಏನೇನು ಕೆಲನಗಳನ್ನು ಮಾಡುವುದಕ್ಕೆ ಅರ್ಹರಿದ್ದಾರೆ ಅದನ್ನು ಅರಿತುಕೊಂಡು ಅವರಿಗೆಲ್ಲರಿಗೂ ಈ ನಾಯಂಕಾಲದಿಂದಲೇ ಕೆಲನಗಳನ್ನು ಕೊಡುವ ವ್ಯವಸ್ಥೆ ಮಾಡುವುದಕ್ಕೆ ನಂಬಂಧಪಟ್ಟ ಅಧಿಕಾರಿಗಳಿಗೆ ಈಗಾಗಲೇ ಆಜ್ಞೆಗಳನ್ನು ಕೊಟ್ಟಿದೆ. ಆ ರೀತಿಯಾಗಿ ವ್ಯವಸ್ಥೆ ಮಾಡುತ್ತೇವೆ. ಈ ನಂಜೆ 6 ಘಂಟೆಯೊಳಗೆ ಏನೇನು ಕಾರ್ಯಗಳು ಆಗಬೇಕೋ ಅವು ಈಗಾಗಲೇ ಪ್ರಾರಂಭವಾಗಿದೆ. ನರ್ಕಾರದಲ್ಲಿ ಇದಕ್ಕೆ ನಂಬಂಧಪಟ್ಟ ಅಧಿಕಾರಿಗಳು ಏನೇನು ಕಾರ್ಯಕ್ರಮಗಳನ್ನು ಮಾಡಿದ್ದಾರೋ ಅವೆಲ್ಲವನ್ನೂ ತಮಗೆಲ್ಲರಿಗೂ ತಿಳಿನಲೂ ವ್ಯವಸ್ಥೆ ಮಾಡಿದ್ದೇನೆ. ಆ ವಿಚಾರಗಳನ್ನು ತಮಗೂ ತಿಳಿನಲು ಆಜ್ಞೆ ಮಾಡಿದ್ದೇನೆ. ನಂಬಂಧಪಟ್ಟ ಅಧಿಕಾರಿಗಳನ್ನೂ ನಹ ನಾನು ಈಗಾಗಲೇ ಕಂಡು ಮಾತನಾಡಿದ್ದೇನೆ. ಅವಕ್ಕೆ ನೂಕ್ತ ವ್ಯವಸ್ಥೆಯನ್ನು ನಹ ಮಾಡಿದ್ದೇನೆ.

ಶ್ರೀ ಎಂ. ಎನ್. ಕೃಷ್ಣನ್.—ಬರೀ ಬಾಯಿಮಾತಿನಿಂದ ವ ವಸ್ಥೆ ಮಾಡುವುದಲ್ಲ. ಅದರಿಂದ ಏನಾಗುತ್ತದೆ ? ಮಾನ್ಯ ಬಾಪು ಗೌಡರಿಗೆ ಇಲ್ಲಿಗೆ ಒಬ್ಬರೂ ಬರಲಿಲ್ಲವೆಂದು ಪತ್ರ ಬರೆದಂತಾಗುತ್ತದೆ. ಆದ್ದರಿಂದ ನೀವು ಈ ನಭೆಯಲ್ಲಿ ಏನು ಅಶ್ಯೂರೆನ್ಸ್ ಕೊಟ್ಟಿದ್ದೀರೋ ಆ ಪ್ರಕಾರ ಏನೇನು ಕ್ರಮಗಳನ್ನು ತೆಗೆದುಕೊಂಡಿದ್ದೀರಿ ಎಂಬುದನ್ನು ಹೇಳಿದರೆ ಒಳ್ಳೆಯದು.

Sri J. P. SARWESH.—We would like to know why he has not written to the P. W. D. Minister. Let him say whether he has met the Divisional Commissioner.

ಶ್ರೀ ವಿಶ್ವನಾಥರೆಡ್ಡಿ.—ಮಾನ್ಯ ಶ್ರೀ ಚನ್ನ ಬನಪ್ಪ ನವರಿಗೆ ನಾನು ಒಂದು ಮಾತನ್ನು ಹೇಳಬೇಕಾಗಿದೆ. ಮಾನ್ಯ ಶ್ರೀ ಬಾಪು ಗೌಡರಿಗೆ ಪತ್ರ ಬರೆದು ಏನೂ ಮಾಡಲಿಲ್ಲ. ಆದರೆ ಇವತ್ತು ಮಾನ್ಯ ಮಂತ್ರಿಗಳು ಹೇಳಿದ ಪ್ರಕಾರ ನಂಜೆಯೊಳಗೆ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದ್ದರೂ ನಾನು ಅಲ್ಲಿ ಹೋಗಿ ನೋಡಿರುವ ಪ್ರಕಾರ ಯಾವ ಅಧಿಕಾರಿಯೂ ಅಲ್ಲಿ ಇಲ್ಲ. ಆದ್ದರಿಂದ ನಾವು ಇಲ್ಲಿ ಚರ್ಚೆಮಾಡಿ ಏನು ಪ್ರಯೋಜನ ? ನುಮಾರು 800 ಜನರು ಅಲ್ಲಿ ಇದ್ದಾರೆ. ಇವರು ಹೇಳುವುದು ಅಲ್ಲಿ 10 ಜನರೂ ನಹ ಇಲ್ಲವೆಂದು. ಇದು ನರಿಯಲ್ಲ. ಅದಕ್ಕಾಗಿ ಕೂಡಲೇ ಜಾಗ್ರತೆಯಾಗಿ ನಿಮ್ಮ ಅಧಿಕಾರಿಗಳನ್ನು ಅಲ್ಲಿಗೆ ಕಳುಹಿಸಿಕೊಡಿ. ಅವರಿಗೆ ಕೆಲನಗಳನ್ನು ಕೊಡುತ್ತೇವೆ. ಊಟಕ್ಕೂ ವ್ಯವಸ್ಥೆ ಮಾಡುತ್ತೇವೆಂದು ಹೇಳಿದ್ದೀರಿ. ಬರೀ ಭಾಷಣದಲ್ಲಿ ಹೇಳುವುದೇ ಆಗಿದೆಯೇ ಹೊರತು ಕಾರ್ಯಗತವಾಗುವುದರಲ್ಲಿ ಏನೂ ನಡೆದಿಲ್ಲ. ಯಾವ ಕ್ರಮವನ್ನು ನೀವು ಇನ್ನೂ ತೆಗೆದುಕೊಳ್ಳಲಿಲ್ಲವೆಂದು ನಾನು ಧಾರಾಳವಾಗಿ ಹೇಳುತ್ತೇನೆ. ಏಕೆಂದರೆ ಅವರಿಗೆ ಬಹಳ ತೊಂದರೆಯಾಗುತ್ತಿದೆ. ಅನೇಕರು ನತ್ತು ಹೋಗುವ ಪರಿಸ್ಥಿತಿಯಲ್ಲಿ ನರಳುತ್ತಿದ್ದಾರೆ. ನೀವು ಅಶ್ವಾನನೆ ಕೊಡುವುದರಿಂದ ಏನೂ ಪ್ರಯೋಜನವಿಲ್ಲ. ನೀವೇ ಖುದ್ದು ಬಂದು ನೋಡಿ ಕೂಡಲೇ ಒಬ್ಬ ಅಧಿಕಾರಿಯನ್ನಾದರೂ ಕೂಡಲೇ ನೇಮಿನಿ ಇವರಿಗೆ ಕೆಲನಗಳನ್ನು ಕೊಡುವ ಉದ್ದೇಶದಿಂದ ನಾಳೆಯೇ ಒಂದು ಆಫೀನನ್ನು ತೆಗೆಯಿರಿ. ಬೇಕಾದರೆ ನಾವೆಲ್ಲರೂ ಬಂದು ನಿಮಗೆ ಗೈಡ್ ಮಾಡುತ್ತೇವೆ. ಇದುವರೆಗೂ ಯಾವ ಒಬ್ಬ ಅಧಿಕಾರಿಯೂ ಬಂದು ನೋಡಿಲ್ಲ. ಕುರುಡು ಮಾತುಗಳನ್ನು ಆಡಬೇಡಿ. ಅದು ನರಿಯಲ್ಲ.

ಶ್ರೀ ಎಚ್. ಎಂ. ಚನ್ನ ಬನಪ್ಪ.—ಮಾನ್ಯ ನದನ್ಯರು ಹೇಳಿದಹಾಗೆ ಕೇಳಬೇಕೆಂದು ಹೇಳುತ್ತೀರಾ ? ಅದರಲ್ಲಿ ಅರ್ಥವೇನಿದೆ ?

ಶ್ರೀ ವಿಶ್ವನಾಥರೆಡ್ಡಿ.—ಹಾಗೇನೂ ಇಲ್ಲ. ಮಾನ್ಯ ಶ್ರೀ ಬಾಪು ಗೌಡರಿಗೆ ಏನು ಉತ್ತರ ಕೊಟ್ಟಿದ್ದೀರಿ ? ನಮಗೆ ಸೌಜನ್ಯವಿಡಿಯೇ ! ಡಿವಿಷನರ್ ಕಮಿಷನರಿಗೆ ಮಾತ್ರ ಡೆಪ್ಯುಟಿ ಕಮಿಷನರಿಗೆ ಈ ವಿಚಾರವಾಗಿ ಕೂಡಲೇ ಕ್ರಮ ತೆಗೆದುಕೊಳ್ಳಬೇಕೆಂದು ಏಕೆ ಹೇಳಬಾರದು ? ಈಗ 10 ಸಾವಿರ ಜನರು ಅಲ್ಲಿಂದ ಬರುವುದಕ್ಕೆ ತಯಾರಾಗಿದ್ದಾರೆ.

Sri H. M. CHANNABASAPPA.—I am happy to hear Sri Viswanatha Reddy who is very rarely emotional.

ಶ್ರೀ ವಿಶ್ವನಾಥರೆಡ್ಡಿ.—ಆ ಅಧಿಕಾರಿಗಳಿಗೆ ಹೇಳುವಷ್ಟು, ಬರೆಯುವಷ್ಟು ಸಹಕಾರ ಬೇಡವೇ ! ಅವರಿಗೆ ಈ ವಿಚಾರದಲ್ಲಿ ಬರಬೇ ತೀರಬೇಕು.

ಶ್ರೀ ಎಚ್. ಎಂ. ಚನ್ನಬಸಪ್ಪ.—ನಾನು ಈಗ ಏನು ಅಶ್ವಾಸನೆಯನ್ನು ಕೊಟ್ಟಿದ್ದೀನೋ ಅದರ ಪ್ರಕಾರ 6 ಅಥವಾ 7 ಘಂಟೆಯವರೆಗೂ ಇವತ್ತು ಕಾದು ನೋಡಿ. ವಿಷಯ ಗೊತ್ತಾಗುತ್ತೆ.

ಶ್ರೀ ವಿಶ್ವನಾಥರೆಡ್ಡಿ.—ಅಧಿಕಾರಿಗಳು ಅಲ್ಲಿಗೆ ಯಾರು ಹೋಗುತ್ತಿದ್ದಾರೋ ಅವರು ನಮ್ಮ ಜೊತೆಯಲ್ಲಿಯೇ ಬಂದು ನೋಡಲಿ.

ಅಧ್ಯಕ್ಷರು.—ಆಗಲೇ ಡಿವಿಷನಲ್ ಕಮಿಷನರ್ ಬಂದಿದ್ದರು. ಅವರೂ ಕೂಡ ಹೋಗುತ್ತಾರೆ. ಅಲ್ಲಿನ ವಿಚಾರವನ್ನು ತಿಳಿದ ಕೊಂಡು ಸೂಕ್ತ ಕ್ರಮ ತೆಗೆದುಕೊಳ್ಳುತ್ತಾರೆ.

10. failurue of the Government to tackle the problems of agriculture workers by non-fixation of a minimum living wage, giving sites and materials far construction of houses.

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).— ನನ್ನ ತಿದ್ದುಪಡಿ ಈ ರೀತಿ ಇದೆ :

(VI) ಪ್ರಸ್ತಾವಪ ಕೊನೆಯಲ್ಲಿ ಈ ಕೆಳಗಿನ ಪದಗಳನ್ನು ಸೇರಿಸತಕ್ಕದು ಆದರೆ;

1) ಕ್ಷಾಮ ನಿವಾರಣೆ ಮಾಡುವುದರಲ್ಲಿ ಈ ಸರ್ಕಾರ ಸಂಪೂರ್ಣ ವಿಫಲಗೊಂಡಿದೆ.

2) ಕನ್ನಡವನ್ನು ರಾಜ್ಯದ ಅಡಳಿತ ಭಾಷೆಯನ್ನಾಗಿ ಎರಾ್ಲ ಹಂತದಲ್ಲಿಯೂ ತರುವುದ ರಲ್ಲಿ ಈ ಸರ್ಕಾರ ವಿಫಲಗೊಂಡಿದೆ.

3) ರಾಜ್ಯದ ವಾರ್ಷಿಕ ಯೋಜನೆಯನ್ನು ರೂಪಿಸುವಲ್ಲಿ ಈ ಸರ್ಕಾರ ರಾಜ್ಯದ ಸಂಪ ನ್ಮೂಲಗಳನ್ನು ಬಳಸಿಕೊಳ್ಳುವುದರಲ್ಲಿ ಮತ್ತು ಸಾಮಾನ್ಯ ಜನರ ಜೀವನ ಸ್ಥಿತಿಯನ್ನು ಉತ್ತಮ ಪಡಿಸುವುದರಲ್ಲಿ ನಿರ್ದಿಷ್ಟ ಕಾರ್ಯಕ್ರಮಗಳನ್ನು ರೂಪಿಸುವಲ್ಲಿ ಈ ಸರ್ಕಾರ ವಿಫಲಗೊಂಡಿದೆ.

4) ನೀರಾವರಿ ಕ್ಷೇತ್ರವನ್ನು ವಿಸ್ತರಿಸುವುದರಲ್ಲಿ ನಿರ್ದಿಷ್ಟ ಯೋಜನೆಯನ್ನು ರೂಪಿಸದೇ ಇರುವುದು ಈ ಸರ್ಕಾರ ದುರ್ಬಲತೆಯನ್ನು ಸೂಚಿಸುತ್ತದೆ.

5) ವಿದ್ಯುಚ್ಛಕ್ತಿ ಉತ್ಪಾದನೆ ಮಾಡುವ ಕೆಲಸದಲ್ಲಿ ರಾಜ್ಯದಲ್ಲಿರುವ ಸಂಪನ್ಮೂಲಗಳನ್ನು ಬಳಸಿಕೊಳ್ಳುವುದರಲ್ಲಿ ಈ ಸರ್ಕಾರ ಸೋತಿದೆ.

6) ನಿರುದ್ಯೋಗಿಗಳಿಗೆ ಮತ್ತು ಸಮಾಜದ ದುರ್ಬಲ ವ್ಯಕ್ತಿಗಳಿಗೆ, ಉದ್ಯೋಗ ಮತ್ತು ಜೀವನ ವ್ಯವಸ್ಥೆಯನ್ನು ಒದಗಿಸಿ ಕೊಡುವುದರಲ್ಲಿ ಈ ಸರ್ಕಾರ ವಿಫಲಗೊಂಡಿದೆ.

7) ಗ್ರಾಮಾಂತರ ಪ್ರದೇಶದ ಜನರಿಗೆ ಕುಡಿಯುವ ನೀರಿನ ಸೌಲಭ್ಯವನ್ನು ಒದಗಿಸು ವುದರಲ್ಲಿ ಈಸರ್ಕಾರ ವಿಫಲವಾಗಿದೆ,

8) 6 ರಿಂದ 11 ವರ್ಷದ ಮಗುವಿಗೂ ಕಡ್ಡಾಯ ಶಿಕ್ಷಣ ಕೊಡುವುದರಲ್ಲಿ ಸರ್ಕಾರ ವಿಫಲ ಗೊಂಡಿದ

9) ಭೂಹೀನರಿಗೆ, ಸರ್ಕಾರದ ಭೂಮಿಯನ್ನು ಉಚಿತವಾಗಿ ಹಂಚುವುದರಲ್ಲಿ ಈ ಸರ್ಕಾರ ವಿಫಲಗೊಂಡಿದೆ.

10) ರಾಜ್ಯದಲ್ಲಿ ಈವರೆಗೆ ರದ್ದಾಗದೇ ಇರುವ ಅನೇಕ ಇನಾಮುಗಳನ್ನು ಈವರೆಗೆ ರದ್ದುಮಾಡದೇ ಇರುವುದು ಈ ಸರ್ಕಾರದ ವಿಫಲತೆಯನ್ನು ಸೂಚಿಸುತ್ತದೆ.

11) ರಾಜ್ಯದ ಅಡಳಿತದಲ್ಲಿ ಭ್ರಷ್ಟಾಚಾರ ಜಾಸ್ತಿಯಾಗಿದ್ದು ಅಡಳಿತ ಮಟ್ಟ ಕುಸಿದು ಬಿದ್ದಿದೆ. ಅದುದರಿಂದ ಶುದ್ಧವಾದ ಅಡಳಿತವನ್ನು ಜನರಿಗೆ ನೀಡುವುದರಲ್ಲಿ ಈ ಸರ್ಕಾರ ಸಂಪೂರ್ಣವಾಗಿ ವಿಫಲಗೊಂಡಿದೆ.

Sri B. B. SAYANAK (Belgaum).—I beg to move :

VII That the following words shall be added at the end of the Motion : "but regret to note.—

1. that though the Mahajan Commission Report which was placed before the Parliament on 18-12-1970 by the State Home Minister of India for setling the Maharashtra — Mysore — Kerala border

disputes, is still pending for more then 17 years and the same may be solved on the basis of village as a unit, relative majority, Geographical contiguity and wishes of the people of the border area.

2. the Government has failed to control the prices of essential commodities which is causing great hardship to the people.

3. the government has failed to give employment facilities to the educated people.

4. the government has failed to bring socialism in the State.

5. the government has failed to errdicats the poverty of the masses.

6. the government has totally neglected the Marathi people of the border area in all respects.

7. the government has failed to provide employment facilities to the Marathi people in the State.

8. the government has failed to start major, minor or medium irrigation in the Marathi border area

†ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್ (ಹೊನವಗರ).—ಸನ್ಮಾನ್ಯ ಸಭಾಧ್ಯಕ್ಷರೇ, ಮಾನ್ಯ ರಾಜ್ಯಪಾಲರು ಮಾಡಿದ ಭಾಷಣಕ್ಕೆ ವಂದನಾ ನಿರ್ಣಯವನ್ನು ನಾನು ಸಂಪೂರ್ಣವಾಗಿ ಅನುಮೋದಿಸುತ್ತಾ ಕೆಲವು ವಿಚಾರಗಳನ್ನು ಹೇಳುವುದಕ್ಕೆ ಬಯಸುತ್ತೇನೆ. ಈ ಒಂದು ಹಂತದಲ್ಲಿ ನಮ್ಮ ಸರ್ಕಾರದ ನಾಯಕತ್ವ ಅನುಭವಿಸುತ್ತಿರುವ ಕಷ್ಟಕಾರ್ಪಣ್ಯಗಳನ್ನು ಯಾವ ಕಾಲದಲ್ಲಿಯೂ ಯಾವ ಯುಗದಲ್ಲಿಯೂ ಯಾವ ಸರ್ಕಾರವೂ ಅನುಭವಿಸಿರಲಿಲ್ಲ ಎಂಬುದನ್ನು ಎಲ್ಲರೂ ಒಪ್ಪಬೇಕು. ಆದರೂ ಕೂಡ ವಿರೋಧಪಕ್ಷದ ನಾಯಕರು ಮತ್ತು ಇತರೇ ಸದಸ್ಯರು ಮಾತನಾಡುವಾಗ ಈ ವಿಷಯದಲ್ಲಿ ಗಲಭೆ ಮಾಡುವಾಗ ನನಗೆ ಒಂದು ವಿಷಯ ಜ್ಞಾಪಕಕ್ಕೆ ಬಂತು. ಏನೆಂದರೆ, ಯಾರದೋ ಗಡ್ಡ ಹತ್ತಿ ಕೊಂಡಾಗ ಅದನ್ನು ಆರಿಸಿ, ಅವರಿಗೆ ಶೈತ್ಯೋಪಚಾರ ಮಾಡುವ ಬದಲು, ತಮಾಷೆ ಮಾಡುವ ನಲುವಾಗಿ ಅದೇ ಬೆಂಕಿಯಲ್ಲಿ ಸಿಗರೇಟ್ ಹತ್ತಿಸಿಕೊಂಡರಂತೆ. ಅದೇ ರೀತಿ ಇಂದು ಸರ್ಕಾರಕ್ಕೆ ಬಂದಿರುವ ಸಂಕಷ್ಟವನ್ನು ವಿರೋಧಪಕ್ಷದವರು ನಿವಾರಣೆ ಮಾಡಲು ಸಹಾಯ ಮಾಡುವ ಬದಲು, ಸರ್ಕಾರವನ್ನು ಪೇಚಿಗೆ ಸಿಕ್ಕಿಸಬೇಕು, ಹೇಗೂ ಸರ್ಕಾರ ಕಷ್ಟ ಪರಿಸ್ಥಿತಿಯಲ್ಲಿದೆ ಎಂದು ತಿಳಿದುಕೊಂಡಂತಿದೆ. ವಿರೋಧಪಕ್ಷದ ನಾಯಕರಲ್ಲಿ ಮತ್ತು ಬೇರೆ ಸದಸ್ಯರುಗಳ ಮನಸ್ಸಿನಲ್ಲಿ ಈ ಒಂದು ವಿಚಾರ ಇದ್ದರೆ, ಅದರಿಂದ ಏನಾಗುತ್ತದೆಂದರೆ, ಬೆಂಕಿ ಬಿದ್ದ ಮನೆಗೆ ನೀರನ್ನು ತಂದು ಹಾಕಿ ಆರಿಸುವ ಬದಲು ಅವಕ್ಕೆ ಮತ್ತಷ್ಟು ತುಪ್ಪವನ್ನು ಹಾಕಿದಂತೆ ಆಗುತ್ತದೆ. ಈ ಒಂದೇ ಕೆಲಸವನ್ನು ಅವರು ಮಾಡುತ್ತಿದ್ದಾರೆಂದು ನನ್ನಗನ್ನಿಸುತ್ತದೆ. ಇವೊತ್ತು ಬಂದಿರತಕ್ಕ ಬರಗಾಲ ನಮ್ಮನ್ನು ಕೇಳಿ ಬಂದಿಲ್ಲ. ಯಾವ ಕಾಲದಲ್ಲಿಯೂ ಬರವಿದ್ದಂತಹ ಚರಿತ್ರಾರ್ಹವಾದಂಥ ಬರಗಾಲವನ್ನು ನಮ್ಮ ಸರ್ಕಾರದವರು ದಿಟ್ಟತನದಿಂದ ಎದುರಿಸುತ್ತಿರುವಾಗ ಇಂತಹ ಒಳ್ಳೆಯ ಕೆಲಸವನ್ನು ಒಳ್ಳೆಯ ಕೆಲಸ ಎಂದು ಪರಿಗಣಿಸುವ ಅಂಶ ವಿರೋಧಪಕ್ಷದ ನಾಯಕರಿಗೆ ಇಲ್ಲ ಎಂದರೆ, ಅದು ಶೋಚನೀಯ ಸಂಗತಿಯೇ ಸರಿ. ಕೇವಲ ಟೀಕೆ ಮಾಡತಕ್ಕಂಥದ್ದು ಮಾತ್ರವೇ ನಮ್ಮ ಕರ್ತವ್ಯವೆಂದು ಅವರು ತಿಳಿದುಕೊಂಡಿದ್ದಾರೆ, ಅವರು ಪ್ರಜಾಪ್ರಭುತ್ವವನ್ನು ಅರ್ಥಮಾಡಿಕೊಂಡಿಲ್ಲ ಎಂದು ಹೇಳಬೇಕಾಗುತ್ತದೆ. ಸರ್ಕಾರದ ಆಡಳಿತದಲ್ಲಿ ಏನಾದರು ತಪ್ಪಿದರೆ ಅದನ್ನು ತೋರಿಸಬೇಕಾದುದು ಮತ್ತು ಜನತೆಗೆ ಇಂಥಾದ್ದನ್ನು ಮಾಡಬೇಕು ಎಂದು ಸಲಹೆ ಮಾಡುವ ಪ್ರವೃತ್ತಿ ವಿರೋಧಪಕ್ಷದವರಲ್ಲಿ ಮೊದಲು ಬೆಳೆಯಬೇಕು. ಇದನ್ನು ಮಾಡದಿದ್ದಾಗ ಅವರು ಕರ್ತವ್ಯ ಪರಾಙ್ಮುಖರಾಗುತ್ತಾರೆಂದು ಹೇಳಬಹುದು. ಮತ್ತು ಅವರ ಕರ್ತವ್ಯದಲ್ಲಿ ಚ್ಯುತಿಯಾಗುತ್ತದೆಂದು ಹೇಳಬಹುದು. ಈಗ ಬಂದಿರುವ ಕಷ್ಟಪರಿಸ್ಥಿತಿಯಲ್ಲಿ ಕೇವಲ ಅಪಪ್ರಚಾರ ಮಾಡುವುದಾದರೆ ಅದರಿಂದ ಜನತೆಗೆ ಉಪಕಾರ ಮಾಡಿದಂತಾಗುವುದಿಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ದಿನ ನಿತ್ಯವೂ ಈ ದೇಶದಲ್ಲಿ ಉಪವಾಸ, ವನವಾಸ ಮತ್ತು ಗಲಭೆಗಳನ್ನು ಜನರು ಮಾಡುತ್ತಿರುವುದನ್ನು ನಾವು ನೋಡಬಹುದು. ಇದನ್ನೆಲ್ಲಾ ನಿವಾರಣೆ ಮಾಡಲು ಕೆಲವರು ಕಾಲ ತಪಸ್ಸನ್ನು ಮಾಡಬೇಕಾಗುತ್ತದೆಂದು ಕಾಣುತ್ತದೆ. ನೆನ್ನೆ ರಾತ್ರಿ ನಾನು ನೋಡಿದ ಒಂದು ವಿಷಯವನ್ನು ಹೇಳಬೇಕೆಂದರೆ

(ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್)

ಆಂಜನೇಯಸ್ವಾಮಿ ದೇವಸ್ಥಾನದ ಹತ್ತಿರ ನಡೆದ ಒಂದು ಮದುವೆ ಪಾರ್ಟಿಯವರು ಮಾಡಿದ ಊಟದ ಎಲೆಗಳನ್ನು ಹೊರಗೆ ಹಾಕಿದ್ದರು. ಆ ಎಲೆಗಳಲ್ಲಿ ಉಳಿದಿದ್ದ ಅನ್ನವನ್ನು ಹತ್ತಾರು ಹುಡುಗರು ಹುಡುಕಿ ತಿನ್ನುತ್ತಿದ್ದರು. ಇಂತಹ ಒಂದು ಕಷ್ಟಕಾರ್ಪಣ್ಯವಿರುವ ದೇಶದಲ್ಲಿ ನಾವು ಕರ್ತವ್ಯ ಪರಾಙ್ಮುಖರಾಗದೆ ಅದಕ್ಕೆ ಪರಿಹಾರ ಮಾರ್ಗಗಳನ್ನು ಸರ್ಕಾರಕ್ಕೆ ತಿಳಿಸಬೇಕು. ಯಾವಾಗಲೂ ಸರ್ಕಾರವನ್ನು ಇಕ್ಕಟ್ಟಿಗೆ ಸಿಕ್ಕಿಸಬಾರದು. ಸಲಹಾತ್ಮಕ ಸಲಹೆಗಳನ್ನು ಕೊಡಬೇಕು. ತಮಾಷೆಗೆ ಮಾತನಾಡುವುದು ಸರಿಯಲ್ಲ. ಗುಲ್ಬರ್ಗದಿಂದ ಜನರನ್ನು ಬರಮಾಡಿಕೊಂಡು ಅವರಿಗೆ ಕೆಲಸ ಕೊಡುತ್ತೇವೆಂಬ ಆಶ್ವಾಸನೆಯನ್ನು ಕೊಟ್ಟಿದ್ದಾರೋ ಏನೋ ಎಂದು ನನ್ನ ಮಿತ್ರರು ಹೇಳುತ್ತಿದ್ದರು. ಕೇವಲ ಈ ವಿಷಯಗಳಲ್ಲಿ ಪತ್ರಿಕೆಗಳ ದೃಷ್ಟಿಯಿಂದ, ಪ್ರಕಟಣೆಯ ದೃಷ್ಟಿಯಿಂದ ನಾವು ಮಾತನಾಡುವುದಾದರೆ ಅದರಿಂದ ಏನಾದರು ಕೆಲಸವಾಗುತ್ತದೆಯೇ ?

ಶ್ರೀ ಕಾಗೋಡು ತಿಮ್ಮಪ್ಪ.—ಯಾರೋ ಹೇಳಿದ್ದು ಕೇಳಿದೆ ಎಂದು ಮಾನ್ಯ ಸದಸ್ಯರು ಹೇಳಿದರು. ಅವರೇ ಬೇಕಾದರೆ ಆ ಜನರ ಹತ್ತಿರ ಹೋಗಿ ಕೇಳಬಹುದು.

ಶ್ರೀ ಎಸ್. ಎಂ. ಶೀರ್‌ನಾಳ ಚಂದ್ರಶೇಖರ್.—ನಿಜವಾಗಿಯೂ ಸಂಶಯ ಬರುವ ರೀತಿಯಲ್ಲಿ ಕೇವಲ ಪ್ರಕಟಣೆಗಾಗಿ ಇಂತಹವರ ಬಗ್ಗೆ ಈ ಸದನದಲ್ಲಿ ಜಗಳವಾಡಿದರೆ, ಗುಲ್ಲು ಎಬ್ಬಿಸಿದರೆ, ಅದರಿಂದ ನಾಲ್ಕಾರು ಜನರಿಗೆ ಉಪಯೋಗವಾಗುತ್ತದೆಯೇ ಎಂಬ ಬಗ್ಗೆ ಸಂಶಯಾತ್ಮಕವಾಗಿ ಹೇಳಬೇಕಾಗಿದೆ. ನಮ್ಮ ಮಂತ್ರಿಗಳು ಮಾನ್ಯ ಬಾಪೂಗಳಡರಿಗೆ ಕಾಗದ ಬರೆದಾಗ ಅವರು ಡಿವಿಜನರ್ ಕಮೀಷನರ್ ಅವರ ಹತ್ತಿರ ಏತಕ್ಕೆ ಹೋಗಲಿಲ್ಲ ? ಮಾನ್ಯ ಮಂತ್ರಿಗಳ ಕಾಗದವನ್ನು ಅವರು ಅಷ್ಟೊಂದು ಉಪೇಕ್ಷೆ ಮಾಡಿದರು. ಕೇವಲ ಸರ್ಕಾರವನ್ನು ಇಕ್ಕಟ್ಟಿನಲ್ಲಿ ಸಿಕ್ಕಿಸಬೇಕು ಎಂಬ ದೃಷ್ಟಿಯಿಂದ ಕ್ಷಾಮ ಪರಿಸ್ಥಿತಿಯನ್ನು ತಮ್ಮ ಒಂದು ಉಪಯೋಗಕ್ಕಾಗಿ ಬಳಸುವುದಾದರೆ ಅದು ನಿಜವಾಗಿಯೂ ಪ್ರಜಾಪ್ರಭುತ್ವದ ಒಳ್ಳೆಯ ಲಕ್ಷಣವಲ್ಲ ಎಂದು ಹೇಳುವುದರಲ್ಲಿ ನಾನೂ ಒಬ್ಬ. ಬೀಸುವ ದೊಣ್ಣೆ ತಪ್ಪಿದರೆ ನಾವಿರ ವರ್ಷ ಆಯುಸ್ಸು ಎಂಬ ಗಾದೆಯನ್ನು ಗಮನದಲ್ಲಿಟ್ಟುಕೊಂಡು ಕ್ಷಾಮ ಪರಿಸ್ಥಿತಿಯಿರುವ ಕಡೆಗಳಲ್ಲಿ ನಾವು ಗಂಜೀ ಕೇಂದ್ರಗಳನ್ನು ತೆರೆಯುವುದಾಗಲೀ, ಪ್ರಕೃತ ಕೆಲಸ ಕೊಡುವುದಾಗಲೀ ಮಾಡಿದರೆ, ಅದರಿಂದ ಖಾಯಂ ಪರಿಹಾರ ದೊರೆತಂತಾಗುವುದಿಲ್ಲವೆಂದು ಹೇಳುವವರಲ್ಲಿ ನಾನೂ ಒಬ್ಬ. ನಾವು ಇದು ಬರದಂತೆ ಕಾಯಂ ಪರಿಹಾರವನ್ನು ಹುಡುಕಬೇಕಾಗಿದೆ ಬರಗಾಲ ಎಂಬುದು ನಮಗೆ ಹೊಸದೇನೂ ಅಲ್ಲ, ಇದು ಮೊದಲಿನಿಂದಲೂ ಇದೆ. ಶ್ರೀಮಾನ್ ವೀರೇಂದ್ರಪಾಟೀಲರ ಸರ್ಕಾರ ಇದ್ದಾಗಲೂ ಇತ್ತು. ಅವರ ಕಾಲದಲ್ಲಿ ಈ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಂಡರು ಎಂದು ಯೋಚನೆ ಮಾಡುವುದಾದರೆ, ನಮ್ಮ ಸರ್ಕಾರವನ್ನಾಗಲೀ, ನಮ್ಮ ಮಂತ್ರಿಮಂಡಲವನ್ನಾಗಲೀ ಟೀಕೆ ಮಾಡುವ ಹಕ್ಕು ಅವರ ಪಕ್ಷದವರಿಗೆ ಬರುವುದಿಲ್ಲ ಎಂದು ಹೇಳುವುದಕ್ಕೆ ಬಯಸುತ್ತೇನೆ. ನಮ್ಮ ಸರ್ಕಾರ ಈ ಕ್ಷಾಮ ಪರಿಹಾರಕಾರ್ಯಕ್ಕಾಗಿ ಖರ್ಚು ಮಾಡಿದ ಹಣ, ಮತ್ತು ಯಾವ ಯಾವ ಯೋಜನೆಗಳನ್ನು ತಯಾರು ಮಾಡಿ ಕಾರ್ಯಗತ ಮಾಡುತ್ತಿದೆ, ಎಷ್ಟು ಯೋಜನೆಗಳು ಮುಕ್ತಾಯವಾಗಿವೆ ಎಂಬುದನ್ನು ಮತ್ತು ಹಿಂದಿನ ಸರ್ಕಾರದವರು ಕೈಕೊಂಡ ಕಾರ್ಯಕ್ರಮಗಳನ್ನು ಮತ್ತು ಅವರ ಕೆಲಸಗಳನ್ನು ಜೊತೆ ಜೊತೆಯಾಗಿ ಇಟ್ಟುಕೊಂಡು ತುಲನೆ ಮಾಡುವುದಾದರೆ, ನಮ್ಮ ಸರ್ಕಾರ ಆ ಸರ್ಕಾರಕ್ಕಿಂತ ಹತ್ತು ಪಟ್ಟು ಜಾಸ್ತಿ ಕೆಲಸ ಮಾಡಿದೆ ಎಂಬುದನ್ನು ಎಲ್ಲರೂ ಒಪ್ಪಿಕೊಳ್ಳಬೇಕಾಗುತ್ತದೆ. ಆ ರೀತಿ ಒಪ್ಪಿಕೊಳ್ಳುವುದು ಬುದ್ಧಿವಂತರಾದವರ ಲಕ್ಷಣ. ಆ ರೀತಿ ಒಪ್ಪಿಕೊಳ್ಳದಿದ್ದವರನ್ನು ಕುರುಡರು, ನಿಜವಾಗಿಯೂ ಬುದ್ಧಿವಂತರಲ್ಲ ಎಂದು ಹೇಳಬೇಕಾಗುತ್ತದೆ. ಒಳ್ಳೆಯದನ್ನು ಒಳ್ಳೆಯದು ಎಂದು ಹೇಳುವ ಸತ್‌ಸಂಪ್ರದಾಯವನ್ನು ವಿರೋಧಪಕ್ಷದವರು ಬೆಳೆಸಿಕೊಳ್ಳಬೇಕು. ಒಳ್ಳೆಯ ಕೆಲಸ ಮಾಡುವವರಿಗೆ ಬೆನ್ನು ತಟ್ಟಿ ಸಹಾನುಭೂತಿ ತೋರಿಸಬೇಕು. ಇಲ್ಲದಿದ್ದರೆ ಕೆಲಸ ಮಾಡುವವರಿಗೆ ನಿರುತ್ಸಾಹ ಬರುತ್ತದೆ. ಇಂತಹ ಕ್ಷಾಮ ಪರಿಸ್ಥಿತಿಯೊಳಗೆ ಸರ್ಕಾರ ಅನೇಕ ಕಾರ್ಯಕ್ರಮಗಳನ್ನು ಕೈಕೊಂಡಿದ್ದರು ಸಹ, ರಾಯಚೂರು, ಬಿದರೆ, ಬಿಜಾಪುರ, ಗುಲ್ಬರ್ಗ ಜಿಲ್ಲೆಗಳನ್ನು ಬಹಳವಾಗಿ ಸರ್ಕಾರದವರು ಕಡೆಗಣಿಸಿದ್ದಾರೆಂದು ಕೆಲವರು ಆರೋಪ ಮಾತುಗಳನ್ನು ನೆನೆದರೆ ಹಳೆಯ ಮೈಸೂರಿನವರಿಗೆ ಬಹಳ ಬೇಜಾರಾಗುತ್ತದೆ. ಆಂಧ್ರ ಪ್ರದೇಶದಲ್ಲಿ ಇಂದು ನಡೆಯುತ್ತಿರುವ ಚಳುವಳಿ ಮತ್ತು ದಂಗೆಯ ಕಾಲದಲ್ಲಿ ಇಂತಹ ಮಾತುಗಳನ್ನು ಆಡಿದರೆ ನಮ್ಮವರಿಗೆ ಬಹಳ ಬೇಜಾರಾಗುತ್ತದೆ. ಆ ಭಾಗಗಳಿಂದ ಸರ್ಕಾರಕ್ಕೆ ಬರುತ್ತಿದ್ದ ರೆವಿನ್ಯೂ ಬಾಬತ್ತು ಬಹಳ ಕಡಿಮೆ ಆಗಿದೆ. ಆದರೂ ಸರ್ಕಾರದವರು ಆ ಭಾಗಗಳಿಗೆ ಹೆಚ್ಚು ಹಣವನ್ನು ಖರ್ಚು ಮಾಡುತ್ತಿದ್ದಾರೆ. ಇದಕ್ಕೆ ಕಾರಣ, ಒಂದು ಸಂಸಾರದಲ್ಲಿ ನಾಲ್ಕು ಜನ ಅಣ್ಣ ತಮ್ಮಂದಿರು ಇದ್ದು, ಅವರಲ್ಲಿ ಒಬ್ಬ ರೋಗಿಷ್ಠನಾಗಿದ್ದರೆ,

ಅವನಿಗಾಗಿ ಉಳಿದವರು ದುಡಿದು ಖರ್ಚು ಮಾಡಬೇಕಾಗುತ್ತದೆ. ಮತ್ತು ತ್ಯಾಗ ಮಾಡಬೇಕಾಗುತ್ತದೆ. ಅದೇ ರೀತಿ ನಾವು ತ್ಯಾಗ ಮಾಡುತ್ತಿದ್ದರೂ ಸಹ ಈ ರೀತಿ ಮಾತುಗಳನ್ನಾಡಿದರೆ, ನಮ್ಮ ಸಹೋದರರಿಗೆ ನೋವಾಗುತ್ತದೆ. ಈ ವಿಷಯದಲ್ಲಿ ಟೀಕಾತ್ಮಕವಾಗಿ ಮಾತನಾಡುವುದು ಸರಿಯಲ್ಲ. ಮೈಸೂರು ಅಭಿವೃದ್ಧಿಗಾಗಿ ಸರ್ಕಾರದವರು ನಮ್ಮ ಭಾಗದಲ್ಲಿ ಕೆಲವು ಕಾರ್ಖಾನೆಗಳನ್ನು ಕೈಗೊಂಡಿದ್ದನ್ನು ಸಹ ಈಗ ಅರ್ಧಕ್ಕೇ ನಿಲ್ಲಿಸಿಬಿಟ್ಟಿದ್ದಾರೆ. ಅಧಿಕಾರಿಗಳಲ್ಲಿ ಕಾರಣ ಕೇಳಿದಾಗ ಈ ಭಾಗದ ಹಣವನ್ನು ಆ ಭಾಗಗಳಿಗೆ ಕೊಟ್ಟಿದ್ದೇವೆಂದು ಹೇಳಿದ್ದಾರೆ. ನಮ್ಮ ಭಾಗದ ಹಣವನ್ನು ಸಹ ಆ ಭಾಗಗಳಿಗೆ ಖರ್ಚು ಮಾಡುತ್ತಿದ್ದರೂ ಸಹ ಇಂತಹ ಸಣ್ಣ ಮಾತುಗಳು ನಮ್ಮ ಸರ್ಕಾರದ ಮೇಲೆ ಬಂದರೆ ಒಳ್ಳೆಯದಲ್ಲ. ಇದರಿಂದ ಒಳ್ಳೆಯ ಸಂಪ್ರದಾಯವನ್ನು ಹಾಳು ಕೊಂಡಂತಾಗುವುದಿಲ್ಲ. ಮತ್ತು ಇದರಿಂದ ಉರಿವ ಬೆಂಕಿಗೆ ತುಪ್ಪ ಸುರಿದಂತಾಗುತ್ತದೆಯಲ್ಲದೆ ವಿಭಜನೆ ವಿಚಾರದಲ್ಲಿ ಮಲಗಿರುವಂತಹ ಸಿಂಹ ಮತ್ತು ಆನೆಗಳನ್ನು ಎಬ್ಬಿಸಿದಂತಾಗುತ್ತದೆ. ಆದಕಾರಣ ಇಂತಹ ಸತ್‌ಸಂಪ್ರದಾಯಗಳನ್ನು ಬೆಳೆಸಿಕೊಳ್ಳಬಾರದೆಂದು ಹೇಳುತ್ತೇನೆ.

ಈಗ ಕನ್ನಡವನ್ನು ಅಧಿಕೃತಭಾಷೆಯನ್ನು ಮಾಡುವ ಬಗ್ಗೆ ರಾಜ್ಯಪಾಲರು ಪ್ರಾಸಾತ್ಪ ಮಾಡಿದ್ದಾರೆ. ಇದು ಎಂದೋ ಆಗಬೇಕಾಗಿತ್ತು. ನಮ್ಮ ಸರ್ಕಾರ ಈ ಹಂತದಲ್ಲಿ ಕೆಲಸ ಮಾಡುತ್ತಿದ್ದಾರೆ ಎನ್ನುವುದನ್ನು ಬೆನ್ನು ತಟ್ಟಿಕೊಳ್ಳಬೇಕಾಗಿದೆ. ಕನ್ನಡವನ್ನು ಅಧಿಕೃತ ಭಾಷೆಯಾಗಿ ಯಾವುತೊ್ತೀ ಮಾಡಬಹುದಾಗಿತ್ತು. ಕನ್ನಡ ಶಬ್ದಕೋಶದಲ್ಲಿ, ಕನ್ನಡದಲ್ಲಿ ಇಲ್ಲದೆ ಇರತಕ್ಕ ಸಾಹಿತ್ಯವಿಲ್ಲ. ಕನ್ನಡ ಮಹಾಕವಿಗಳಾದ ಪಂಪ, ರನ್ನ ಮುಂತಾದ ಮಹಾಕವಿಗಳು ಕನ್ನಡ ಮಹಾಕಾವ್ಯಗಳನ್ನು ಬರೆದಿದ್ದಾರೆ. ಕನ್ನಡ ಸಾಹಿತ್ಯ ಬೇಕಾದಷ್ಟು ಇದೆ. ಕನ್ನಡವನ್ನು ರಾಜ್ಯಭಾಷೆಯಾಗಿ ಮಾಡುವುದಕ್ಕೆ 25 ವರ್ಷಗಳು ಹಿಡಿಯಿತು. ಇದು ನಿಜವಾಗಿಯೂ ನಾಚಿಕೆ ಪಡತಕ್ಕ ವಿಚಾರ. ಆದರೆ ಈಗ ನಮ್ಮ ಸರ್ಕಾರ ಕನ್ನಡವನ್ನು ರಾಜ್ಯ ಭಾಷೆಯಾಗಿ ಮಾಡುವ ಬಗ್ಗೆ ಒಂದು ದಿಟ್ಟವಾದ ಹೆಜ್ಜೆಯನ್ನು ಇಟ್ಟಿದೆ ಎಂದು ನಾವು ಬೆನ್ನು ತಟ್ಟಿಕೊಳ್ಳಬೇಕಾಗಿದೆ. ಇದು ನಿಜವಾಗಿಯೂ ಹೆಮ್ಮೆಯ ವಿಚಾರ ಎಂದು ನಾನು ಹೇಳಬಯಸುತ್ತೇನೆ. ಕನ್ನಡವನ್ನು ರಾಜ್ಯಭಾಷೆಯಾಗಿ ಮಾಡಿ ಈ ದೇಶಕ್ಕೆ ಕರ್ನಾಟಕ ಎಂದು ನಾಮಕರಣ ಮಾಡತಕ್ಕ ಕೀರ್ತಿ ನಮ್ಮ ಸರ್ಕಾರಕ್ಕೆ ನಮ್ಮ ಮಂತ್ರಿ ಮಂಡಲಕ್ಕೆ ನಮ್ಮ ಮುಖ್ಯ ಮಂತ್ರಿಗಳಿಗೆ ಸಲ್ಲುತ್ತದೆ. ಇಂಥಾ ಒಂದು ಸತ್‌ಕೀರ್ತಿ, ಚರಿತಾರ್ಹವಾದ ನಿಲುವು ಅಜರಾಮರವಾಗಿ ಉಳಿಯುತ್ತದೆ ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಕಾಲೇಜು ವಿದ್ಯಾಭ್ಯಾಸದ ಬಗ್ಗೆ ನಮ್ಮ ರಾಜ್ಯಪಾಲರು ಒಳ್ಳೆಯ ಆಶ್ವಾಸನೆಗಳನ್ನು ಕೊಟ್ಟಿದ್ದಾರೆ. ನಮ್ಮ ಮುಖ್ಯ ಮಂತ್ರಿಗಳು ಈ ಸದನದಲ್ಲಿ ಬಹಳ ಹೆಮ್ಮೆಯಿಂದ ಹೇಳಿದ್ದಾರೆ, ಇನ್ನು ಮುಂದೆ ನಾವು ಕಾಲೇಜು ವಿದ್ಯಾಭ್ಯಾಸಕ್ಕೆ ಹೆಚ್ಚು ಹೆಚ್ಚು ಪ್ರೋತ್ಸಾಹವನ್ನು ಕೊಡುವುದನ್ನು ನಿಲ್ಲಿಸಬೇಕಾಗುತ್ತದೆ ಎಂದು ವ್ಯಕ್ತಪಡಿಸಿದ್ದಾರೆ. ನಾನು ಆ ಮಾತನ್ನು ಒಪ್ಪುತ್ತೇನೆ. ಏಕತಕ್ಕೆಂದರೆ ವಿದ್ಯೆಯನ್ನು ವಿದ್ಯೆಗಾಗಿ ಕಲಿಯುತಕ್ಕ ಪ್ರವೃತ್ತಿ ನಮ್ಮ ಯುವಕರಲ್ಲಿ ಇಲ್ಲ. ಓದಿ ಸರ್ಕಾರಿ ನೌಕರಿ ಬೇಕು ಎಂದು ಎಂ ಎಲ್.ಎ ಗಳ ಮುಂದೆ ಮಂತ್ರಿಗಳ ಮುಂದೆ ನಿಂತು ಕೆಲಸ ಕೊಡಿಸಿ ಎಂದು ಕೇಳುವಂತಹ ಒಂದು ರೂಢಿ ಇದೆ. ಕೆಲವರು ವಂಶ ಪಾರಂಪರ್ಯವಾಗಿ ಕೆಲಸಗಳನ್ನು ಮಾಡತಕ್ಕಂಥಾ ಒಂದು ಪದ್ಧತಿಯನ್ನು ನಡೆಸಿಕೊಂಡು ಬಂದಿದ್ದಾರೆ. ತಂದೆ ಏನು ವೃತ್ತಿಯನ್ನು ಮಾಡುತ್ತಿದ್ದಾನೆಯೋ ಮಗನೂ ಅದೇ ವೃತ್ತಿಯನ್ನು ಅವಲಂಬಿಸಬೇಕು ಎನ್ನುವ ಪ್ರವೃತ್ತಿ ನಮ್ಮ ಯುವಕರಲ್ಲಿದೆ. ಪಾಶ್ಚಿಮಾತ್ಯ ದೇಶಗಳಲ್ಲಿ ಆ ರೀತಿ ಇಲ್ಲ. ಅಲ್ಲಿ ಹುಡುಗನ ಆಪ್ಟಿಟ್ಯೂಡ್ ನೋಡಿಕೊಂಡು ವಿದ್ಯಾಭ್ಯಾಸವನ್ನು ಕೊಡಿಸುತ್ತಾರೆ ಈಗ ಯಾರಾದರೂ ಒಬ್ಬರು ಡಾಕ್ಟರೋ ರಾಯರೋ ಅಥವಾ ಇಂಜಿನಿಯರೋ ಆಗಿದ್ದರೆ ಅವರ ಮಕ್ಕಳೂ ಅದೇ ವೃತ್ತಿ ಮಾಡಬೇಕೆಂದು ಹುಡುಗ 10 ವರ್ಷಗಳು ಫೇಲಾದರೂ ಲಂಚವನ್ನಾದರೂ ಕೊಟ್ಟು ಅವನನ್ನು ಪಾಸು ಮಾಡಿಸುತ್ತಾರೆ. ಅಂಥವರು ಡಾಕ್ಟರು ಆಗಿ ಬಂದರೆ ಅವನಿಗೆ ಸರಿಯಾಗಿ ಇಂಜಕ್ಷನ್ ಕೊಡುವುದಕ್ಕೆ ಗೊತ್ತಾಗುವುದಿಲ್ಲ. ಇಂಥಾ ವೈದ್ಯರನ್ನು ನಿರ್ಮಾಣ ಮಾಡುತ್ತಾರೆ. ಈಗ ಹುಡುಗನಾದವನಿಗೆ ಸಂಗೀತದಲ್ಲೋ ಅಥವಾ ಇನ್ನು ಯಾವುದರಲ್ಲಿಯೋ ಅವನಿಗೆ ಆಸಕ್ತಿ ಇದ್ದರೆ ಅದನ್ನು ಕಲಿಸುವುದಕ್ಕೆ ಅವರ ತಂದೆ ತಾಯಿಗಳು ಇಷ್ಟ ಪಡುವುದಿಲ್ಲ. ನನ್ನ ಮಗ ಡಾಕ್ಟರಾಗಿಯೋ ಅಥವಾ ಇಂಜಿನಿಯರ್ ಆಗಿಯೋ ಕೆಲಸಕ್ಕೆ ಸೇರಿ ತಿಂಗಳಿಗೆ ಒಂದು ಸಾವಿರ ರೂಪಾಯಿಗಳ ಸಂಬಳವನ್ನು ತಂದರೆ ನಾವು ವಯಸ್ಸಾದ ಕಾಲದಲ್ಲಿ ಸುಖವಾಗಿ ಕುಳಿತುಕೊಂಡು ಊಟ ಮಾಡಬಹುದು ಎಂದು ಅವರು ಕನಸನ್ನು ಕಾಣುತ್ತಿರುತ್ತಾರೆ. ಆ ಕನಸು ನನಸಾಗದೆ ಕನಸಾಗಿಯೇ ಉಳಿಯುತ್ತದೆ. ಇವೊತ್ತು ವಿದ್ಯಾವಂತರಾದ ಮಕ್ಕಳು ಎಷ್ಟು ಜನ ತಮ್ಮ ತಂದೆ ತಾಯಿಗಳನ್ನು ಪ್ರೀತಿವಿಶ್ವಾಸದಿಂದ ಸುಖವಾಗಿ ಸಾಕುತ್ತಿದ್ದಾರೆ ಎಂದರೆ 100ಕ್ಕೆ ಒಬ್ಬರೂ ಇಲ್ಲ ಎಂದು ಹೇಳಬಹುದು. ಆದ್ದರಿಂದ ಇವೊತ್ತು

(ಶ್ರೀ ಎಸ್. ಎಂ. ಶೀರನಾಳ ಚಂದ್ರಶೇಖರ್)

ನನ್ನ ಮಗ ಕಾಲೇಜಿನಲ್ಲಿ ಓದಿ ಪಾಸಾಗಿ ಸಾವಿರ ರೂಪಾಯಿ ಸಂಬಳವನ್ನು ತೆಗೆದುಕೊಂಡು ಬಂದು ನಮ್ಮನ್ನು ಸುಖವಾಗಿ ಸಾಕುತ್ತಾನೆ ಎನ್ನುವುದು ಒಂದು ಕನಸು. ಆದ್ದರಿಂದ ನರಸ್ಪತಿಯನ್ನು ಸರಸ್ವತಿಯೆ ಆರಾಧನೆಗಾಗಿ ಓದಬೇಕೇ ವಿನಾ ಕೆಲಸ ಸಿಕ್ಕುತ್ತದೆ ಎಂದು ಓದುವುದು ಸರಿಯಲ್ಲ. ಬ್ರಿಟಿಷರು ನಮಗೆ ಕೊಟ್ಟಂತಹ ವಿದ್ಯೆ ಏನೆ ಇದು ಕಾರಕೂನನ ಕೆಲಸಕ್ಕೆ ತಯಾರು ಮಾಡತಕ್ಕ ವಿದ್ಯೆ. ಈ ವಿದ್ಯಾಭ್ಯಾಸದ ಪದ್ಧತಿಯನ್ನು ನಮ್ಮ ಶಾಲಾ ಕಾಲೇಜುಗಳಲ್ಲಿ ವ್ಯತ್ಯಾಸ ಮಾಡದಿದ್ದರೆ ನಮ್ಮ ದೇಶಕ್ಕೆ ಖಂಡಿತಾ ಒಳ್ಳೆಯದಾಗುವುದಿಲ್ಲ. ವಿದ್ಯೆಯನ್ನು ವಿದ್ಯೆಗಾಗಿ ಓದಿ ಯಾವುದಾದರೂ ಒಂದು ಕನುಬಿನ ಮೇಲೆ ಅವಲಂಬಿನತಕ್ಕ ವಿದ್ಯಾವಂತರನ್ನು ತಯಾರು ಮಾಡತಕ್ಕ ಸಮಾಜ ನಿರ್ಮಾಣವಾಗುವವರೆಗೂ ಕಾಲೇಜು ವಿದ್ಯಾಭ್ಯಾಸದಿಂದ ಯಾವ ಉಪಯೋಗವೂ ಆಗುವುದಿಲ್ಲ. ಕಾಲೇಜುನಲ್ಲಿ ಎಂ.ಎ.ಎಂ.ಎಸ್.ಸಿ. ಪಾಸು ಮಾಡಿದವರು ನೇಗಿಲು ಹಿಡಿಯುವುದಿಲ್ಲ. ಪೈಂಟ್ ಪ್ಯಾಂಟ್ ಮತ್ತು ಷೂ ಹಾಕಿಕೊಂಡು ತಿರುಗಾಡುತ್ತಿರುತ್ತಾರೆ ಕೆಲಸ ಮಾಡಿದರೆ ಆ ಬಟ್ಟೆ ಎಲ್ಲಿ ಕೊಳೆಯಾಗುತ್ತದೆಯೋ ಎನ್ನುವ ಮನೋಭಾವನೆಯನ್ನು ಹೊಂದಿದ್ದಾರೆ. ಅವರಿಗೆ ಹೊರಗಡೆ ಹೊಲದ ಕೆಲಸವನ್ನು ಮಾಡುವುದಕ್ಕೆ ಸಾಧ್ಯವಿಲ್ಲ. ಅಂಥಾ ಒಂದು ಪರಿಸ್ಥಿತಿಯನ್ನು ನಾವು ನೋಡುತ್ತಿದ್ದೇವೆ. ಇಂಥಾ ಕಾಲೇಜು ವಿದ್ಯಾಭ್ಯಾಸ ಮಾಡುವುದರಿಂದ ನಾವು ಎಷ್ಟರ ಮಟ್ಟಿಗೆ ಜನತೆಗೆ ಕಲ್ಯಾಣ ಮಾಡುವುದಕ್ಕೆ ಸಾಧ್ಯ ಎಂದು ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಕಾಲೇಜು ವಿದ್ಯಾಭ್ಯಾಸದ ಬಗ್ಗೆ ಏನು ಹೇಳಿದ್ದಾರೆ ಅವನ್ನು ನಾನು ಬೆಂಬಲಿಸುತ್ತೇನೆ.

ವ್ಯವಸಾಯವೇ ಪ್ರಾಧಾನ್ಯವಾದ ಈ ದೇಶದಲ್ಲಿ ವ್ಯವಸಾಯ ಉತ್ಪಾದನೆಯ ಬಗ್ಗೆ ಬಹಳ ಜಿಜ್ಞಾಸೆಗಳು ಇವೆ ಎಂದು ನನಗೆ ಅನಿಸುತ್ತದೆ. 100ಕ್ಕೆ 80ರಷ್ಟು ಜನ ವ್ಯವಸಾಯವನ್ನು ಅವಲಂಬಿಸಿರುವುದು ಸರಿಯಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ಎಲ್ಲಿಯವರೆಗೆ ನಮ್ಮ ದೇಶದಲ್ಲಿ ಹೆಚ್ಚು ವ್ಯವಸಾಯವನ್ನು ಅವಲಂಬಿಸಿಕೊಂಡಿರುತ್ತಾರೆಯೋ ಅಲ್ಲಿಯವರೆಗೆ ನಮ್ಮ ದೇಶದ ಆರ್ಥಿಕ ಪರಿಸ್ಥಿತಿ ಸರಿಯಾದ ರೀತಿಯಲ್ಲಿ ಬೆಳವಣಿಗೆಯಾಗುವುದು ಕಷ್ಟವಾಗುತ್ತದೆ. ಇದಕ್ಕೆ ಕಾರಣ ಬಹುತೇಕ ಹಳ್ಳಿಗಾಡಿನಲ್ಲಿ ಜನರು ಬರೀ ಬೇಸಾಯ ಒಂದನ್ನೇ ಅವಲಂಬಿಸಿಕೊಂಡಿರುತ್ತಾರೆಂಬುದು ಎಲ್ಲರೂ ಒಪ್ಪತಕ್ಕ ವಿಚಾರ. ಅದಕ್ಕಾಗಿ ನಮ್ಮ ಮಾನ್ಯ ಕೈಗಾರಿಕಾ ಮಂತ್ರಿಗಳು ಸ್ವಲ್ಪ ಸಹಾಯಮಾಡಬೇಕು. ಇಪ್ಪೊತ್ತು ಗುಲ್ಬರ್ಗಾ, ರಾಯಚೂರು ಜಿಲ್ಲಾಪುರಜಿಲ್ಲೆಗಳಲ್ಲಿ ಬರಗಾಲ ಬಂದಿರುವುದರ ಜೊತೆಗೆ ಹಳೇ ಮೈಸೂರಿನಲ್ಲಿಯೂ ಸಹ ಅನೇಕ ತಾಲ್ಲೂಕುಗಳಲ್ಲಿ ಬರಗಾಲ ಬಂದಿದೆ. ಎಲ್ಲೆ ಹೊಳೆ ನೀರು ಮತ್ತು ಕೆರೆ ನೀರಿನ ಆಶ್ರಯವಿಲ್ಲ ಅಂಥಾ ಕಡೆ ಬರಗಾಲ ಬಂದಿದೆ. ಈಗ 10-15 ವರ್ಷಗಳ ಸ್ಟಾಟಿಸ್ಟಿಕ್ ಅನ್ನು ತೆಗೆದುನೋಡಿದರೆ ಮಳೆಯ ಅಂಶ ಕಡಿಮೆಯಾಗಿದೆ ಎಂಬುದು ಗೊತ್ತಾಗುತ್ತದೆ. ವ್ಯವಸಾಯ ಪ್ರಾಧಾನ್ಯವಾದ ದೇಶವನ್ನು ಕೈಗಾರಿಕೆಗೂ ಪ್ರಾಧಾನ್ಯವಾದ ದೇಶವನ್ನಾಗಿ ಪರಿವರ್ತನೆ ಮಾಡುವುದಕ್ಕೆ ವಿವೇಚನೆ ಮಾಡಬೇಕಾಗುತ್ತದೆ. ಆ ರೀತಿ ಮಾಡದೆ ನಾವು ಎಷ್ಟು ಯೋಜನೆಗಳನ್ನು ಮಾಡಿ ಎಷ್ಟು ಕೋಟಿ ರೂಪಾಯಿಗಳನ್ನು ಅದರ ಮೇಲೆ ಹಾಕಿದರೂ ನಮ್ಮ ಆರ್ಥಿಕ ಸ್ಥಿತಿಯನ್ನು ಉತ್ತಮ ಮಾಡುವುದಕ್ಕಾಗುವುದಿಲ್ಲ. ಇಷ್ಟು ಹೇಳಿ ಮಾನ್ಯ ಅಧ್ಯಕ್ಷರು ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ರಾಜ್ಯಪಾಲರ ಭಾಷಣಕ್ಕೆ ನನ್ನ ಬೆಂಬಲವನ್ನು ವ್ಯಕ್ತಪಡಿಸುತ್ತೇನೆ.

## Statement Of Minister for Public Works *Re*: Accomadating People Who had come from scarcity areas at Kalinadi Project

† Sri H. M. CHANNABASAPPA.—Mr. Deputy Speaker, I would like to make a small statement.

Immediatally on receipt of instructions, officers have made necessary arrangements to shift the people who are prepared to migrate to Kalinadi project for work. In the first instance I am told that they were not anxious but later on Sri Viswanatha Reddy, an hon. member

of this Hose intervened and now they have all agreed to go to Kalinadi project. Arrangements are being made to provide food for them for the evening and M.S.R.T.C. buses are ready to take them to Kalinadi project. They will be provided with food, light, shelter and water for the time being till they are able to put themselves on the work. Later on they will be given work and also adequate wage on equiatable basis and for them water, housing and light would be given free. This arrangement has been made and in pursuance of the assurance held out operations are going on. MSRTC buses are due to leave at p.m. to-day.

Sri H. S. SIDDAPPA.—How many of them are going to-day and how many are staying here because some of them are employed?

H. M. CHANNABASAPPA.—The officers are listing them and Government is prepared to take as many people/ase willing to go. We will give them six to seven days work in a week for five months. I understand that 8 buses of MSRTC are ready and it will accomodate about 400 persons. I hope the hon. Members would appreciate the action taken by Government in this behalf.

5 00 -P.M.

## Motion Of Thanks to The Governar's Address

[*Debate Contd*]

ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ಮಾನ್ಯ ಸಭಾಪತಿಗಳೇ, ರಾಜ್ಯಪಾಲರ ಭಾಷಣವನ್ನು ನಾನು ಬಹಳ ಕೂಲಂಕಷವಾಗಿ ಓದಿದ್ದೇನೆ. ರಾಜ್ಯಪಾಲರ ಭಾಷಣ ಹೊಸ ರೀತಿಯಲ್ಲಿ ಈ ಸಾರಿ ಇರಬಹುದೆಂದು ನನ್ನ ಅಭಿಪ್ರಾಯ ಇತ್ತು. ಏಕೆಂದರೆ ಈ ಕಾಂಗ್ರೆಸ್ ಎರಡು ಆಗುವುದಕ್ಕೆ ಮುಂಚೆ ನಾನು ಹಲವು ರಾಜ್ಯಪಾಲರ ಭಾಷಣಗಳನ್ನು ಕೇಳಿದ್ದುಂಟು. ಆಗ ಈ ಭಾಷಣಗಳಲ್ಲಿ ಬಹುತೇಕವಾಗಿ ಒಂದೊಂದು ಇಲಾಖೆಯಲ್ಲಿ ಏನೇನು ಕೆಲಸಗಳನ್ನು ಮಾಡುತ್ತಿದ್ದಾರೆ ಮತ್ತು ಮಾಡಿದ್ದಾರೆ. ಇತ್ಯಾದಿಗಳ ಬಗ್ಗೆ ಹೇಳುತ್ತಿದ್ದರು. ಆಗಿನ ಸಂದರ್ಭದಲ್ಲಿ ನಾವು ಟೀಕೆ ಮಾಡಿದ್ದೂ ಉಂಟು. ಆಗ ನಾವು ಇಂತಹ ಭಾಷಣಗಳಿಂದ ಜನತೆಗೆ ಅನುಕೂಲವಾಗುವುದಿಲ್ಲವೆಂದು ಹೇಳಿದ್ದೆವೆ. ಸೆಕ್ರಟರಿಯವರು ಅಥವಾ ಇತರ ಅಧಿಕಾರಿಗಳು ಬರೆದು ಕೊಟ್ಟ ಭಾಷಣವನ್ನು ಇಲ್ಲಿ ಓದಿದರೆ ಅದರಿಂದ ಏನೂ ಪ್ರಯೋಜನವಾಗುವುದಿಲ್ಲ; ಸರ್ಕಾರದ ಥೋರಣ್ ಏನಿದೆ ಎನ್ನುವುದನ್ನು ಹೇಳಬೇಕೆಂದು ನಾವು ವಾದ ಮಾಡಿದ್ದು ಉಂಟು. ಆಗ ನಮಗೆ ಬರುತ್ತಿದ್ದ ಉತ್ತರವೇನೆಂದರೆ, ಸರ್ಕಾರದವರ ಆಸಕ್ತಿಯ ಮನೋಭಾವನೆ ಮತ್ತು ಅವರು ಹೇಳಿದ್ದನ್ನೇ ನಾವು ಕೇಳಬೇಕಾಗಿತ್ತು. ಆದರೆ ಈಗ ಕಾಂಗ್ರೆಸ್ ಎರಡು ಆದ ಮೇಲೆ ಹಲವಾರು ಥೋರಣಗಳನ್ನು ಇವರು ಬಡಲಾವಣ್ ಮಾಡಿದ್ದು ನಿಜ. ಆದರೆ ಅನೇಕ ವಿಷಯಗಳಲ್ಲಿ ಇವರಿಗೆ ಸ್ಪಷ್ಟತೆ ಇಲ್ಲ. ಇವರು ಗರೀಬಿ ಹಠಾವೊ ಘೋಷಣ್ ಮಾಡಿ ಕೆಲವು ನುಧಾರಣೆಗಳನ್ನು ಮಾಡಿದರು. ಆದರೂ ಸಹ ಇವರು ಏನೊಂದು ಆಶ್ವಾಸನೆಗಳನ್ನು ಕೊಟ್ಟಿದ್ದಾರೆ, ಅದನ್ನು ನೆರವೇರಿಸುತ್ತಾರೋ ಇಲ್ಲವೋ ಎಂಬ ಸಂಶಯ ಬಂದಿದೆ. ಅದನ್ನು ನೆರವೇರಿಸುವ ಧೈರ್ಯವಾದರೂ ಇವರಿಗೆ ಇಲ್ಲವೆಂದು ಕಾಣುತ್ತದೆ, ಇದು ಏನಾಗಿದೆ ಅಂದರೆ, ಹಳೆಯ ಕಾಲದ ರೀತಿಯಲ್ಲಿ ಯಾರೋ ಒಬ್ಬ ಸೆಕ್ರೆಟರಿಯವರು ಬರೆದುಕೊಡುತ್ತಾರೆ; ಅದನ್ನು ಇಲ್ಲಿ ಬಂದು ಓದುತ್ತಾರೆ. ಆದುದರಿಂದ ಇದು ಒಂದು ತಿರುಳು ಇಲ್ಲದ, ಸತ್ವವಿಲ್ಲದ ರಾಜ್ಯಪಾಲರ ಭಾಷಣವಾಗಿದೆ ಎಂದು ಹೇಳಿದರೆ ತಪ್ಪಾಗಲಾರದು. ಈ ಹಿನ್ನೆಲೆಯಲ್ಲಿ ಕೆಲವಾರು ಅಂಶಗಳನ್ನು ನಾನು ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ. ಪೊದಲನೆಯದಾಗಿ ನಮ್ಮ ರಾಜ್ಯದಲ್ಲಿ ಬಂದಿರತಕ್ಕಂತಹ ಬರಗಾಲದ ಪ್ರಶ್ನೆ. ಇದರ ಬಗ್ಗೆ ಮಾನ್ಯ ದೇವೇಗೌಡರು ಬಹಳ ದೀರ್ಘವಾಗಿ ಮಾತನಾಡಿದ್ದಾರೆ. ಎಲ್ಲರಿಗೂ ಬರಗಾಲ ಇದೆ ಎಂದು ಗೊತ್ತಿದೆ, ರಾಜ್ಯಪಾಲರ ಭಾಷಣದಲ್ಲಿ ಏನು ಹೇಳುತ್ತಾರೆ ಅಂದರೆ—

(ಶ್ರೀ ಎಂ. ಎಸ್. ಕೃಷ್ಣನ್)

"My Government is fully aware of its responsibilities in this respect."

ಅಂದರೆ ಸರ್ಕಾರದವರು ಜವಾಬ್ದಾರಿಯನ್ನು ಪೂರ್ತಿಯಾಗಿ ಅರಿತಿದ್ದಾರೆ ಎಂದೂ ನಾನಾದರೂ ಒಂದು ವಿಚಾರ ಕೇಳುತ್ತೇನೆ. ಮೊದಲು 16.50 ಕೋಟಿ ರೂಪಾಯಿ ಕೇಂದ್ರದಿಂದ ಇವರು ಕೇಳಿದರು. ನಂತರ ಮೂಲಪ್ರಭಾ ಚಾನಲ್‌ಗಾಗಿ 9ಕೋಟಿ ರೂಪಾಯಿ ಕೇಳಿದರು. ಅದರಲ್ಲಿ ಅವರು ಕೊಟ್ಟಿದ್ದು ಎಷ್ಟು ಅಂದರೆ, ಏಳುಮುಕ್ಕಾಲು ಕೋಟಿ. ಇಲ್ಲಿಯವರೆಗೆ ಖರ್ಚು ಮಾಡಿದ್ದು 13-37 ಕೋಟಿ ರೂಪಾಯಿ. ಅಂದರೆ ಇವರು ಕೇಳಿದ್ದು 16ಕೋಟಿ; ಕೊಟ್ಟಿದ್ದು ಏಳು ಕೋಟಿ ರೂಪಾಯಿ. ನಿಜವಾಗಿಯೂ ಎಷ್ಟು ಬೇಕೋ ಅಷ್ಟು ಕೇಳಿ ಎಂದು ನಾವು ಇಲ್ಲಿ ಕೇಳಿದಾಗ, ಮುಖ್ಯಮಂತ್ರಿಯವರು ಮತ್ತು ಬೇರೆ ಇತರ ಮಂತ್ರಿಗಳು 'ನಾವು ಎಷ್ಟು ಬೇಕೋ, ಅಷ್ಟು ಕೇಳುತ್ತೇವೆ; ಅದನ್ನು ಅವರು ಕೊಡುತ್ತಾರೆ ಎಂದು ಹೇಳಿದರು. ಆಮೇಲೆ ಮುಖ್ಯಮಂತ್ರಿಯವರು ಒಂದು ಸಲ "ಅದೇನೂ ಟ್ರೇಡ್ ಯೂನಿಯನ್ ಬಾರ್ಗೈನಿಂಗ್ ಅಲ್ಲ" ಎಂದು ಹೇಳಿದ್ದಾರೆ. ಈಗ ನೀವೇ 16ವರೆ ಕೋಟಿ ಇದ್ದದನ್ನು 151 ಕೋಟಿಗೆ ಏರಿಸಿದ್ದು ಹೇಗೆ ಎಂದು ನಾನು ಕೇಳುತ್ತೇನೆ. ಇದು ಏನು ತೋರಿಸುತ್ತದೆ ಅಂದರೆ ಸರ್ಕಾರದಲ್ಲಿ ಒಂದು ಸರಿಯಾದ ವಿವೇಚನೆ ಇಲ್ಲ. ಪರಿಸ್ಥಿತಿ ಗಂಭೀರವಾಗಿದ್ದರೂ ಸಹ ಇವರು ಸರಿಯಾಗಿ ಯೋಚನೆ ಮಾಡಿ ಇಷ್ಟು ಬೇಕೆಂದು ಹೇಳಿಲ್ಲ. ಕೇಂದ್ರದ ಸ್ಟಡಿ ಟೀಮಿನವರಿಗೆ ಸಹ ಒಂದು ಸಲ 16ವರೆ ಕೋಟಿ ಕೇಳಿ ಫಕ್ಕನೆ 1 1 ಕೋಟಿ ರೂಪಾಯಿ ಕೇಳಿದ್ದು ಏಕೆ ಎಂದು ಸಂಶಯ ಬಂದಿದೆ. ನಾವೆಲ್ಲರೂ ಹೀಗೆಯೇ ಜಾಸ್ತಿ ಕೇಳಿ ಬೇಕಾಗಿತ್ತು ಎಂದು ಹೇಳಿದ್ದೆವು. ಆದರೆ ಅದನ್ನು ಮಂತ್ರಿಗಳು ಹಾಸ್ಯಾಸ್ಪದವಾಗಿ ತಿಳಿದು ಕೊಂಡರು. ಇವರು ನಿಜವಾಗಿಯೂ ಪರಿಸ್ಥಿತಿಯ ಗುರುತ್ವಾವಸ್ಥೆಯನ್ನು ಸರಿಯಾಗಿ ಅರ್ಥ ಮಾಡಿಕೊಂಡಿಲ್ಲ. ಇನ್ನೊಂದು ವಿಚಾರವೇನೆಂದರೆ- ಇದೇ ಪರಿಸ್ಥಿತಿ ಮಹಾರಾಷ್ಟ್ರದಲ್ಲಿಯೂ ಸಹ ಇದೆ. ಅವರು ಮೊದಲನೆಯ ಸಲ 100 ಕೋಟಿ ರೂಪಾಯಿ ಪಡೆದಿದ್ದರು. ನಂತರ ಸುಮಾರು 73 ಕೋಟಿ ರೂಪಾಯಿ ಪಡೆದಿದ್ದರು ಎಂದು ಕಾಣುತ್ತದೆ. ಆಮೇಲೆ ಪುನಃ 240 ಕೋಟಿ ರೂಪಾಯಿ ಕೇಳಿದ್ದಾರೆ. ಅದಲ್ಲದೆ ಇಂದಿರಾ ಗಾಂಧಿಯವರು ಅಲ್ಲಿಗೆ ಹೋಗಿ ನೋಡಿದ್ದಾರೆ. ಅಂದರೆ ಅವರಿಗೆ ಕೇಂದ್ರದ ಮೇಲೆ ನಿಜವಾಗಿಯೂ ಪ್ರಭಾವ ಬೀರುವ ಶಕ್ತಿ ಚವಾಣರ ಮುಖಾಂತರ ಇದೆ ಎಂದು ಸ್ಪಷ್ಟವಾಗುತ್ತದೆ. ಆದರೆ ಇದುವರೆಗೆ ದೇವರಾಜ ಅರಸರವರಿಗೆ ಮತ್ತು ಎಸ್. ಎಂ. ಕೃಷ್ಣರವರಿಗೆ ಅವರ ಮೇಲೆ ಪ್ರಭಾವ ಬೀರುವ ಶಕ್ತಿ ಇಲ್ಲವೆಂದು ಕಾಣುತ್ತದೆ ಇವರು ಕೇಳಿದ್ದನ್ನು ಕೇಂದ್ರದವರು ಕೊಡುತ್ತಾರೆಂದು ತಿಳಿದುಕೊಂಡಿದ್ದರು. ಎರಡನೆಯ ಪ್ರಶ್ನೆ ಸುಮಾರು 151 ಕೋಟಿ ರೂಪಾಯಿಗಳನ್ನು ಬರಗಾಲ ಪರಿಸ್ಥಿತಿಯನ್ನು ಬಗೆ ಹರಿಸುವುದಕ್ಕಾಗಿ ಕೇಳುತ್ತಿದ್ದಾರೆ. ರಾಜ್ಯಪಾಲರ ಭಾಷಣದ ಪ್ರಕಾರ 150.55 ಕೋಟಿ ರೂಪಾಯಿಗಳನ್ನು ಏತಕ್ಕೆ ಖರ್ಚು ಮಾಡಬೇಕೆಂದು ಹಾಕಿದ್ದಾರೆಂದರೆ Government have drawn up a programme to afford relief in these areas at total cost of Rs. 150.55 crores to the end of September 1973. This programme covers provision for employment, sinking and deepening of irrigation wells, grant of takkavi loans, provision of pumps, water supply to affected ar as, areangements for supply of fodder, provision of medical and public health services, free feeding, assistance to the weavers, artisans and educational concessions to students, etc., ಇದರಲ್ಲಿ ನನಗೆ ಕಂಡು ಬಂದಹಾಗೆ there is not even a mention of what are all the permanent measures that have to be taken. What are the permanent measures that the Government is contemplating, what are the resources, what is the amount that has to be spent, etc., is totally absent. ಇದರ ಬಗ್ಗೆ ಏನಾದರೂ ಹೇಳಿದ್ದಾರೆಯೇ ಅಂದರೆ ಏನೂ ಇಲ್ಲ. ಇದನ್ನು ಖಂಡಿತವಾಗಿ ಪೂರ್ತಾ ಟೀಕ್ ಮಾಡ್ತಿದ್ದಾರೆ. ಆದ್ದರಿಂದ ಇವರು ಡ್ರಾಟ್ ಕಂಡೀಷನನ್ನು ಎದುರಿಸುತ್ತೇವೆ, ಜನಗಳಿಗೆ ಅನ್ನ ಕೊಡುತ್ತೇವೆಂದರೆ ನಂಬಲು ಹೇಗೆ ಸಾಧ್ಯ? ಮಳೆ ಬೆಳೆ ಸಾಕಷ್ಟು ಆಗದೇ ಇರುವಾಗ ಸರ್ಕಾರದವರು ಸೂಕ್ತ ಕಾರ್ಯಕ್ರಮಗಳನ್ನು ತೆಗೆದುಕೊಳ್ಳದೇ ಹೋದರೆ ಮುಂದೆ ಇದೇ ಪರಿಸ್ಥಿತಿ ಬರುತ್ತದೆ. ಸರ್ಕಾರದವರು ಮೂಲಭೂತವಾದ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು.

ಟಂಕರಿಂಗ್ ವಿತ್ ದಿ ಪ್ರಾಬ್ಲಂ ಎನ್ನುವ ರೀತಿಯಲ್ಲಿ ಕೆಲಸಕಾರ್ಯಗಳನ್ನು ಕೈಗೊಳ್ಳಕೂಡದು. ದೊಡ್ಡ ದೊಡ್ಡ ನೀರಾವರಿ ಯೋಜನೆಗಳನ್ನು ಜಾರಿಗೆ ತನ್ನಿರಿ. ಮೈನರ್ ಇರಿಗೇಷನ್ ವರ್ಕ್ಸ್ ಕೆಲಸವನ್ನು ಸ್ವಿಚ್‌ಮೇ ಸರ್ಕಾರದವರು ತೆಗೆದುಕೊಂಡಿದ್ದಾರೆ. ಇದು ಬಹಳ ಸಂತೋಷ. ಆದರೆ ನಮ್ಮಲ್ಲಿ ರೈಲ್ವೆ ಲೈನನ್ನು ಕೂಡಲೇ ತೆಗೆದುಕೊಳ್ಳಬೇಕು. ಅದನ್ನು ಜಾಗ್ರತೆಯಾಗಿ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಇನ್ನು ಕೆನಾಲ್ಸ್ ಬಗ್ಗೆ ಹೇಳುವುದಾದರೆ, ಇದರ ಬಗ್ಗೆ ಸರ್ಕಾರದವರ ಅಭಿಪ್ರಾಯವೇನೆಂಬುದನ್ನು ಇಲ್ಲಿ ಸರಿಯಾಗಿ ಹೇಳಲಿಲ್ಲ. ಯಾವುದಾದರೂ ಒಂದು ಯೋಜನೆಯನ್ನು ಮಾಡುವಾಗ ಅದರ ಬಗ್ಗೆ ಮುಂದಾಲೋಚನೆ ಮಾಡಬೇಕು. ನಮ್ಮನೆ ಎಲ್ಲೋ ಒಂದು ಕಡೆ ಡ್ಯಾಂ ಕಟ್ಟುವುದು, ನೀರನ್ನು ಇಂಪೌಂಡ್ ಮಾಡುವುದು, ನಂತರ ಕೆನಾಲ್‌ಗಳನ್ನು ತೋಡುವುದು—ಹೀಗೆಯೇ ಆಗುತ್ತಿದೆ. ಹೀಗೆಯೇ ಆಗುತ್ತಾ ಹೋದರೆ, ಪ್ರಯೋಜನವಿಲ್ಲ, ಹೊಸ ಯೋಜನೆಗಳನ್ನು ಏನು ಮಾಡಬೇಕು ? ಡ್ಯಾಂ ಕಟ್ಟಿ ನೀರನ್ನು ಇಂಪೌಂಡ್ ಮಾಡಿ ಎರಡು ವರ್ಷಗಳಾದ ಮೇಲೆ ಕೆಲಸ ಕೊಡುವುದೆಂದರೆ ಹೇಗೆ ! ಆದ್ದರಿಂದ ಯಾವುದೇ ಪ್ರಾಜೆಕ್ಟ್‌ನ ಟೆಕ್ನಿಕಲ್ ಮ್ಯಾಟರ್ಸ್ ಮೇಲೆ ಒಂದು ಥೋರಣೆಯ ತೀರ್ಮಾನ ತೆಗೆದುಕೊಂಡು ಡ್ಯಾಂಗಳನ್ನು ಕಟ್ಟುವ ಜೊತೆಯಲ್ಲೇ ದೊಡ್ಡ ದೊಡ್ಡ ಕೆನಾಲ್‌ಗಳನ್ನು ಕಟ್ಟುವುದಕ್ಕೆ ಹೊರಟರೆ ಮಾತ್ರ ಅನೇಕರಿಗೆ ಬೇಕಾದಷ್ಟು ಕೆಲಸಗಳು ಸಿಗುತ್ತವೆ. ಇಂತಹ ಜಮೀನುಗಳಲ್ಲಿ ಇರಿಗೇಟ್ ಆಗುವ ಸ್ಥಿತಿಯನ್ನು ತಕ್ಷಣ ತೆಗೆದುಕೊಳ್ಳಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಆ ವಿಚಾರದಲ್ಲಿ ರಾಜ್ಯಪಾಲರ ಭಾಷಣದಲ್ಲಿ ಏನೂ ಸ್ಪಷ್ಟವಾಗಿಲ್ಲ.

Sri S. M. KRISHNA (Minister for Industries).—That is what is being done now. The Finance Minister has made it repeatedly clear and the Chief Minister has also made it clear to the whole State that this is the strategy that we are adopting. We will dig the canals, and simultaneously the dam also gets built. We have the clearance of the Planning Commission and the Union Government also to take up this strategy.

ಶ್ರೀ ಎಂ. ಎಸ್. ಕೃಷ್ಣನ್. —ಹಾಗಿದ್ದ ಪಕ್ಷದಲ್ಲಿ ಈ ವಿಷಯದಲ್ಲಿ ನನಗೆ ಭಿನ್ನಾಭಿಪ್ರಾಯ ಏಲ್ಲ. ಈ ಒಂದು ಬೇಸಿಕ್ ಕೊಶ್ಚನ್ನನ್ನು ಸಾಲ್ವ್ ಮಾಡಬೇಕಾದರೆ ಪರ್ಮನೆಂಟ್ ಮೆಜರ್ಸ್ ಈಗ ತೆಗೆದುಕೊಳ್ಳಬೇಕೆಂದು ನಾನು ಒತ್ತಾಯ ಮಾಡಿ ಹೇಳುತ್ತೇನೆ. ಮೂರನೆಯ ಅಂಶ. ಆ ಭಾಗಗಳಿಂದ ಬರುವವರನ್ನು ರಫ್ಯೂಜೀಸ್ ಅಂದರೆ ನಿಷ್ಪ್ರಯೋಜಕ ರೆಂದು ಕರೆಯುವುದು ತಪ್ಪು. ಅವರು ದುರಾದೃಷ್ಟವಶಾತ್ ನಿರಾಶ್ರಿತರಾಗಿ ಬರಬಹುದು. ಇವತ್ತು ಅವರು ಆ ರೀತಿ ಬಂದಿರುವುದರಿಂದ ಮಾನ್ಯ ಶ್ರೀ ಚನ್ನಬಸಪ್ಪನವರು ಒಂದು ಸೊಲ್ಯೂಷನ್ ಹುಡುಕಿದರು. ಬಹಳ ಸಂತೋಷವಾದ ವಿಚಾರ. ಈ ತರಹ ಮುಂದೆ ಯಾರೂ ಬಾರದೇ ಇರುವ ಹಾಗೆ ತಡೆಯುವುದು ಮುಖ್ಯವಾದ ವಿಷಯ. ಇನ್ನೊಂದು, ಅವರಿಗೆ ಪರ್ಮನೆಂಟ್ ರಿಲೀಫ್ ಕೊಡುವುದು. ಇದು ಅತ್ಯಾವಶ್ಯಕ. ಆದರೆ ಆದಕ್ಕೆ ಸಮಾಧಾನವಾದ ಉತ್ತರ ಸಿಗಲಿಲ್ಲ. ಆ ರೀತಿ ಬಂದರೆ ಏನು ಮಾಡುತ್ತೀರಿ ಎಂಬುದನ್ನು ಫೋರ್‌ಕ್ಯಾಸ್ಟ್ ಮಾಡಿ ಮುಂಚೆ ಬಾರದೇ ಇದ್ದರೂ ಪರ್ಮನೆಂಟ್ ಮೆಜರ್ಸನ್ನು ತೆಗೆದುಕೊಳ್ಳಬೇಕು.

ಇನ್ನು ಸ್ಕೀರ್ಸಿಟಿ ರಿಲೀಫ್ ಕಮಿಟಿ ಎಂದು ಬೇರೆ ಮಾಡಿದ್ದೀರಿ. ಅದರಲ್ಲಿ ಯಾರ್ಯಾರೋ ಇದ್ದಾರೆ. ತಮಗೆ ಬೇಕಾದವರನ್ನೇ ಆ ಕಮಿಟಿಯಲ್ಲಿ ನೇಮಿಸಿದ್ದೀರಿ. ನಾವು ಯಾರನ್ನು ಬೇಡವೆಂದು ಹೇಳಿದ್ದೆವೋ ಅವರನ್ನೇ ಅದರಲ್ಲಿ ಸೇರಿಸಿರುತ್ತೀರಿ. ಅದರೆ ಅದು ಚೆನ್ನಾಗಿ ಕೆಲಸಮಾಡುವ ಹಾಗೆ ಮಾಡಿ. ಈ ಬೆಂಗಳೂರಿನಲ್ಲಿ ಬೇಕಾದಷ್ಟು ಜನ ಕಾರ್ಮಿಕರು ಇದ್ದಾರೆ. ಅವರ ಪೈಕಿ ಯಾಪ್ಪೋಬ್ಬ ಮುಖಂಡರೂ ಇಲ್ಲ. ಅವರ ಪ್ರತಿನಿಧಿಗಳು ಆ ಕಮಿಟಿಯಲ್ಲಿರುವ ಹಾಗೆ ವ್ಯವಸ್ಥೆ ಮಾಡಬೇಕೆಂದು ನನ್ನ ಸ್ಪಷ್ಟ ಅಭಿಪ್ರಾಯ. ಅದರ ಬಗ್ಗೆ ಹಾಗೂ ಕಾರ್ಮಿಕರ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಯಾವುದೊಂದು ಥೋರಣೆಯೂ ಇಲ್ಲ. ಸ್ಪಷ್ಟವಾದ ಅಭಿಪ್ರಾಯಗಳೂ ಸಹ ಇಲ್ಲವೆಂದು ನಾನು ಹೆಚ್ಚು ವಿಷಾದದಿಂದ ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನೊಂದು ವಿಷಯ. ಸರ್ಕಾರದ ಆಡಳಿತದಲ್ಲಿ ತೀರಾ ಅಸಮರ್ಥತೆ ತೋರಿಸಿರುವುದು ಎಂದರೆ, ಬೆರೆ ಏರಿಕೆಯ ವಿಷಯ. ಬೆಲೆಗಳು ಗಗನಕ್ಕೇರುತ್ತಿವೆ. ನಾನು ಈ ಸಂದರ್ಭದಲ್ಲಿ ಒಂದು ಅಂಶವನ್ನು ಮಾತ್ರ ಹೇಳುತ್ತೇನೆ. ಮಾನ್ಯ ಶ್ರೀಮತಿ ಇ. ಇ. ಪಾಜ್ ಅವರೇ ಈ ಸಭೆಯಲ್ಲಿ ಬೆಂಗಳೂರು ಸಿಟಿಯಲ್ಲಿ ಕೇಳಿದ 30 ರಿಂದ 35 ರವರೆಗೆ ಅಕ್ಕಿ, ರಾಗಿ, ಜೋಳದ ಬೆರೆ ಏರುತ್ತಿದೆ

(ಶ್ರೀ ಎಂ. ಎಸ್. ಕೃಷ್ಣನ್)

ಯೆಂದು ಹೇಳಿದ್ದಾರೆ. ನನ್ನಲ್ಲಿರುವ ಕೆಲವು ಅಂಕಿ ಅಂಶಗಳನ್ನು ಈ ಸಭೆಯ ಮುಂದೆ ಇಡುವುದಕ್ಕೆ ಕಾಲಾವಕಾಶವಿಲ್ಲ. ಕೇಂದ್ರ ಸರ್ಕಾರದ ಪ್ಯೂಸ್ ಇಂಡೆಕ್ಸ್ ಅಂಕಿ ಅಂಶಗಳ ಪ್ರಕಾರ ಪ್ರತಿ ಯೊಂದು ಆಹಾರ ಪದಾರ್ಥಗಳ ಬೆಲೆ ವಿಪರೀತವಾಗಿ ಏರಿಹೋಗಿದೆ. ಆ ಬೆಲೆಗಳ ಏರಿಕೆ ಬಹಳ ತೀವ್ರತರವಾಗಿ ಕಾಣುತ್ತಿದೆ. ಮುಂದೆ ಇನ್ನು ಯಾವ ರೀತಿ ಬೆಲೆಗಳು ಏರುತ್ತವೋ ನನಗಂತೂ ಗೊತಾಗುತ್ತಾ ಇಲ್ಲ. ಇದನ್ನು ತಡೆಗಟ್ಟುತ್ತೇವೆಂದು ಸರ್ಕಾರದವರು ಹೇಳಿದ್ದರೂ, ಆ ಬಗ್ಗೆ ಅನೇಕ ರೀತಿಯಲ್ಲಿ ಶೋಷಣೆಗಳು ಆಗುತ್ತಿದ್ದರೂ, ಇನ್ನೂ ಬೆಲೆಗಳು ಏರುತ್ತಲೇ ಹೋಗುತ್ತಿದೆ. ಆದರೆ ನಮ್ಮ ಮಂತ್ರಿಗಳು ಒಂದೊಂದು ಕಡೆ ಒಂದೊಂದು ರೀತಿಯಲ್ಲಿ ಭಾಷಣ ಮಾಡಲು ಪ್ರಾರಂಭ ಮಾಡಿದ್ದಾರೆ. "In a developing economy price rise is inevitable!"; wage rise leads to price rise. So in a developing economy price rise is inevitable.....ಎನ್ನುತ್ತಿದ್ದಾರೆ ಸರ್ಕಾರದ ವಕ್ತಾರರು. This is totally false argument. ಈ ವಿಷಯದಲ್ಲಿ ಸೋಷಿಯಲಿಸ್ಟ್ ಇಕಾನಮಿ ನೋಡಬೇಕು. ಯಾವುದೇ ಸೋಷಿಯಲಿಸ್ಟ್ ರಾಷ್ಟ್ರ ತೆಗೆದುಕೊಂಡರೂ, ಅಂದರೆ ಸೋವಿಯಟ್ ರಷ್ಯಾದಲ್ಲಿ ಕ್ರಾಂತಿಯಾದ ಮೇಲೆ, ಪೂರ್ವ ಯೂರೋಪಿನಲ್ಲಿ ಕ್ರಾಂತಿಯಾದ ಮೇಲೆ, ಆ ದೇಶಗಳು ತುಂಬಾ ಅಭಿವೃದ್ಧಿ ಗೊಂಡಿವೆ. ಸಮಾಜ ಬದಲಾವಣೆಯಾದ ನಂತರ ನಮ್ಮ ರಾಷ್ಟ್ರದಲ್ಲಿನಂತೆ ಬೆಲೆಗಳು ಏರಲೇ ಇಲ್ಲ. ಅಲ್ಲಿ ಎಲ್ಲಾ ಬೆಲೆಗಳನ್ನು ಹತೋಟಿಯಲ್ಲಿಟ್ಟರು. ಇವತ್ತು ಅಲ್ಲಿನ ಬಳಕೆಯ ವಸ್ತುಗಳ ಬೆಲೆಗಳು ತೀರಾ ಕಡಿಮೆಯಾಗಿವೆ. ಅದಕ್ಕಾಗಿ ಅಲ್ಲಿನ ಸರ್ಕಾರದವರು ಬಹಳ ಶ್ರಮಪಟ್ಟಿದ್ದಾರೆ. ನಾನು ಈ ಮಾತನ್ನು ಏಕೆ ಹೇಳುತ್ತೇನೆಂದರೆ, ನಮ್ಮ ರಾಜ್ಯದಲ್ಲಿ ಇಷ್ಟು ಬೆಲೆ ಏರಿಕೆಗೆ ಕಾರಣ ಸರ್ಕಾರದ ನೌಕರರು ಮತ್ತು ಇತರರು ಸಂಬಳ ಜಾಸ್ತಿಯಾಗಿ ಕೇಳುತ್ತಾರೆಂದು ಸರ್ಕಾರದವರು ಬೇರೆ ಹೇಳುತ್ತಿದ್ದಾರಲ್ಲಾ ಇದು ಶುದ್ಧ ತಪ್ಪು. ಎಂದು ತೋರಿಸುವುದಕ್ಕೆ ಇವರು ಬೇಳುವ ವಾದ ಆ ರೀತಿಯಾಗಿದ್ದಾರೆ ಇವತ್ತು ಫ್ರಾನ್ಸ್ ದೇಶದಲ್ಲಿ, ಇಟಲಿ ದೇಶದಲ್ಲಿ, ಅಮೇರಿಕಾ ದೇಶದಲ್ಲಿ ಕಾರ್ಮಿಕವರ್ಗ ಮುಷ್ಕರ ಮಾಡಿ ಸಂಬಳ ಹೆಚ್ಚಾಗಿದ್ದರಿಂದ ಬೆಲೆಗಳು ಹೆಚ್ಚಬೇಕಾಗಿತ್ತು. ಆದರೆ ಆ ರೀತಿ ಆಗಲಿಲ್ಲ. ಆವರ ಒಂದು ನೈತಿಕಮಟ್ಟ ಹೇಗಿದೆಯೆಂದರೆ, ಅಲ್ಲಿ ಸಂಬಳ ಜಾಸ್ತಿ ಮಾಡಿ ದಾಗಲೂ ಯಾವ ಆಹಾರ ಪದಾರ್ಥಗಳ ಬೆಲೆಯೂ ಈ ಪ್ರಮಾಣದಲ್ಲಿ ಏರಲಿಲ್ಲ. ಬ್ರಿಟನ್ನಿನಲ್ಲಿ ತಮಗೆ ಗೊತ್ತಿರುವ ಹಾಗೆ ಕೆಲವಾರು ಕಲ್ಲಿದ್ದಲು ಗಣಿಗಳಲ್ಲಿ ಮುಷ್ಕರ ನಡೆಯಿತು.

ಅಲ್ಲಿ ಐದು, ಹತ್ತು ಪರ್ಸೆಂಟ್ ಸಂಬಳವನ್ನು ಜಾಸ್ತಿ ಮಾಡಿದರೂ ಸಾಮಾನುಗಳ ಬೆಲೆ ಏರಲಿಲ್ಲ. ಅದಕಾರಣ ಇಲ್ಲಿ ಸರ್ಕಾರದವರು ಬೆಲೆಗಳ ಏರಿಕೆ ಬಗ್ಗೆ ಹೇಳುತ್ತಿರುವ ಕಾರಣಗಳು ಸರಿಯಾದವುಗಳಲ್ಲ. ಇಲ್ಲಿ ಬೆಲೆಗಳೇರುವುದಕ್ಕೆ ಮೂಲಕಾರಣ ಗುತ್ತೇದಾರಿ ಬಂಡವಾಳಗಾರರು ಈ ಧಾನ್ಯಗಳ ಮೇಲೆ ಇಟ್ಟುಕೊಂಡಿರತಕ್ಕ ಹಿಡಿತವೇ ಕಾರಣ. ಅದನ್ನು ನಡಿಲ ಮಾಡುವುದಕ್ಕೆ ಏರ್ಪಾಡನ್ನು ಮಾಡಿ ಎಂದು ನಮ್ಮ ಪಕ್ಷ ಒತ್ತಾಯ ಮಾಡುತ್ತಿದ್ದರೂ ಸರ್ಕಾರ ಅದನ್ನು ಮಾಡುತ್ತಿಲ್ಲ. ಮುಖ್ಯವಾಗಿ ಅದು ಸರ್ಕಾರದವರು ಮಾಡಬೇಕಾದ ಮುಖ್ಯ ಕರ್ತವ್ಯಗಳಲ್ಲಿ ಒಂದಾಗಿದೆ. ಸರ್ಕಾರದವರಿಗೆ ನಾವು ಈ ಹೋಲ್‌ಸೇಲ್ ಫುಡ್‌ಗ್ರೈನ್ಸ್‌ನ್ನ ತಾವು ಸಂಪೂರ್ಣ ವಾಗಿ ತೆಗೆದುಕೊಳ್ಳಿ ಎಂದು ಹೇಳುತ್ತಿದ್ದರೂ ಅತ್ತಕಡೆಗೆ ಸರ್ಕಾರದವರ ಗಮನ ಹರಿಯುತ್ತಿಲ್ಲ. ಅದಕ್ಕಾಗಿ ಅವರು ಏನೇನೋ ಕಾರಣಗಳನ್ನು ಕೊಡುತ್ತಿದ್ದಾರೆ. ಅದು ಖಂಡಿತವಾಯೂ ಶೋಚನೀಯ ಮತ್ತು ಖಂಡನೀಯವಾದದ್ದು. ಇಲ್ಲಿ ನಮ್ಮ ಸರ್ಕಾರದವರು ಭತ್ತಕ್ಕೆ ಏನೊಂದು ಧಾರಣೆಯನ್ನು ನಿಗದಿ ಮಾಡಿದರೋ ಅದನ್ನು ಕೇಂದ್ರ ಸರ್ಕಾರದವರು ಒಪ್ಪಲಿಲ್ಲ, ಅದಕ್ಕಾಗಿ ಸಗಟು ವ್ಯಾಪಾರವನ್ನು ಕೈಗೊಳ್ಳುವುದಕ್ಕಾಗಲಿಲ್ಲ—ಎಂದು ಹೇಳುತ್ತಿದ್ದಾರೆ. ಈ ದಿವಸ ಕೇರಳ ದಲ್ಲಿ ಕಮ್ಯುನಿಸ್ಟ್ ಮತ್ತು ಕಾಂಗ್ರೆಸ್ ಎರಡು ಪಕ್ಷಗಳೂ ಸೇರಿ ಸರ್ಕಾರವನ್ನು ನಡೆಸುತ್ತಿವೆ. ಅಲ್ಲಿ ಇಡೀ ರಾಜ್ಯದಾದ್ಯಂತವೂ ರೇಷನಿಂಗ್ ಇದೆ. ಅವರು ಬೇರೆ ಕಡೆಗಳಿಂದ ಧಾನ್ಯಗಳನ್ನು ತರಿಸಿ ಅದನ್ನು ಸಬ್‌ಸಿಡೈಜ್ಡ್ ರೇಟಿನಲ್ಲಿ ಜನರಿಗೆ ವಾರಾಟ ಮಾಡುತ್ತಿದ್ದಾರೆ. ಅಲ್ಲಿ ಈ ದಿವಸ ರೇಷನ್ ಅಂಗಡಿಗಳಲ್ಲಿ ಕೊಡುವ ಅಲ್ಲಿಯ ದರ ಒಂದು ಕೆ. ಜಿ. ಅಕ್ಕಿಯ ಬೆಲೆ ಒಂದು ರೂಪಾಯಿ ಎಂಟು ಪೈಸೆ, ಒಂದು ರೂಪಾಯಿ ಹತ್ತು ಪೈಸೆಗಳಿದೆ. ಅಲ್ಲಿ ಅವರು ಆ ಆಹಾರ ಧಾನ್ಯಗಳನ್ನು ಒಂದನ್ನೇ ಅಲ್ಲದೆ ಸಕ್ಕರೆ, ಎಡಿಬಲ್ ಆಯಿಲ್ ಮತ್ತು ಕೋರ್ಸ್ ಕ್ಲಾತ್ ಇವುಗಳನ್ನೂ ಕೂಡ ಕಂಟ್ರೋಲ್ ಬೆಲೆಗೆ ವಾರಾಟ ವಾಡುತ್ತಿದ್ದಾರೆ. ಇಲ್ಲಿಯೂ ನಮ್ಮ ಸರ್ಕಾರ ಹಾಗೆ ಮಾಡಲಿ ಎಂದು ನಾವು ಒತ್ತಾಯ ಮಾಡುತ್ತೇವೆ. ಇಲ್ಲಿ ಹಳ್ಳಿಗಳಲ್ಲಿ ರೇಷನಿಂಗ್ ಪದ್ಧತಿಯನ್ನು ಜಾರಿಗೆ ತಕ್ಷಣ ತರಲು ಸಾಧ್ಯವಾಗದಿದ್ದಲ್ಲಿ ನಗರಗಳಲ್ಲಾದರೂ ಏಕೆ ತರಬಾರದು? ನಾನು ಹೇಳುತ್ತಿರು

ವುದು ಫಾರ್ಮರ್ ರೇಷನಿಂಗ್ ಅಲ್ಲ ಫುಲ್ ರೇಷನಿಂಗ್ ಸಿಸ್ಟಂ ಅನ್ನು ಜಾರಿಗೆ ತನ್ನಿ ಎಂದು ಹೇಳುತ್ತಿದ್ದೇನೆ.

ಇನ್ನು ಪ್ಲಾನ್ ಅಪ್ರೋಚಿನ ಬಗ್ಗೆ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಆದರೆ ಈ ಯೋಜನೆಗಳ ವಿಚಾರದಲ್ಲಿ ಮತ್ತು ದೇಶದ ಕೈಗಾರಿಕೆಗಳ ವಿಚಾರದಲ್ಲಿ ರಾಜ್ಯ ಸರ್ಕಾರದವರ ಧೋರಣೆ ಏನಿರಬೇಕು ಎಂಬುದನ್ನು ಖಚಿತವಾಗಿ ತಿಳಿಸಿಲ್ಲ. ಕೈಗಾರಿಕೆಗಳನ್ನು ಹೆಚ್ಚಾಗಿ ಪಬ್ಲಿಕ್ ಸೆಕ್ಟಾರಿನಲ್ಲಿ ಇರಬೇಕೇ ಎಂಬುವುದರಲ್ಲಿ ಇವರ ಖಚಿತವಾದ ನಿಲುವೇನೆಂಬುದು ಅರ್ಥವಾಗುವುದಿಲ್ಲ. ಮೊನ್ನೆ ತಾನೆ ದಾವಣಗೆರೆ ಬಳಿ ಸಕ್ಕರೆ ಕಾರ್ಖಾನೆಯನ್ನು ಬರ್ಕಾರವರ ಜನರಿಗೆ ಕೊಟ್ಟು ಅವುಗಳನ್ನು ಕಾಂಗ್ರೆಸ್ಸಿನ ಮಂತ್ರಿಗಳು ಉದ್ಘಾಟನೆ ಮಾಡಿದರು. ಹಿಂದೆ ಶ್ರೀ ವೀರೇಂದ್ರ ಪಾಟೀಲರ ಕಾಲದಲ್ಲಿ ಕೂಡ ಒಂದು ಕೈಗಾರಿಕೆ ವಿಚಾರದಲ್ಲಿಯೂ ಹೀಗೇ ಆಯಿತು. ಇನ್ನು ನಮ್ಮಲ್ಲೀಗ ವಿಜಯನಗರದ ಸ್ಟೀಲ್ ಪ್ಲಾಂಟಿನ ಕೆಲಸ ಜರೂರಾಗಿ ನಡೆಯಬೇಕಾಗಿದೆ. ನಮ್ಮ ಮೈಸೂರಿನ ಅನೇಕ ಒಳ್ಳೊಳ್ಳೆ ಇಂಜಿನಿಯರುಗಳು ಹೊರಗಡೆಯಲ್ಲಿ ಆ ಬೊಕಾರೋ ಮತ್ತು ಭಿಲೈಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರನ್ನೆಲ್ಲಾ ಈ ವಿಜಯನಗರ ಸ್ಟೀಲ್ ಪ್ಲಾಂಟ್‌ನಲ್ಲಿ ಕೆಲಸಕ್ಕೆ ಬರುವಂತೆ ಒಂದು ವ್ಯವಸ್ಥೆ ಮಾಡಬೇಕಾಗಿದೆ. ಈ ವಿಚಾರಗಳೆಲ್ಲಾ ಮಾನ್ಯ ಘೋರ್ಪಡೆಯವರಿಗೂ ಗೊತ್ತಿದೆ ಈ ಕೆಲಸವನ್ನು ಮಾಡಿ ಎಂದು ಒತ್ತಾಯಿಸುತ್ತೇನೆ.

ಇನ್ನು ನಾನು ಕೊನೆಯದಾಗಿ ಜನರಲ್ ಅಡ್ಮಿನಿಸ್ಟ್ರೇಷನ್ ವಿಚಾರದಲ್ಲಿ ಒಂದು ಮಾತನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ಇತ್ತೀಚೆಗೆ ಸರ್ಕಾರದವರು ಈ ಕೆಲವು ಬೋರ್ಡು ಗಳನ್ನು ಮಾಡಿ ಅಲ್ಲಿ ತಮಗೆ ಬೇಕಾದವರಿಗೆ ಕೆಲಸಗಳನ್ನು ಕೊಡುವುದಕ್ಕೆ ಪ್ರಾರಂಭಮಾಡಿದ್ದಾರೆ. ಅಲ್ಲಿ ಕೆಲಸಕ್ಕೆ ತಾಂತ್ರಿಕ ಜ್ಞಾನ ಇರತಕ್ಕ ವ್ಯಕ್ತಿ ಅಗತ್ಯವಾಗಿದ್ದರೂ ಅದನ್ನು ಗಮನಕ್ಕೆ ತೆಗೆದು ಕೊಳ್ಳದೆ, ತಮಗೆ ಇಷ್ಟ ಬಂದವರನ್ನು ನೇಮಕ ಮಾಡುತ್ತಿದ್ದಾರೆ. ಆ ಬೋರ್ ಅಂಡ್ ಷೀಪ್ ಅಥವಾ ಉಲ್ಲನ್ ಬೋರ್ಡಿಗೆ ಒಬ್ಬ ನಾನ್ ಟೆಕ್ನಿಕಲ್ ಜನರನ್ನು ಅಧ್ಯಕ್ಷರನ್ನಾಗಿ ಹಾಕಿದ್ದಾರೆ. ಅದೂ ಎಂಥವರನ್ನು ಎಂದರೆ, ರಿಟೈರಾಗಿ 63 ವರ್ಷ ವಯಸ್ಸಾಗಿರತಕ್ಕ ಒಬ್ಬ ವ್ಯಕ್ತಿಯನ್ನು ಹಾಕಿದ್ದಾರೆ. ನಮ್ಮಲ್ಲಿ ಇನ್ನೂ ಎಂತಂಥಾ ಪ್ರತಿಭಾನ್ವಿತ ವ್ಯಕ್ತಿಗಳಿರಲಿಲ್ಲ ಅವರನ್ನೆಲ್ಲಾ ಏಕೇ ಕೈಬಿಟ್ಟಿದ್ದಿರಿ ?

ಶ್ರೀ ಎಚ್. ಎಸ್. ಸಿದ್ಧಪ್ಪ.—ಅವರು ಮುಖ್ಯ ಮಂತ್ರಿಗಳ ಅಳಿಯಂದಿರು ಎಂದು

ಶ್ರೀ ಎಂ. ಎಸ್. ಕೃಷ್ಣನ್.—ಇರಬಹುದು ಅವರು ಮುಖ್ಯ ಮಂತ್ರಿಗಳ ಅಳಿಯಂದಿರೇ ಇರಬಹುದು ಆದರೆ ಇಂಥ ಪದ್ಧತಿಗಳನ್ನು ಅವರು ಕೂಡಲೆ ಕೈಬಿಡಬೇಕು. ಇಂಥಾ ಕಾರಣ ಗಳಿಂದಲೇ ಎಲ್ಲೆಲ್ಲೂ ಜನರಿಗೆ ಈ ಸರ್ಕಾರದ ಬಗ್ಗೆ ಅತೃಪ್ತಿ ಮಾಡುತ್ತಿದೆ, ಹೆಚ್ಚಾಗುತ್ತಿದೆ. ಆಡಳಿತ ಇದೇ ರೀತಿ ಇನ್ನು ಮುಂದಕ್ಕೂ ಮುಂದುವರಿದುದೇ ಆದರೆ ಪರಿಸ್ಥಿತಿ ಬಹಳ ಬೇಗ ಹದಗೆಟ್ಟು ಅದು ಬಹಳ ಕಠಿಣಪರಿಸ್ಥಿತಿಗೆ ಬರಬಹುದು: ಈಗಾಗಲೇ ಬಂಗಾಳ, ಒರಿಸ್ಸಾ ಮತ್ತು ಆಂಧ್ರ ನಾಡುಗಳಲ್ಲಿ ಗರಾಜೆ ಹೆಚ್ಚಾಗುತ್ತಿದ್ದು ಅದರ ಹಿನ್ನೆಲೆಯಲ್ಲಿ ಪ್ರತಿಗಾಮಿ ಶಕ್ತಿಗಳು, ದೊಡ್ಡ ದೊಡ್ಡ ಭೂಮಾಲೀಕರುಗಳೂ ಸೇರಿಕೊಂಡು ಅವರಲ್ಲಿ ಈ ಗುತ್ತೇದಾರರುಗಳೂ ಸೇರಿ ಕೋಟಿಗಟ್ಟಲೆ ಹಣವನ್ನು ಸುರಿದು ಜನರನ್ನು ಕೂಡಿಹಾಕಿ ಅಲ್ಲಲ್ಲಿ ಗರಾಜೆಗಳನ್ನು ಎಬ್ಬಿಸುತ್ತಿದ್ದಾರೆ. ಇಂಥಾ ಒಂದು ಸ್ಪಷ್ಟವಾದ ಚಿತ್ರವನ್ನು ನಾವು ಈ ದಿವಸ ಆಂಧ್ರ ನಾಡಿನಲ್ಲಿ ಕಾಣ ಬಹುದು. ದೇಶದಲ್ಲಿ ಇಂಥಾದ್ದೆಲ್ಲಾ ತಲೆ ಎತ್ತುವುದಕ್ಕೆ ಸರ್ಕಾರದವರೇ ಕಾರಣ. ಇಂದಿನ ಸರ್ಕಾರ ಬಾಯಲ್ಲಿ 'ಗರೀಬೀ ಹಟಾವೋ' ಘೋಷಣೆಗಳನ್ನು ಹೊರಡಿಸುತ್ತಿದೆಯೇ ವಿನಾ ಅವನ್ನು ಕಾರ್ಯರೂಪದಲ್ಲಿ ತರುವುದಕ್ಕೆ ಈ ಸರ್ಕಾರ ತಯಾರಿಲ್ಲ. ಅದುದರಿಂದ ಪರಿಸ್ಥಿತಿ ವಿಕೋಪಕ್ಕೆ ತಿರುಗುವ ಮುನ್ನ ಸರ್ಕಾರದವರು ಕಾರ್ಯ ಕ್ರಮಗಳನ್ನು ಕೂಡಲೆ ಕೈಗೊಳ್ಳ ಬೇಕೆಂದು ಇಲ್ಲವಾದಲ್ಲಿ ಈ ಸರ್ಕಾರದ ಅಸ್ತಿತ್ವಕ್ಕೇ ಧಕ್ಕೆ ಬರಬಹುದೆಂದು ಎಚ್ಚರಿಕೆಯನ್ನು ನೀಡಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

5-30 P.M.

† ಶ್ರೀ ಪಿ. ಎಂ. ಬಂಗಿ (ಜಮಖಂಡಿ).—ಮಾನ್ಯ ಸಭಾಪತಿಗಳೇ, ಇವತ್ತಿನದಿವಸ ರಾಜ್ಯ ಪಾಲರ ಭಾಷಣದ ಬಗ್ಗೆ ವಂದನಾರ್ಪಣಾ ಗೊತ್ತುವಳಿಯೇನು ತಂದಿದಾರೆ ಅದಕ್ಕೆ ನಾನು ಬೆಂಬಲವನ್ನು ಕೊಡುತ್ತಿದ್ದೇನೆ. ಈಗಿನ ನಮ್ಮ ಸಮಾಜವಾದ ಸರ್ಕಾರ ಸಮಾಜದಲ್ಲಿ ಸಮಾನತೆಯನ್ನು ನಿರ್ಮಾಣ ಮಾಡುವುದಕ್ಕೆ ಬೇರೆ ಬೇರೆ ಕಾರ್ಯಕ್ರಮಗಳನ್ನು ಹಾಕಿ ಆ

(ಶ್ರೀ ಪಿ. ಎಂ. ...)

ಉದ್ದೇಶದಿಂದ ಸಾಕಷ್ಟು ಮುಂದುವರೆಯುತ್ತಿದೆ. ಹಿಂದೆ ಯಾವ ಸರಕಾರಕ್ಕೂ ಆಗದ ಕೆಲಸವನ್ನು ನಮ್ಮ ಸರಕಾರ ಮಾಡುವುದಕ್ಕೆ ಪ್ರಾರಂಭವಾಡಿದೆ. ಅದರಲ್ಲೂ ಮಹತ್ವದ ಕೆಲಸವೆಂದರೆ ಬರಗಾಲ ಪರಿಸ್ಥಿತಿ ಇರುವಾಗ ಜನತೆಗೆ ಖಾಯಂ ಅದ ಪರಿಹಾರ ಒದಗಿಸಲು ಇರಿಗೇಷನ್ ಪ್ರಾಜೆಕ್ಟುಗಳಾದ ಮಲಪ್ರಭ, ಘಟಪ್ರಭ ಯೋಜನೆ ಮುಂತಾದುವನ್ನು ಕೂಡಲೆ ಜಾರಿಗೆ ತಂದು ನಿಜವಾಗಿಯೂ ಉತ್ತಮವಾದ ಕೆಲಸಮಾಡಿದ್ದಾರೆ. ಅಲ್ಲದೆ ರಾಜ್ಯಪಾಲರ ಭಾಷಣದಲ್ಲಿ ಸಮಾವೇಷವಾಗದಿರುವ ಅನೇಕ ಕೆಲಸಗಳನ್ನು ಸರಕಾರ ಕೈಕೊಂಡಿದೆ, ಮುಂದೆ ಕೂಡ ಕೈಕೊಳ್ಳುವ ಭರವಸೆಯಿದೆ.

ಪವರ್ ಲೂಮಿನವರು ಟೆಕ್ಸ್‌ಟೈಲ್ ಕಮಿಷನರ ಆಜ್ಞೆ ವಿರುದ್ಧವಾಗಿ ಬಣ್ಣದ ಬಟ್ಟೆಗಳನ್ನು ತಯಾರಿಸುತ್ತಿದ್ದರು, ಇದರಿಂದ ಶ್ರೀಮಂತರು ಅತಿ ಶ್ರೀಮಂತರಾದರು. ಸರಕಾರಿ ಆಜ್ಞೆಯನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ನೋಡಿಕೊಳ್ಳಲು ಬೇರೆಂದು ಪಾಟೀಲ ಸರಕಾರಕ್ಕಾಗಲೀ ರಾಜ್ಯಪಾಲರ ಆದಳಿತದ ಕಾಲದಲ್ಲಾಗಲಿ ಸರಿಯಾದ ಪ್ರಯತ್ನ ಮಾಡಲಿಲ್ಲ. ಮಾಡಿದರೂ ಸರಿಯಾದ ಫಲಿತಾಂಶ ದೊರೆಯಲಿಲ್ಲ. ಆದರೆ ನಮ್ಮ ಸರಕಾರ ಬಂದ ಕೂಡಲೆ ಟೆಕ್ಸ್‌ಟೈಲ್ ಕಮಿಷನರ ಆಜ್ಞೆಯನ್ನು ಕಡ್ಡಾಯವಾಗಿ ಕಟ್ಟುನಿಟ್ಟಾಗಿ ಜಾರಿಗೆ ತರಬೇಕು, ಕೈಮಗ್ಗದ ಉದ್ಯೋಗದಲ್ಲಿ ನಿರತರಾಗಿರುವವರಿಗೆ ಮತ್ತು ಬಡ ನೇಕಾರರಿಗೆ ಅನುಕೂಲವಾಗಬೇಕು ಎಂದು ಮನಸ್ಸುಮಾಡಿ ಸೂಕ್ತ ಕ್ರಮ ತೆಗೆದುಕೊಂಡಿತು. ಇದರ ಪರಿಣಾಮವಾಗಿ ಪವರ್ ಲೂಮಿನವರು ಮೈಸೂರು ರಾಜ್ಯದಲ್ಲಿ ಕೇವಲ ಬಿಳಿಬಟ್ಟೆಗಳನ್ನು ನೇಯುತ್ತಿದ್ದಾರೆ, ಬಣ್ಣದ ಬಟ್ಟೆ ನೇಯುತ್ತಿಲ್ಲ. ಇದರಿಂದ 10 ಲಕ್ಷ ನೇಕಾರರು ತಮ್ಮ ಜೀವನವನ್ನು ಸುಗಮವಾಗಿ ಸಾಗಿಸಲು ಅವಕಾಶವಾಗಿದೆ. ಇದು ಸಂತೋಷಕರವಾದ ವಿಚಾರ.

ಶಿಕ್ಷಣದ ವಿಷಯ ತೆಗೆದುಕೊಂಡರೆ ಸುಮಾರು ಮನ್ನೂರು ಜೂನಿಯರ್ ಕಾಲೇಜುಗಳನ್ನು ತೆರೆಯಲ್ಪಟ್ಟಿವೆ, ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ ಮತ್ತು ಕಾಲೇಜು ಶಿಕ್ಷಣದಲ್ಲಿ ಪ್ರಗತಿ ಸಾಧಿಸಲ್ಪಟ್ಟಿದೆ. ಇದೂ ಕೂಡ ಸಂತೋಷದ ಸಂಗತಿಯಾಗಿದೆ.

ಕುಡಿಯುವ ನೀರಿನ ಸೌಕರ್ಯಕ್ಕಾಗಿ ವಿಶೇಷ ಗಮನ ಕೊಡುತ್ತಿದ್ದಾರೆ. ಆದರೆ ಇನ್ನೂ ಸಾಕಷ್ಟು ಅನುಕೂಲವಾಗಿಲ್ಲ. ಬಿಜಾಪುರ ಜಿಲ್ಲೆಗೆ ಇಂದು ನೀರಿನ ತೊಂದರೆಯಾಗಿದೆ. ಅದನ್ನು ನಿವಾರಣೆಮಾಡಲು ಕೃಷ್ಣಾ ನದಿ ನೀರೆ ತ್ನೊದಗಿಸಲು ಕ್ರಮ ಕೈಕೊಳ್ಳಬೇಕೆಂದು ಮನವಿ ಮಾಡಿದ್ದೇವೆ. ಕೃಷ್ಣ ನದಿ ದಡದಲ್ಲಿರುವ ಹಳ್ಳಿಗಳಿಗೆ ಆನದಿಯ ನೀರನ್ನು ಸರಬರಾಜು ಮಾಡಲು ಕ್ರಮ ಕೈಕೊಳ್ಳಬೇಕು.

ಕೃಷ್ಣಾ ಪೀಡಿತ ಪ್ರದೇಶಗಳಲ್ಲಿ ಅಂದರೆ ಕೃಷ್ಣ ನದಿಯ ಪಶ್ಚಿಮ ಮತ್ತು ಪೂರ್ವ ಭಾಗಗಳಲ್ಲಿ Barrage ಗಳನ್ನು ಕಟ್ಟಿ ಲಿಫ್ಟ್ ಇರಿಗೇಷನ್ ಸೌಕರ್ಯ ಮಾಡಿಕೊಡಬೇಕೆಂದು ಎನಂತಿ ಮಾಡಿದ್ದೇವೆ. ಅದರಂತೆ ಸರಕಾರ ಬೇರೆಬೇರೆ ಸ್ಥಳಗಳಲ್ಲಿ ಲಿಫ್ಟ್ ಇರಿಗೇಷನ್ನಿಗೆ ಅವಕಾಶಮಾಡಿ ಇನ್ನೊಂದು ತಿಂಗಳಲ್ಲಿ ಸಾಕಷ್ಟು ಬೆಳೆ ತೆಗೆಯಲು ಅವಕಾಶಮಾಡಲಿದೆ. ಈ ಸಂಬಂಧದಲ್ಲಿ ನಾನು ಸರಕಾರಕ್ಕೆ ಸೂಚಿಸುವುದು ಮೈನರ್ ಇರಿಗೇಷನ್ ಹೆಚ್ಚು ಆಗಬೇಕಾಗಿದ್ದರೆ ಬಿಜಾಪುರ ಜಿಲ್ಲೆಯಲ್ಲಿ ಸುಮಾರು ಇಪ್ಪತ್ತು ಲಿಫ್ಟ್ ಇರಿಗೇಶನ್ ಯೋಜನೆ ಮಾಡುವುದಿದೆ, ಅದರ ಪೈಕಿ ಹತ್ತಾರು ಕೈಗೊಳ್ಳಲಾಗದೆ, ಇನ್ನು ಮುಂದೆ ಇನ್ನೂ ಹೆಚ್ಚು ಕೈಕೊಳ್ಳಬೇಕೆಂದು ಹೇಳುತ್ತೇನೆ. ಈ ಪ್ರಕಾರ ಸರಕಾರ ಈ ವಿಷಯದಲ್ಲಿ ಹೆಚ್ಚು ಗಮನಕೊಟ್ಟು ಲಿಫ್ಟ್ ಇರಿಗೇಷನ್ ಸೌಕರ್ಯ ಒದಗಿಸಬೇಕೆಂದು ಬಿನ್ನವಿಸುತ್ತೇನೆ.

ಲೆಜಿಸ್ಲೇಷನ್ ವಿಷಯ ತೆಗೆದುಕೊಂಡರೆ ಮೈಸೂರು ಭೂನುಧಾರಣಾ ಕಾನೂನಿನ ಬಗ್ಗೆ ಜಾಯಿಂಟ್ ಸೆಲೆಕ್ಟ್ ಕಮಿಟಿ ವರದಿ ಬಂದ ಕೂಡಲೆ ಅದನ್ನು ಈ ಸಭೆಯಲ್ಲಿ ಮಂಡಿಸುವರೆಂದು ರಾಜ್ಯಪಾಲರ ಭಾಷಣದಲ್ಲಿ ಉಲ್ಲೇಖವಿದೆ. ಅದರಿಂದ ಗೇಣಿದಾರರಿಗೆ ಕೂಡಲೆ ಪರಿಹಾರ ಸಿಕ್ಕುವುದೆಂದು ಭಾವಿಸುತ್ತೇನೆ.

ಬೇರೆ ಬೇರೆ ವಿಷಯಗಳಲ್ಲಿ ರಾಜ್ಯಪಾಲರ ಭಾಷಣದಲ್ಲಿ ಸಾಕಷ್ಟು ಕಾರ್ಯಕ್ರಮಗಳಿರುವುದನ್ನು ಸೂಚಿಸಲಾಗಿದೆ. ಅವು ಜಾರಿಯಲ್ಲಿ ಬರುತ್ತವೆ ಎಂದು ಭಾವಿಸಿ ವಂದನಾರ್ಪಣೆಯ ಸೂಚನೆಗೆ ಸಂಪೂರ್ಣ ಬೆಂಬಲ ಕೊಟ್ಟು ನನ್ನ ಭಾಷಣವನ್ನು ಮುಗಿಸುತ್ತೇನೆ.

† ಶ್ರೀ ಎಚ್. ಎಸ್. ಸಿದ್ದಪ್ಪ (ಆರಸೀಕೆರೆ).—ಮಾನ್ಯ ಸಭಾಪತಿಗಳೇ, ಈಗ ನಾನು ರಾಜ್ಯಪಾಲರ ಭಾಷಣದ ಮೇಲೆ ಮಂಡಿಸಿರುವ ವಂದನಾ ನಿರ್ಣಯದ ಮೇಲೆ ಮಾತನಾಡುವುದಕ್ಕೆ ನಿಂತಿ

ದ್ದೇನೆ. ರಾಜ್ಯಪಾಲರ ಭಾಷಣವನ್ನು ನಾನು ಸಂಪೂರ್ಣವಾಗಿ ವಿರೋಧಿಸುತ್ತಾ ನನ್ನ ಅಭಿಪ್ರಾಯಗಳನ್ನು ಸಭೆಯ ಮುಂದಿಡುತ್ತೇನೆ. ಕಳೆದ ಒಂದು ವರ್ಷದಿಂದ ಹಾಗೂ ಮುಂದೆ ಈ ಸರಕಾರವೆಂಬ ಒಂದು ನಾಟಕ ಕಂಪನಿಯು ಹೇಗೆ ಆಡಳಿತ ನಡೆಸುತ್ತದೆ ಎಂಬುದನ್ನು ಹೇಳುತ್ತೇನೆ ಈ ಕಂಪನಿಯ ಹೆಸರು ಇಂದಿರಾ ಕೃಪಾಪೋಷಿತ ನಾಟಕಸಭಾ (ರಿಜಿಸ್ಟರ್ಡ್). ಇದರ ಮಾಲೀಕರು ಶ್ರೀ ಡಿ. ದೇವರಾಜ ಅರಸ್, ಬಿ. ಎಸ್. ಸಿ, ಎಂ. ಎಲ್. ಎ., ಇವರ ಮಾಲೀಕತ್ವದಲ್ಲಿ ಅನೇಕ ನಟ ನಟಿಯರು ಭಾಗವಹಿಸಿ ಈ ನಾಟಕವನ್ನು ಪ್ರತಿದಿನ ಒಂದು ಗಂಟೆಗೆ, ಪ್ರತಿ ಶನಿವಾರ 9 ಗಂಟೆಗೆ ಪ್ರಾರಂಭಿಸಿ ಶ್ರೀ ಡಿ. ದೇವರಾಜ ಅರಸರ ಅಧ್ಯಕ್ಷತೆಯಲ್ಲಿ ನಡೆಸುವರು. ಇದನ್ನು ವಿಮರ್ಶೆಮಾಡಿ ಇದರ ಬಗ್ಗೆ ರಾಜ್ಯಪಾಲರು ಅವರ ವಿಮರ್ಶೆಯೇನಿದೆ ಅದನ್ನು ಮಾಲೀಕರು ಹೇಳಿದಹಾಗೆ ಈ ಸಭೆಯಲ್ಲಿ ಒದಿದ್ದಾರೆ. ಈ ನಾಟಕದಲ್ಲಿ ಅನೇಕ ಉನ್ನತ ನಟವರ್ಗವಿದೆ. ಆ ನಟವರ್ಗ ಯಾವುದಂದರೆ ನಟಭಯಂಕರ ಶ್ರೀ ಚನ್ನಬಸಪ್ಪನವರು, ಕಲಭೀಮ ಶ್ರೀ ಸಿದ್ಧವೀರಪ್ಪನವರು, ನಯನಮನೋಹರ ಶ್ರೀ ಕೃಷ್ಣೂರವರು; ಚಿತ್ರ ವಿಚಿತ್ರ ಪಟು ಶ್ರೀ ಬಸವಲಿಂಗಪ್ಪನವರು. ನಿಶ್ಚಿತ ಶ್ರೀ ಹುಚ್ಚ ಮಾಸ್ತಿಗೌಡರು, ಧನಪ್ರಾಲ ಶ್ರೀ ಪೂರ್ಪಡೆಯವರು, ಅನ್ನಪೂರ್ಣ ಶ್ರೀಮತಿ ಇಂದಿರಾಜೋರವರು ಇನ್ನೂ ಅನೇಕ ನಟನಟಿಯರಿಂದ ಒಡಗೂಡಿ ಈ ನಾಟಕ ನಡೆಯುತ್ತಿದೆ.

ಇನ್ನು ಉಳಿದ ನಟನಟಿಯರ ಒಡಗೂಡಿ ನಾಟಕ ನಡೆಯುತಿದೆ. ನಾಟಕದ ಹೆಸರು ಹನುಕರು ಅಥವಾ ಗೋಮಾಂಸ. ಇದನ್ನು ಮಹಾಜನ ನೋಡಲು ತಪ್ಪಬೇಡಿ, ಮರೆಯಬೇಡಿ, ಮರೆತು ಮರುಗಬೇಡಿ, ಮರೆತು ಪೋಸಹೋಗಬೇಡಿ. ಈ ನಾಟಕದ ವಿಮರ್ಶೆಯನ್ನು ಮಾನ್ಯ ರಾಜ್ಯಪಾಲರು ಮಾಡಿದ್ದಾರೆ. ಇದರ ನಿರ್ದೇಶಕರು ಮಾರ್ಗದ ಮಲ್ಲಪ್ಪನವರು ಮತ್ತು ಆರ್ ಗುಂಡೂರಾಯರು; ಸ್ಟೇಜಿನ ನಿರ್ದೇಶಕರು, ಸಂಗೀತ ನಿರ್ದೇಶನದೊಂದಿಗೆ ನಾಟಕ ನಡೆಯುತ್ತಿದೆ. ಇದನು ನಾವು ನೋಡಲಿಕ್ಕೆ ಕುಳಿತಿದ್ದೇವೆ.

Mr. DEPUTY SPEAKER —It is neither humrous nor reasonable.

Sri H. S SIDDAPPA.—This is also a drama going on. Now I am coming to the point after this preamble and introduction. ಚುನಾವಣೆ ನಡೆಯುವಾಗ ಮಹಾಜನತೆಗೆ ಏನು ವಚನ ಕೊಟ್ಟಿದ್ದರೋ ಅದನ್ನು ಏನು ಮಾಡಿದ್ದಾರೆ ? ಎಲ್ಲಾನ ಜನರಿಗೆ ನದಾವಕಾಶ, ನಮಾನಾವಕಾಶ ಮಾಡಿಕೊಡುತ್ತೇವೆಂದು, ಸಮೃದ್ಧಿಯ ಜೀವನ ನಡೆಸುವುದಕ್ಕೆ ಅವಕಾಶ ಮಾಡಿಕೊಡುತ್ತೇವೆಂದು ಹೇಳಿ ಜನರಿಂದ ಮತ ಪಡೆದರು. ಆದು ಸಮೃದ್ಧಿಯ ಜೀವನ ಯಾರಿಗೆ ನಡೆಯುತ್ತಿದೆ ! ಪಕ್ಷದ ಆಧಾರದ ಮೇಲೆ ಇರುವವರಿಗೆ ನಡೆಯುತ್ತಿದೆ. ಯಾರು ನಿಮ್ಮ ಪಕ್ಷವನ್ನು ಬೆಂಬಲಿಸುತ್ತಾರೋ ಅವರಿಗೆ ಸಮೃದ್ಧಿಯ ಜೀವನ ನಡೆಯುತ್ತಿದೆ. ಇವತ್ತಿನ ದಿವಸ ವಿರೋಧ ಪಕ್ಷದವರನ್ನು ಬೆಂಬಲಿಸಿದ ಜನರನ್ನು ಒಂದೇ ಸಮನೆ ತುಳಿಯುವ ಕೆಲಸ ನಡೆಯುತ್ತಿದೆ. ಉದಾಹರಣೆ ಕೊಡುವುದಾದರೆ, ಜಿಲ್ಲೆ ಜಿಲ್ಲೆಯ ಅಧಿಕಾರಿಗಳಿಗೆ ಮಂತ್ರಿಗಳು ಹೋಗಿ ನಮ್ಮ ಪಕ್ಷದವರು ಏನು ಹೇಳುತ್ತಾರೋ ಅದನ್ನು ಮಾಡಬೇಕು, ಇತರೆ ಪಕ್ಷದವರು ಹೇಳಿದರೆ ಆ ಕೆಲಸ ಮಾಡಕೂಡದು ಎಂದು ಗುಟ್ಟಾಗಿ ಹೇಳುತ್ತಿದ್ದಾರೆ.

Sri D. B. KALMANKAR.—This is far from truth.

Sri H. S. SIDDAPPA.—That is his view. This is my view ಸ್ಥಳೀಯ ಸಂಸ್ಥೆಗಳಲ್ಲಿ ವಿರೋಧ ಪಕ್ಷದವರು ಇದ್ದರೆ ಅಂಥ ಸ್ಥಳೀಯ ಸಂಸ್ಥೆಗಳನ್ನು ಸರ್ಕಾರ ತನ್ನ ವಶಕ್ಕೆ ತಗೆದುಕೊಂಡಿದೆ. ಪೊನ್ನೆ ಮಂತ್ರಿಗಳು ಒಂದು ಉದಾಹರಣೆ ಕೊಟ್ಟರು, ಅನೇಕ ಲಕ್ಷಾಂತರ ರೂಪಾಯಿ ಲಕ್ಷಾನು ಆಗಿ ಹಣ ತಿನ್ನುವ ಸೊಸೈಟಿಗಳನ್ನು ಇನ್ನೂ ಪರಿಶೀಲನೆ ಮಾಡುತ್ತೇವೆ ಎಂದು. ಇದಕ್ಕಿಂತ ಹೆಚ್ಚಿನ ಉದಾಹರಣೆ ಬೇಕೆ ?

ಇನ್ನು ಆಹಾರವಸ್ತುವನ್ನು ವಿತರಣೆ ಮಾಡತಕ್ಕ ವಿಷಯ. ಬಹುತೇಕವಾಗಿ ಎಲ್ಲೆಲ್ಲಿ ವಿರೋಧ ಪಕ್ಷದವರು ಇದ್ದಾರೆ ಅಲ್ಲಿ ಎಲ್ಲಾ ಕಡೆ ಇದೇ ವ್ಯವಸ್ಥೆ ಇದೆಯೆಂದು ನನಗನ್ನಿಸುತ್ತದೆ. ನನ್ನ ಜಿಲ್ಲೆಯಲ್ಲಿ ಅತ್ಯಂತ ದೊಡ್ಡ ತಾಲ್ಲೂಕಿಗೆ ಆಹಾರವನ್ನು ವಿತರಣೆ ಮಾಡುವಾಗ ಜಿಲ್ಲಾಧಿಕಾರಿಗಳು ಸಾಕಷ್ಟು ತಾರತಮ್ಯ ಮಾಡಿದ್ದಾರೆ. ಆಲೂರು ಸಣ್ಣ ತಾಲ್ಲೂಕಿಗೆ ಎಷ್ಟು ಆಹಾರಧಾನ್ಯವನ್ನು ಕೊಟ್ಟಿದ್ದಾರೆ ಅದರ ಕಾಲು ಭಾಗವನ್ನು ಅರಸೀಕೆರೆ ತಾಲ್ಲೂಕಿಗೆ ಕೊಟ್ಟಿಲ್ಲ, ಎನ್ನುವ ಸ್ಪಷ್ಟ ಚಿತ್ರವನ್ನ ಅಧ್ಯಕ್ಷರ ಮುಖಾಂತರ ಸರ್ಕಾರದ ಗಮನಕ್ಕೆ ತರುತ್ತೇನೆ. ವಿರೋಧ ಪಕ್ಷದವರು ಅರಿಸಿ ಬಂದಿರುವ ಕಡೆ ತಮಗೆ ಸಾಕಷ್ಟು ಮತ ಬಂದಿದೆ.

Sri D. B. KALMANKAR.—Provision has been made according to requirments. He can say that provision to different talukas is more or less the same. There is no such discrimination.

ಶ್ರೀ ಎಂ. ಸೂರ್ಯನಾರಾಯಣಗೌಡ,—ಅರಸೀಕೆರೆಯಲ್ಲಿ ಮಳೆಯಾಗಿದೆ.

ಶ್ರೀ ಎಚ್. ಎಸ್. ಸಿದ್ಧಪ್ಪ.—ಅರಸೀಕೆರೆಯನ್ನು ಡ್ರೌಟ್ ಏರಿಯಾ ಎಂದು ನಿಮ್ಮ ಸರ್ಕಾರ ನಿರ್ಧಾರ ಮಾಡಿದ್ದಾರೆ. ಈ ರೀತಿ ತಾರತಮ್ಯ ತೋರಿಸುವುದಾದರೆ ಕಳಕಳಿಯಿಂದ ಅಧ್ಯರ ಮುಖಾಂತರ ಆಡಳಿತ ಪಕ್ಷವನ್ನು ಕೇಳುತ್ತೇನೆ, ಒಂದೇ ವಿಧವಾದ ವ್ಯವಸ್ಥೆ ನಡೆಯುತ್ತದೆ ಎಂದು ನಿಮ್ಮ ಹೃದಯ ಮುಟ್ಟಿಕೊಂಡು ಹೇಳಿ ಎಂದು. ಗ್ರಾಮಾಂತರ ಪ್ರದೇಶದಲ್ಲಿ ಲಕ್ಷಾಂತರ ಸ್ಟೂಟುಗಳನ್ನು ವಿತರಣೆ ಮಾಡಿದ್ದೇವೆ ಎಂದು ಹೇಳಿದರು. ಸ್ಟೂಟು ಇಲ್ಲದವರಿಗೆ, ಮನೆ ಇಲ್ಲದವರಿಗೆ ಯಾವ ರೀತಿ ಸ್ಟೂಟುಗಳನ್ನು ವಿತರಣೆ ಮಾಡಿದ್ದಾರೆ ಎಂದರೆ, ಸರ್ಕಾರಿ ಜಾಗದಲ್ಲಿ ಸ್ಟೂಟು ಕೊಡುವುದಕ್ಕೆ ಬದಲಾಗಿ ಹಳ್ಳಿಗಳಲ್ಲಿ ವಿರೋಧಪಕ್ಷದವರ ಮನೆಗಳ ಹಿತ್ತಲುಗಳಿಗೆ, ಅಧಿಕಾರಿಗಳನ್ನು ಪ್ರಚೋದನೆ ಮಾಡಿ, ಮಾರ್ಕ್ ಮಾಡಿಸಿ ಆಕ್ರಮಿಸುವ ಹಾಗೆ ಮಾಡಿದ್ದಾರೆ; ಮತ್ತು ಅಂಥ ಜನರನ್ನು ಕೋರ್ಟಿಗೆ ಹೋಗುವ ಹಾಗೆ ಮಾಡಿದ್ದಾರೆ. ಎಲ್ಲಿ ಇದೆ ನೀತಿ ? ಒಂದಲ್ಲ, ಎರಡಲ್ಲ, ಹತ್ತಲ್ಲ ಇಂಥ ನಿದರ್ಶನಗಳು; ಬೇಕಾದಷ್ಟು ಇವೆ. ಸರ್ಕಾರದ ನಿವೇಶನ ಇದೆ, ಬಡಬಗ್ಗರಿಗೆ ಕೊಡಿ, ಅದು ಬಿಟ್ಟು ಹೀಗೆ ಮಾಡುವುದರಿಂದ ಏನು ಆಗುತ್ತದೆ ಎಂದರೆ, ಬಡವರಿಗೆ ನಿವೇಶನ ಸಿಕ್ಕಿದ ಹಾಗೆ ಆಗುವುದಿಲ್ಲ. ಜನಸಾಮಾನ್ಯರಿಗೆ ಕಿರುಕುಳ ತಪ್ಪುವುದಿಲ್ಲ; ನಿಮಗೆ ಕೀರ್ತಿ ಬರುವುದಿಲ್ಲ. ಚುನಾವಣೆಯ ಕಾಲದಲ್ಲಿ ಕೊಟ್ಟ ಆಶ್ವಾಸನೆಯನ್ನು ನಡೆಸುವುದಕ್ಕಾಗುತ್ತದೆಯೇ ? ಪ್ರಚೋದನೆಯನ್ನು ಮಾಡಿ ಕೊಂಡು ಸಂಕಷ್ಟ ಪರಿಸ್ಥಿತಿಗೆ ಜನಗಳನ್ನು ಎಳೆಯುತ್ತೀರಿ. ಹಾಗೆ ಮಾಡುವುದನ್ನು ನಿರ್ಧಾರ ಮಾಡಿದ ಪಕ್ಷದಲ್ಲಿ ಅಧ್ಯಕ್ಷರ ಮೇರೆ ತಕ್ಕಡಿ ಇದೆ, ಅದನ್ನು ಕೆತ್ತು ಬನಾಡಿ : ರಾಜ್ಯಭಾರ ನಡೆಸಿ, ನಿಮಗೆ ಇಷ್ಟಬಂದ ಹಾಗೆ ಮಾಡಿ ನಾವು ಕೇಳುವುದಿಲ್ಲ. ಇದು ತರವಲ್ಲ. ಇನ್ನು ನನ್ನ ಗೆಳೆಯರಾದ ಶ್ರೀಮಾನ್ ಕೃಷ್ಣನ್ ಅವರು ಊರ್ ಮತ್ತು ಷೀಪ್ ಡೆವಲಪ್‌ಮೆಂಟ್ ಬೋರ್ಡು, ಲೆದರ್ ಬೋರ್ಡ್ ಬಗ್ಗೆ ಪ್ರಸ್ತಾಪ ಮಾಡಿದರು. ಅದರ ಬಗ್ಗೆ ನಾನು ಹೆಚ್ಚು ಪ್ರಸ್ತಾಪಮಾಡುವುದಿಲ್ಲ. ಒಂದು ಮಾತು ಹೇಳುತ್ತೇನೆ, ಮುಖ್ಯಮಂತ್ರಿಗಳು ಈ ಸದನದಲ್ಲಿ ಎಚ್. ಬಿ. ಲಕ್ಷ್ಮಣ್ ಅವರ ಪ್ರಶ್ನೆಗೆ ಉತ್ತರ ಕೊಡುತ್ತಾ ಹೇಳಿದರು, ವಿರೋಧ ಪಕ್ಷದವರನ್ನು ಆ ಸಂಸ್ಥೆಯಲ್ಲಿ ಹಾಕಿಸ್ಥೇವೆ ಎಂದು, ಅವರು ಆ ಲಿಸ್ಟನ್ನು ಓದಿಗಿನಲ, ಅದರಲ್ಲಿ ಒಂದು ಪರ್ಸೆಂಟ್ ವಿರೋಧ ಪಕ್ಷದವರನ್ನು ಖಾಸಗಿ ಸಂಸ್ಥೆಗಳಲ್ಲಿ ಹಾಕಿಲ್ಲ. ಊರ್ ಷಿಪ್ ಬೋರ್ಡ್, ಲೆದರ್ ಬೋರ್ಡುಗೆ ಸಂಬಂಧಪಟ್ಟ ಕಾನೂನನ್ನು ಇನ್ನೂ ರಚನೆ ಮಾಡಿಲ್ಲ, ಆಗಲೇ ಬೋರ್ಡನ್ನು ರಚನೆ ಮಾಡಿ ಅನಾನ್ಸ್ ಮಾಡಿ ಬಿಟ್ಟಿರಿ, ಸಂಬಳ ಸಾರಿಗೆ ಮತ್ತೊಂದು ಮೀಟಿಂಗ್ ಖರ್ಚು, ಆಫೀಸು ಮಾಡಿದ್ದೀರಿ, ಅವರು ಏನು ಕೆಲಸ ಮಾಡಬೇಕು ಎನ್ನುವುದು ಇನ್ನೂ ಆಕ್ಟಿನ ರೂಪದಲ್ಲಿ ಕೊಡಲಿಲ್ಲ. ಮೊದಲೇ ಏತಕ್ಕೆ ಇದನ್ನು ರಚನೆ ಮಾಡಿದಿರಿ ? ಮೊದಲು ಕಾನೂನನ್ನು ರಚನೆ ಮಾಡಿ, ಊರ್ ಷೀಪ್ ಬೋರ್ಡ್, ಲೆದರ್ ಬೋರ್ಡ್, ಆಕ್ಟ್ ಏನು ಇದೆಯೋ ಅದನ್ನು ಮಾಡಿ ನಂತರ ಇಂಥ ಸಂಸ್ಥೆಗಳು ಆಕ್ಟಿನಲ್ಲಿರುವ ರೀತಿ ಕೆಲಸ ಮಾಡಿ ಎಂದು ಹೇಳಿದರೆ ಅದರಲ್ಲಿ ಅರ್ಥವಿದೆ. ಆಕ್ಟ್ ರಚನೆಯಾಗದೆ, ಬೋರ್ಡು ರಚನೆ ಮಾಡಿ ಸಂಬಳ ಸಾರಿಗೆಗಳನ್ನು ನಿಮ್ಮ ಪ್ರೀತಿ ಪಾತ್ರರನ್ನು 60 ವರ್ಷದ ಪುಂಡುಕರನ್ನು ಚೇರ್ಮನ್ ಮಾಡಿ, ಕೊಡುತ್ತಿದ್ದೀರಿ. ವಿದೇಶದಲ್ಲಿ ತಜ್ಞತೆ ಪಡೆದು ಪಿ. ಎಚ್. ಡಿ, ಮಾಡಿರತಕ್ಕ ಜನರು ಇದ್ದಾರೆ ಅವರು ನಿಮ್ಮ ಕಣ್ಣಿಗೆ ಕಾಣುವುದಿಲ್ಲ. ಏತಕ್ಕೆ ಕಾಣುವುದಿಲ್ಲ ? ಪಕ್ಷದ ಆಧಾರದ ಮೇಲೆ ಆಡಳಿತ ನಡೆಸುತ್ತಿದ್ದೀರಿ ಎಂದು ಆಪಾದನೆ ಮಾಡುತ್ತೇನೆ. ಇದು ಸರಿಯಲ್ಲ.

ಒಬ್ಬ ಸದಸ್ಯರು.—ತಾರತಮ್ಯ ಮಾಡಿದ್ದಾರೆ ಎಂದು ಹೇಳಿದಿರಿ, ಕಾರವಾರ ಜಿಲ್ಲೆಯಲ್ಲಿ (ಆರ್) ಕಾಂಗ್ರೆಸ್ಸಿನವರು ಬಂದರೂ ಸಹ ಸ್ಥಳೀಯ ಸಂಸ್ಥೆಯಲ್ಲಿ ಸಂಸ್ಥಾ ಕಾಂಗ್ರೆಸ್ಸಿನವರನ್ನು ನಾಮಿನೇಟ್ ಮಾಡಿರುವುದು ಕಂಡು ಬರುತ್ತದೆ.

ಶ್ರೀ ಎಚ್. ಎಸ್. ಸಿದ್ಧಪ್ಪ.—ಆವರು ಹೇಳುವುದಕ್ಕೆ ಉದಾಹರಣೆ ಕೊಡುವುದಾದರೆ ನಿವೃತ್ತ ಯೋಧರ ಮಂಡಲಿ ಇದೆ. ನಾಟಕದ ಮಾಲೀಕರಾದ ದೇವರಾಜ ಅರಸ್ ಅವರು ಇದಕ್ಕೆ ಚೇರ್ಮನ್ನರು.

ಆವರು ಸೇಲರ್ಸ್ ಸೋಲ್ಜರ್ಸ್ ಆರ್ಮೀಸ್ ಬೋರ್ಡಿನ ಚೇರ್‌ಮನ್‌ಆಗಿ ನಾಟಕ ಕಂಪನಿಯ ಮಾಲೀಕರು ಮತ್ತು ನಟಸ್ಯರನ್ನು ಇದರಲ್ಲಿ ತೆಗೆದುಕೊಂಡಿದ್ದಾರೆ. ಸೇಲರ್ಸ್ ಸೋಲ್ಜರ್ಸ್ ಆರ್ಮೀಸ್ ಬೋರ್ಡಿಗೆ ಈ ಸಭೆಯಲ್ಲಿ ಇರತಕ್ಕ ನಿವೃತ್ತ ಯೋಧರಿಗೆ ಪ್ರತಿನಿಧ್ಯ ಕೊಡುವ ಸೌಜನ್ಯತೆ ಸರ್ಕಾರಕ್ಕೆ ಬರಲಿಲ್ಲ. ಮಂತ್ರಿಗಳು ಹೇಳಿದರು, ಇವೊತ್ತು ಎಲ್ಲರಿಗೂ ಕೊಡುತ್ತೇವೆ, ಎಲ್ಲರಿಗೂ

ಪೋಲೀಸ್ ಇಲಾಖೆಯ ಬಗ್ಗೆ ಒಂದು ಮಾತು. ಶ್ರೀ ಹಂಜಿಶಿವಣ್ಣನವರ ಪ್ರಶ್ನೆಗೆ ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಡುತ್ತ, ಪೋಲೀಸ್ ಇಲಾಖೆಯಲ್ಲಿ ದಕ್ಷತೆಯನ್ನು ಹೆಚ್ಚಿಸಬೇಕು ಎನ್ನುವುದನ್ನು ಒಪ್ಪುತ್ತೇನೆ, ಹೆಚ್ಚಿಸುತ್ತಿದ್ದೇವೆಂದೂ ಹೇಳಿದರು. ಹೇಗೆ ಎಂದರೆ ಯುವಕರನ್ನು ನೇಮಕ ಮಾಡುತ್ತಿದ್ದೇವೆ, ನೌಕರಿಗೆ ಸೇರಿಸಿಕೊಳ್ಳಬೇಕಾದರೆ ಎಸ್. ಎಸ್. ಎಲ್. ಸಿ. ಕ್ವಾಲಿಫಿಕೇಷನ್ ಇರುವವರನ್ನು ನೇಮಕ ಮಾಡಿ ಹಳಬರನ್ನು ರೀಫ್ರೇಸ್ ಮಾಡುವ ವ್ಯವಸ್ಥೆಯನ್ನು ಮಾಡುತ್ತಿದ್ದೇವೆ ಎಂದು ಹೇಳಿದರು. ಇಲಾಖೆಯಲ್ಲಿ ಹಳಬರು ಪೋಲೀಸ್ ಇನ್‌ಸ್ಪೆಕ್ಟರ್ ಮತ್ತು ಸಬ್‌ಇನ್‌ಸ್ಪೆಕ್ಟರಾಗಿ ಕುಳಿತಿರುತ್ತಾರೆ. ಎಸ್. ಎಸ್. ಎಲ್. ಸಿ, ಆಗಿರುವ ಕಾನ್‌ಸ್ಟೇಬರ್ ಮತ್ತು ಹೆಡ್ ಕಾನ್‌ಸ್ಟೇಬರ್‌ಗಳನ್ನು ಹಾಕಿದರೂ ಕೂಡ ಅವರಿಗೆ ಪಾಠ ಹೇಳಿಕೊಡುತ್ತಾರೆ. ಬೆಪ್ಪೇ, ಹೀಗಲ್ಲ ಪೋಲೀಸ್ ಕೆಲಸ ಮಾಡುವುದು, ಯಾರಾದರೂ ಸಿಕ್ಕಿದರೆ, ಬುರುಡೆ ಒಡೆದು ಒಳಗೆ ಹಾಕಿದರೆ ನೀನು ಹೇಳಿದ ಹಾಗೆ ಕೇಳುತ್ತಾನೆ ಎಂದು ಹೇಳುತ್ತಾರೆ. ನಾನು ನಿಜಹೇಳಬೇಕೆಂದರೆ ಪೋಲೀಸ್ ಇಲಾಖೆಯ ಆಡಳಿತವನ್ನು ಶ್ರೀಮಾನ್ ಚನ್ನಬಸಪ್ಪನವರ ಕೈಗೆ ಕೊಡಬೇಕಾಗಿತ್ತು, ಅವರು ಯಶಸ್ವಿಯಾಗಿ ನಿರ್ವಹಿಸುತ್ತಿದ್ದರು. ಪೋಲೀಸ್ ಇಲಾಖೆ ಬಹಳ ಕೆಟ್ಟು ಹೋಗಿದೆ, ನೀತಿಯೇ ಇಲ್ಲ, ಒಂದು ಅವಿವೇಕ ನಡೆದಿರುವುದನ್ನು ಸಭೆಯ ಗಮನಕ್ಕೆ ತರುತ್ತೇನೆ. ಇಬ್ಬರು ಹೆಣ್ಣು ಮಕ್ಕಳು ಯಾವುದೋ ಕಾರ್ಲೇಜಿನಲ್ಲಿ ಓದುವವರು ರೈಲಿನಲ್ಲಿ ಹೋಗುತ್ತಿದ್ದರು. ಮೂರು ಜನ ಪುಂಡರು ಅವರ ಜಾಕೆಟ್ ಹರಿದು ಅವರನ್ನು ಪೊಲೆಸ್ಟ್ ಮಾಡಿ ಬಂದರು; ಇದು ನಡೆದದ್ದು ಹೊಳೇನರಸೀಪುರದಲ್ಲಿ ಪೋಲೀಸಿನವರು ಈ ಕೇಸು ರಿಜಿಸ್ಟರ್ ಮಾಡಲು ಎಂಟು ದಿವಸ ತೆಗೆದುಕೊಂಡರು. ಅವರು ಮಂಡಲ ಕಾಂಗ್ರೆಸ್ ಅಧ್ಯಕ್ಷರಿಗೆ ಸಂಬಂಧಪಟ್ಟವರು. ಅರಸೀಕೆರೆ ತಾಲ್ಲೂಕು ಆಫೀಸಿಗೆ ಒಬ್ಬ ಡಿ. ಸಿ. ಸಿ. ಸದಸ್ಯರು ಹೋಗಿ ತಹಸೀಲ್ದಾರರಿಗೆ ಯಾವುದೋ ರಿಕಾರ್ಡ್ ನೋಡಬೇಕೆಂದು ತರಿಸಿ, ಆ ರಿಕಾರ್ಡ್ ಅವರ ಅಣ್ಣನಿಗೆ ವಿರೋಧವಾಗಿ ಇದ್ದುದರಿಂದ ಅದನ್ನು ಹರಿದು ಬಿಸಾಡಿ ಬಂದರು. ಅಮಲ್ದಾರರು ಹೆದರಿಕೊಂಡು ಅದರ ಬಗ್ಗೆ ರಿಪೋರ್ಟ್ ಮಾಡಿಲ್ಲ.

## Statement by the Minister for Public Works and Electricity

*re*: **Arrangements made for taking the people from Scarcity Areas to Kalinadi project.**

ಶ್ರೀ ಎಚ್. ಎಂ. ಚನ್ನಬಸಪ್ಪ.—ಮಾನ್ಯ ಅಧ್ಯಕ್ಷರ ಮೂಲಕ ಸಭೆಗೆ ಒಂದು ವಿಷಯವನ್ನು ನಾನು ತಿಳಿಸಲು ಅಪೇಕ್ಷಿಪಡುತ್ತೇನೆ. ನಾನು ಈ ಒಂದು ಹೇಳಿಕೆ ಕೊಟ್ಟು 400 ಜನರಿಗೆ ಹೊರಡುವುದಕ್ಕೆ 8 ಬಸ್ಸುಗಳನ್ನೂ ಮತ್ತು ಆ ಜನರಿಗೆ ಊಟದ ವ್ಯವಸ್ಥೆಯನ್ನೂ, ಮಧ್ಯೆ ದಾರಿಯಲ್ಲಿ ಊಟ ಮಾಡುವುದಕ್ಕೆ ವ್ಯವಸ್ಥೆಯನ್ನೂ ಮಾಡಿದ್ದೇನೆ ಎಂದು ಅರಿಕೆಮಾಡಿದೆ. ಈಚೆಗೆ ನನಗೆ ಬಂದಿರುವ ವರದಿಯ ಪ್ರಕಾರ, ಯಾವ ಕಾರಣದಿಂದಲೋ, ಗೊತ್ತಾಗಲಿಲ್ಲ, ಯಾರು ನಾವೆಲ್ಲ ಹೋಗುತ್ತೇವೆಂದು ರುಜು ಮಾಡಿ ಕೊಟ್ಟಿದ್ದರು ಅವರುಗಳು ಈಗ ಎಲ್ಲೆಲ್ಲೋ ಹೋಗಿದ್ದಾರೆ ಮತ್ತು ಅದು ಕೈಗೆ ಸಿಕ್ಕುತ್ತಿಲ್ಲ. ಬಹುಶಃ ಅವರು ಮನೆಗಳಿಗೆ ಹೋಗಿರಬಹುದು. ಅವರ ಬಗ್ಗೆ ಬಹಳ ಕಳಕಳಿ ಇರತಕ್ಕ ಶ್ರೀಮಾನ್ ವಾಟಾಳ್ ನಾಗರಾಜ್, ಶ್ರೀ ಬಾಪೂಗೌಡ ಮುಂತಾದವರಲ್ಲಿ ಸರ್ಕಾರದ ಪರವಾಗಿ ನಾನು ಒಂದು ಮನವಿ ಮಾಡುತ್ತೇನೆ. ಎಲ್ಲಾ ವ್ಯವಸ್ಥೆ ಮಾಡಿಬಿಟ್ಟಿದ್ದೇವೆ, ಹಣ ಪೋಲಾಗಿ ಹೋಗಿ ಬಿಟ್ಟೀತು. ಅವರಿಗೆ ತೊಂದರೆಯಾಗಿದೆ. ನಮ್ಮ ಅಧಿಕಾರಿಗಳನ್ನು ತಮ್ಮ ಸಹಾಯಕ್ಕೆ ಕೊಡುತ್ತೇನೆ. ತಾವು ನಮಗೆ ಸಹಾಯ ಮಾಡಿಕೊಡಿ. ಎಷ್ಟು ಹೊತ್ತು ಆದರೂ ಕೂಡ ಬಸ್ಸುಗಳನ್ನು ಹೊರಡಿಸುವುದಕ್ಕೆ ಸರ್ಕಾರ ಸಿದ್ಧವಾಗಿದೆ. ಮ್ಯಾನೇಜಿಂಗ್ ಡೈರೆಕ್ಟರನ್ನು ಕರೆಸಿದ್ದೆ. ಇವರನ್ನು ರಿಸೀವ್ ಮಾಡಿಕೊಳ್ಳುವುದಕ್ಕೆ ವ್ಯವಸ್ಥೆಯಾಗಿದೆ. ಆದುದರಿಂದ ನಮ್ಮ ಸ್ನೇಹಿತರಾದ ವಾಟಾಳ್ ನಾಗರಾಜ್, ಬಾಪುಗೌಡರು ಮತ್ತು ವಿಶ್ವನಾಥರೆಡ್ಡಿಯವರಿಗೆ ಈ ಮೂರು ಜನರಿಗೂ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ. ತಮಗೆ ವೆಹಿಕರ್ ವ್ಯವಸ್ಥೆ ಮಾಡಿಕೊಡುತ್ತೇವೆ. ಸ್ವಲ್ಪ ಸಹಾಯಮಾಡಿ. ಜನಗಳಿಗೂ ಎಲ್ಲಿ ಹೋಗಿದ್ದರೂ ವ್ಯವಸ್ಥೆ ಮಾಡಿಕೊಡಬೇಕು. ನಾನು ಸರ್ಕಾರದ ಪರವಾಗಿ ಸಹಕಾರ ಕೊಡಬೇಕೆಂದು ತಮ್ಮನ್ನು ಕೇಳಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ಇಲ್ಲಿ ಲಿಸ್ಟ್ ಕಳುಹಿಸುವುದಕ್ಕೆ ಪ್ರಯತ್ನಪಟ್ಟೆವು, ಇಲ್ಲಿ ಇರತಕ್ಕವರಿಗೆ ಕೆಲಸ ಇರ್ಲೆ ಸಿಕ್ಕಿದರೆ ಅಂಥವರು ಉಳಿದುಕೊಳ್ಳಲಿ, ಸಿಕ್ಕದೆ ಇರುವವರನ್ನು ಕಳುಹಿಸಿ ಕೊಡೋಣ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಕೆಲಸ ಸಿಕ್ಕಿರತಕ್ಕವರು ಯಾರೂ ಹೋಗುವುದಿಲ್ಲ. ಕೆಲಸ ಇಲ್ಲದೆ ಇರತಕ್ಕವರನ್ನು ಕಳುಹಿಸಿಕೊಡೋಣ. ಎಷ್ಟು ಹೊತ್ತೇ ಆಗಲಿ 10 ಗಂಟೆವರೆಗೆ ನಾನು ಎಚ್ಚರವಾಗಿರುತ್ತೇನೆ. ಅದರಲ್ಲಿ ಕೆಲವರು ಹೋಗುವುದಿಲ್ಲ ಎಂದು ಹೇಳಿದರು. ಅಡ್ರೆಸ್ ಮಾಡಿದ ಮೇಲೆ ಹೋಗುತ್ತೇವೆಂದು ಹೇಳಿದರು. ಅವರಿಗೆ ಊಟಕ್ಕೆ ಬೆಲಗಾವ್ ಕೊಟ್ಟು ವ್ಯವಸ್ಥೆ ಮಾಡಿದ ಮೇಲೆ ಈಚೆಗೆ 1150 ಜನ ರುಜು ಕೊಟ್ಟಿದ್ದಾರೆ. ಕೊಟ್ಟವರಲ್ಲಿ ಯಾರ ಯಾರ ಚಿತಾವಣೆ ಯಿಂದ ಏನೇನು ನಡೆಯುತ್ತೋ ಗೊತ್ತಿಲ್ಲ. ಒಬ್ಬರೂ ಪತ್ತೆಯಿಲ್ಲ.

ಶ್ರೀ ವಾಟಾಳ್ ನಾಗರಾಜ್.—ಚಿತಾವಣೆ ಸುದ್ದಿ ಗೊತ್ತಿಲ್ಲ. ಎಲ್ಲಿ ಹೋಗಿದ್ದಾರೆ ಗೊತ್ತಿಲ್ಲವೆ? ನಿಮ್ಮ ಕೈಯ್ಯಲ್ಲಿ ಪೋಲೀಸ್ ಇರಾಖೆ ಇದೆ. ಎಲ್ಲಿ ಹೋದರು ಯಾವಕಡೆಗೆ ಹೋದರು ಗೊತ್ತಾಗುವುದಿಲ್ಲವೇ? ಇಷ್ಟು ಎರ್ಲಾ ಮಾತನಾಡುತ್ತೀರಿ ಚಿತಾವಣೆ ಎಂದು ಎರ್ಲಾ ಮಾತನಾಡುತ್ತೀರಿ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನೂರಾರು ಜನ ಎಲ್ಲಿ ಹೋದರು ಎಂದು ಪತ್ತೆ ಮಾಡುವುದು ಕಷ್ಟ ಚೈಮ್ ಇದ್ದರೆ ಆದನ್ನು ಮಾಡುತ್ತೇವೆ. ವಿಭೂತಿಪುರದ ಪರಿಚಯ ತಮಗೆ ಇದೆ, ಅವ್ರಿಂದ ತಾವುಗಳು ಸಹಾಯ ಮಾಡಿಕೊಟ್ಟು ಯಾರು ಯಾರು ಹೋಗುತ್ತಾರೆ ಅವರನ್ನು ಇವೊತ್ತು ರಾತ್ರಿ ಕಳುಹಿಸಿ ಕೊಟ್ಟರೆ ಉಪಕಾರ ಮಾಡಿದಂತಾಗುತ್ತದೆ. ಒಂದು ವೇಳೆ ಸಹಾಯ ಮಾಡುವುದಿಲ್ಲ, ಎಂದರೆ ಒತ್ತಾಯ ಮಾಡುವುದಕ್ಕೆ ಆಗುವುದಿಲ್ಲ. ನಾನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

I make an appeal to you. We are anxious to rise to your expectations and meet the demand for employment to the people who are in need of employment. The very fact that within the course of 2½ hours we have made arrangements indicates the *bona fides* of the Government. Therefore I appeal to you.

ಶ್ರೀ ಕಾಗೋಡು ತಿಮ್ಮಪ್ಪ.—ಇದರ ಮೇಲೆ ಮತ್ತೆ ನಾಳೆ ಪ್ರಸ್ತಾಪ ಮಾಡಬೇಕಾಗುತ್ತದೆ. ತಾವು ಜನರನ್ನು ಹುಡುಕುವುದಕ್ಕೆ ವ್ಯವಸ್ಥೆ ಮಾಡಿದ್ದೀರಿ. ಈಗ ಜನರೇ ಇಲ್ಲ ಎಂದು ಹೇಳಿದರೆ ಏನು ಅರ್ಥ?

Sri H. M. CHANNABASAPPA.—It is a case for heart-reaching and introspection.

Mr. DEPUTY SPEAKER.—The House now stands adjourned meet tomorrow at 1 P.M.

---

*The House adjourned at Fifteen Minutes past Six of the Clock to meet again at One of the Clock on Tuesday the 20th February, 1973.*

WD 19323—GPB—550+10—19 1-74